ಬುಧವಾರ, ಆಗಸ್ಟ್ 10, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿದಾಯದತ್ತ...

ಅಮೆರಿಕದ ಟೆನಿಸ್ ತಾರೆ ಸೆರೆನಾ ವಿಲಿಯಮ್ಸ್ ಅವರು ವೃತ್ತಿಜೀವನಕ್ಕೆ ವಿದಾಯ ಘೋಷಿಸುವ ಇಂಗಿತವನ್ನು ಮಂಗಳವಾರ ವ್ಯಕ್ತಪಡಿಸಿದ್ದಾರೆ



ಬುಧವಾರ, ಆಗಸ್ಟ್ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 221 | ಪುಟ 18

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ನಾವು ಹೇಗೆ ಅನ್ಯಗ್ರಹಜೀವಿಗಳ ಶೋಧದಲ್ಲಿ ಉತ್ಸುಕರಾಗಿದ್ದೇವೆಯೋ, ಅಂತೆಯೇ ಅನ್ಯಗ್ರಹಜೀವಿಗಳು ಅದೇ ಪ್ರಯತ್ನದಲ್ಲಿರಬಹುದು



ಅನುಭವ ಮಂಟಪ ಹಸಿರು ಹೊದ್ದ ಕೋಸ್ಟರೀಕ ಮರ ಬೆಳೆಸಿದರೆ ಭತ್ಯೆ

ಸಿ.ಎಂ ಸ್ಥಾನ: ಕಾಂಗ್ರೆಸ್–ಬಿಜೆಪಿ ವಾಕ್ಸಮರ 7

ಶಿಂದೆ ಸಂಪುಟಕ್ಕೆ 18 ಶಾಸಕರ ಸೇರ್ಪಡೆ 6

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹54,050 (ಬೆಂಗಳೂರು) ▲	₹60,400 (ಬೆಂಗಳೂರು) ▲

ಬಿಹಾರದಲ್ಲಿ ಸಂಚಲನ • ಮಹಾಮೈತ್ರಿ ಸೇರಿದ ಜೆಡಿಯು • ಸಿ.ಎಂ ಆಗಿ ಇಂದು ಪ್ರಮಾಣ

ಮತ್ತೆ ಎನ್‌ಡಿಎ ತೊರೆದ ನಿತೀಶ್

ಪಟ್ನಾ (ಪಿಟಿಐ): ಬಿಹಾರ ರಾಜಕಾರಣವು ಚುರುಕಿನ ರಾಜಕೀಯ ಬೆಳವಣಿಗೆಗಳಿಗೆ ಮಂಗಳವಾರ ಸಾಕ್ಷಿಯಾಯಿತು. ಬಿಜೆಪಿಯ ಸಖ್ಯ ತೊರೆದ ಜೆಡಿಯು ನಾಯಕ ನಿತೀಶ್ ಕುಮಾರ್ ಅವರು ರಾಜ್ಯಪಾಲ ಫಗು ಚೌಹಾಣ್ ಅವರನ್ನು ಎರಡೆರಡು ಬಾರಿ ಭೇಟಿಯಾದರು. ಮೊದಲ ಬಾರಿ ಭೇಟಿಯಾಗಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದರು. ಬಳಿಕ, ಆರ್‌ಜೆಡಿ ನೇತೃತ್ವದ ಮಹಾಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಹಕ್ಕು ಮಂಡಿಸಿದರು. ಅದರಂತೆ ಅವರು ಬುಧವಾರ ಮಧ್ಯಾಹ್ನ 2 ಗಂಟೆಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಪಡೆದುಕೊಳ್ಳಲಿದ್ದಾರೆ. ನಿತೀಶ್ ಅವರು ತಮಗೆ 164 ಶಾಸಕರ ಬೆಂಬಲ ಇದೆ ಎಂದಿದ್ದಾರೆ. ಈ ಶಾಸಕರ ಪಟ್ಟಿಯನ್ನು ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. ವಿಧಾನಸಭೆಯ ಸದಸ್ಯ ಬಲ 242. ಸರಳ ಬಹುಮತಕ್ಕೆ 123 ಶಾಸಕರ ಬೆಂಬಲ ಬೇಕಿದೆ.

ನಿತೀಶ್ ಅವರು 2017ರವರೆಗೆ ಮಹಾಮೈತ್ರಿಕೂಟದ ಭಾಗವಾಗಿಯೇ ಇದ್ದರು. ಆದರೆ, 2017ರಲ್ಲಿ ಮಹಾಮೈತ್ರಿಕೂಟ ತೊರೆದು ಬಿಜೆಪಿ ನೇತೃತ್ವದ ಎನ್‌ಡಿಎ ಸೇರಿಕೊಂಡರು. ಮಹಾಮೈತ್ರಿಕೂಟಕ್ಕೆ ಸೇರುವ ಮೊದಲೂ ಅವರು ಎನ್‌ಡಿಎಯಲ್ಲಿಯೇ ಇದ್ದರು. ಈಗ, 9 ವರ್ಷಗಳಲ್ಲಿ ಎರಡನೇ ಬಾರಿಗೆ ಬಿಜೆಪಿ ಜತೆಗಿನ ನಂಟನ್ನು ಅವರು ಕಡಿದುಕೊಂಡಿದ್ದಾರೆ. ನರೇಂದ್ರ ಮೋದಿ ಅವರನ್ನು ಪ್ರಧಾನಿ ಹುದ್ದೆಯ ಅಭ್ಯರ್ಥಿ ಎಂದು ಬಿಜೆಪಿ 2013ರಲ್ಲಿ ನಿರ್ಧರಿಸಿದಾಗ ನಿತೀಶ್ ಅವರು ಎನ್‌ಡಿಎ ತೊರೆದಿದ್ದರು.



ನಿತೀಶ್ ಕುಮಾರ್ ಅವರು ಆರ್‌ಜೆಡಿ ಮುಖಂಡರಾದ ತೇಜ್ ಪ್ರತಾಪ್ ಮತ್ತು ತೇಜಸ್ವಿ ಯಾದವ್ ಜೊತೆ ಮಂಗಳವಾರ ಕಾಣಿಸಿಕೊಂಡರು –ಪಿಟಿಐ ಚಿತ್ರ

ಮಂಗಳವಾರದ ಬೆಳವಣಿಗೆ

ಬೆಳಿಗ್ಗೆ 11; ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಮನೆಯಲ್ಲಿ ಜೆಡಿಯು ಶಾಸಕರು ಹಾಗೂ ಸಂಸದರ ಸಭೆ

11.15; ಬಿಹಾರ ವಿಧಾನಸಭೆಯ ಪ್ರತಿಪಕ್ಷ ಹಾಗೂ ವಿಧಾನಸಭೆಯಲ್ಲಿ ಅತಿದೊಡ್ಡ ಪಕ್ಷ ಎನಿಸಿರುವ ಆರ್‌ಜೆಡಿ ಶಾಸಕರ ಸಭೆ

ಮಧ್ಯಾಹ್ನ 1; ಮಾಜಿ ಮುಖ್ಯಮಂತ್ರಿ ರಾಬ್ಡಿದೇವಿ ನಿವಾಸದಲ್ಲಿ ಕಾಂಗ್ರೆಸ್, ಎಡಪಕ್ಷಗಳನ್ನು ಒಳಗೊಂಡ ಆರ್‌ಜೆಡಿ ನೇತೃತ್ವದ ಮಹಾಮೈತ್ರಿಕೂಟದ ಸಭೆ;- ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅವರನ್ನು ಬೆಂಬಲಿಸುವ ಪತ್ರಕ್ಕೆ ಸಹಿ

ಸಂಜೆ 4; ಬಿಹಾರದ ರಾಜ್ಯಪಾಲರನ್ನು ಭೇಟಿ ಮಾಡಿ ರಾಜೀನಾಮೆ ನೀಡಿದ ನಿತೀಶ್ ಕುಮಾರ್. 'ಎನ್‌ಡಿಎ ಮುಖ್ಯಮಂತ್ರಿ' ಹುದ್ದೆಗೆ ರಾಜೀನಾಮೆ ನೀಡಿದ್ದಾಗಿ ಹೇಳಿಕೆ

4.45; ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಜೊತೆ ಮಾತುಕತೆ ನಡೆಸಲು ರಾಬ್ಡಿದೇವಿ ನಿವಾಸಕ್ಕೆ ತೆರಳಿದ ನಿತೀಶ್ ಕುಮಾರ್


5.20; ಜೆಡಿಯು ಹಾಗೂ ಇತರ ಪಕ್ಷಗಳ ಬೆಂಬಲ ಪತ್ರದೊಂದಿಗೆ, ತೇಜಸ್ವಿ ಯಾದವ್ ಜೊತೆ ಮತ್ತೆ ರಾಜಭವನಕ್ಕೆ ಮರಳಿದ ನಿತೀಶ್ ಕುಮಾರ್

6:00; ಎಂಟನೇ ಬಾರಿ ಬಿಹಾರದ ಮುಖ್ಯಮಂತ್ರಿಯಾಗಿ ಸರ್ಕಾರ ರಚಿಸಲು ಹಕ್ಕು ಮಂಡಿಸಿದ ನಿತೀಶ್ ಕುಮಾರ್

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

ಪ್ರಬಲ ಮಹಾಮೈತ್ರಿಕೂಟ



ಮಹಾಮೈತ್ರಿಕೂಟ 165

ಜೆಡಿಯು 45	ಎಡಪಕ್ಷಗಳು 16
ಆರ್‌ಜೆಡಿ 80	ಕಾಂಗ್ರೆಸ್ 19
ಎಚ್‌ಎಎಂ 4	
ಪಕ್ಷೇತರ 1	ಎಐಎಂಐಎಂ 1

ಜೆಡಿಯು ಒಡೆಯಲು ಯತ್ನ ಆರೋಪ ನಿರಾಕರಿಸಿದ ಬಿಜೆಪಿ

ಜೆಡಿಯುವನ್ನು ಒಡೆಯಲು ಬಿಜೆಪಿ ಯತ್ನಿಸಿದೆ ಎಂದು ಜೆಡಿಯು ಮುಖಂಡರು ಆರೋಪಿಸಿದ್ದಾರೆ. ಆದರೆ ಬಿಜೆಪಿ ಇದನ್ನು ಅಲ್ಲಗಳೆದಿದೆ.

ಜೆಡಿಯು ಪಕ್ಷವನ್ನು ದುರ್ಬಲಗೊಳಿಸಿ, ತಮ್ಮನ್ನು ಮೂಲೆಗುಂಪು ಮಾಡಲು ಬಿಜೆಪಿ ಯತ್ನಿಸುತ್ತಿದೆ ಎಂದು ಶಾಸಕರು ಮತ್ತು ಸಂಸದರ ಸಭೆಯಲ್ಲಿ ನಿತೀಶ್ ಹೇಳಿದ್ದಾರೆ ಎಂದು ತಿಳಿದು ಬಂದಿದೆ. ಚಿರಾಗ್ ಪಾಸ್ವಾನ್ ಅವರನ್ನು ತಮ್ಮ ವಿರುದ್ಧ ಮೊದಲು ಎತ್ತಿಕಟ್ಟಲಾಯಿತು. ಬಳಿಕ, ಜೆಡಿಯು ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಆರ್.ಸಿ.ಪಿ ಸಿಂಗ್ ಅವರನ್ನೂ ತಮ್ಮ ವಿರುದ್ಧ ಬಳಸಿಕೊಂಡರು ಎಂದೂ ಅವರು ಹೇಳಿದ್ದಾರೆ.

ಆರ್.ಸಿ.ಪಿ ಸಿಂಗ್ ಅವರನ್ನು ತಮ್ಮ ಒಪ್ಪಿಗೆ ಇಲ್ಲದೆಯೇ ಕೇಂದ್ರದಲ್ಲಿ ಸಚಿವನನ್ನಾಗಿ ಮಾಡಲಾಯಿತು ಎಂಬ ಮಾತನ್ನೂ ನಿತೀಶ್ ಹೇಳಿದ್ದಾರೆ. ಹಾಗಾಗಿಯೇ ಅವರ ರಾಜ್ಯಸಭಾ ಸದಸ್ಯತ್ವದ ಅವಧಿ ಮುಗಿದ ಬಳಿಕ, ಮತ್ತೊಂದು ಅವಕಾಶ ನೀಡಲು ನಿತೀಶ್ ನಿರಾಕರಿಸಿದ್ದರು. ಆರ್.ಸಿ.ಪಿ ಸಿಂಗ್ ಅವರನ್ನು ಬಳಸಿಕೊಂಡು ಜೆಡಿಯು ಪಕ್ಷವನ್ನು ಒಡೆಯುವ ಪ್ರಯತ್ನ ನಡೆಯುತ್ತಿದೆ ಎಂಬ ಸುದ್ದಿ ಇತ್ತೀಚೆಗೆ ಹರಿದಾಡಿತ್ತು.

ಬಿಜೆಪಿ ಮತ್ತು ಜೆಡಿಯು ನಡುವಣ ಸಂಬಂಧ ಇತ್ತೀಚಿನ ದಿನಗಳಲ್ಲಿ ಚೆನ್ನಾಗಿ ಇರಲಿಲ್ಲ. ಜಾತಿ ಸಮೀಕ್ಷೆ, ಅಗ್ನಿಪಥ ಯೋಜನೆ, ಜನಸಂಖ್ಯಾ ನಿಯಂತ್ರಣದಂತಹ ವಿಚಾರಗಳಲ್ಲಿ ಎರಡೂ ಪಕ್ಷಗಳು ಭಿನ್ನ ನಿಲುವು ಪ್ರದರ್ಶಿಸಿವೆ.

ನಿತೀಶ್ ಅವರ ಒಪ್ಪಿಗೆ ಇಲ್ಲದೆಯೇ ಸಿಂಗ್ ಅವರನ್ನು ಸಚಿವನನ್ನಾಗಿ ಮಾಡಲಾಗಿದೆ ಎಂಬುದು ಸುಳ್ಳು. ಜೆಡಿಯು ಪಕ್ಷವನ್ನು ಒಡೆಯಲು ಬಿಜೆಪಿ ಯತ್ನಿಸಿತ್ತು ಎಂಬುದೂ ಸುಳ್ಳು ಎಂದು ಬಿಜೆಪಿ ಮುಖಂಡ ಸುಶೀಲ್ ಕುಮಾರ್ ಮೋದಿ ಹೇಳಿದ್ದಾರೆ.

ನೋಂದಣಿ ಲೋಪ: ಶುಲ್ಕ ಹಿಂಪಡೆಯಲು ಪರದಾಟ

2021–22ರಲ್ಲಿ ಅರ್ಜಿ ಸಲ್ಲಿಸಿದವರ ಸಂಖ್ಯೆ 50 ಸಾವಿರಕ್ಕೂ ಹೆಚ್ಚು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಮುದ್ರಾಂಕ ಕಾಗದ ಖರೀದಿ, ನೋಂದಣಿ ಶುಲ್ಕ ಪಾವತಿಯಲ್ಲಿನ ಲೋಪಗಳಿಂದ ರಾಜ್ಯದ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಆಸ್ತಿಗಳ ನೋಂದಣಿ ಸಾಧ್ಯವಾಗದೆ ಇರುವವರು ಹಣ ಹಿಂಪಡೆಯಲು ವರ್ಷಗಟ್ಟಲೆ ಬೆಂಗಳೂರಿಗೆ ಅಲೆದಾಡುವಂತಾಗಿದೆ.

ನೋಂದಣಿ ಸಮಯದ ಸಣ್ಣ, ಪುಟ್ಟ ಲೋಪಗಳ ಪರಿಣಾಮ 2021-22ನೇ ಸಾಲಿನಲ್ಲಿ ಹಣ ಮರಳಿಸುವಂತೆ ಅರ್ಜಿ ಸಲ್ಲಿಸಿದವರ ಸಂಖ್ಯೆ 50 ಸಾವಿರಕ್ಕೂ ಹೆಚ್ಚು. ಸರ್ಕಾರ ಮರುಪಾವತಿಸಬೇಕಾದ ಮೊತ್ತ ₹100 ಕೋಟಿಗೂ ಅಧಿಕ. ಎರಡು ವರ್ಷಗಳ ಹಿಂದೆ ಸಲ್ಲಿಕೆಯಾಗಿದ್ದ ಅರ್ಜಿಗಳು ಇನ್ನೂ ಇತ್ಯರ್ಥವಾಗಿಲ್ಲ. ಸುಮಾರು ₹300 ಕೋಟಿಗೂ ಅಧಿಕ ಮೊತ್ತ ಬಾಕಿ ಉಳಿದಿದೆ.

ಮನೆ, ನಿವೇಶನ, ಜಮೀನು, ವಾಣಿಜ್ಯ ಕಟ್ಟಡ ಸೇರಿ ಯಾವುದೇ ಸ್ಥಿರಾಸ್ತಿಗಳ ಖರೀದಿ, ಮಾರಾಟ ಒಪ್ಪಂದ, ಉಯಿಲು, ದಾನಪತ್ರಗಳ ನೋಂದಣಿಗೆ ಸಾರ್ವಜನಿಕರು ನಿಗದಿತ ಮುದ್ರಾಂಕ, ನೋಂದಣಿ, ಸ್ಕ್ಯಾನಿಂಗ್ ಶುಲ್ಕ ಪಾವತಿಸಿ ನೋಂದಣಿ ಮಾಡಿಸಬೇಕು. ಗ್ರಾಮೀಣ ಪ್ರದೇಶದ ಆಸ್ತಿಗಳ ನೋಂದಣಿಗೆ ಆಸ್ತಿ ಮೌಲ್ಯದ ಶೇ 6.65, ನಗರ ಪ್ರದೇಶಗಳಿಗೆ ಶೇ 6.60ರಷ್ಟು ಶುಲ್ಕ ಪಾವತಿಸಬೇಕು.

ಶುಲ್ಕ ಪಾವತಿಸುವಾಗ ಆಯಾ ವ್ಯಾಪ್ತಿಯ ಉಪ ನೋಂದಣಾಧಿಕಾರಿ ಕಚೇರಿ ಖಾತೆಗೆ ಹಣ ಜಮೆ ಮಾಡಬೇಕು. ಪ್ರತಿ ಖಾತೆಗೂ ಪ್ರತ್ಯೇಕ 16 ಸಂಖ್ಯೆಗಳು ಇರುತ್ತವೆ. ಒಂದು ಸಂಖ್ಯೆ ವ್ಯತ್ಯಾಸವಾದರೂ ಬೇರೆ ಉಪ ನೋಂದಣಾಧಿಕಾರಿ ಖಾತೆಗೆ ಜಮೆಯಾಗುತ್ತದೆ. ಜಮೆಯಾದ ಕಚೇರಿ ವ್ಯಾಪ್ತಿಯಲ್ಲಿ ಆಸ್ತಿ ಇರದ ಕಾರಣ ನೋಂದಣಿ ಆಗದು. ಆಗ ನೋಂದಣಿಗೆ ಮತ್ತೆ ಶುಲ್ಕ ಪಾವತಿಸಬೇಕು.

ನೋಂದಣಿದಾರರ ಹೆಸರು, ಸರ್ವೆ ನಂಬರ್ ವ್ಯತ್ಯಾಸಗಳು ಮತ್ತಿತರ ಕಾರಣಗಳಿಗೂ ನೋಂದಣಿ ಪ್ರಕ್ರಿಯೆ ವ್ಯತ್ಯಯವಾಗಲಿದೆ. ಇಂತಹ ಪ್ರಕರಣಗಳಲ್ಲಿ ಹಣ ಮರಳಿ ಪಡೆಯಲು ಜಿಲ್ಲಾ ನೋಂದಣಾಧಿಕಾರಿಗೆ ಅರ್ಜಿ ಸಲ್ಲಿಸಬೇಕು. ದಾಖಲೆ ಪರಿಶೀಲನೆ ನಂತರ ಬೆಂಗಳೂರಿನ ನೋಂದಣಿ ಮಹಾ ಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರಿಗೆ ಕಳುಹಿಸಲಾಗುತ್ತಿದೆ. ಅಲ್ಲಿಂದ ಅನುಮತಿ ದೊರೆತ ನಂತರ ಸಂಬಂಧಿಸಿದವರ ಖಾತೆಗೆ ಹಣ ಜಮೆಯಾಗುತ್ತದೆ. ಈ ಪ್ರಕ್ರಿಯೆ ವಿಳಂಬದಿಂದ ಜನರು ಹೈರಾಣಾಗುತ್ತಿದ್ದಾರೆ.

'ಬೆಂಗಳೂರಿನ ಪದ್ಮನಾಭನಗರದಲ್ಲಿ ಈಚೆಗೆ ಮನೆ ಖರೀದಿಸಿದ್ದೆವು. ಮುದ್ರಾಂಕ, ನೋಂದಣಿ ಶುಲ್ಕ ₹ 7.85 ಲಕ್ಷ ಪಾವತಿಸುವಾಗ ಸಿಬ್ಬಂದಿ ಮಾಡಿದ ತಪ್ಪಿನಿಂದ ಹಣ ಜಿಲ್ಲಾ ನೋಂದಣಾಧಿಕಾರಿ ಖಾತೆಗೆ ಜಮೆಯಾಗಿತ್ತು. ಮತ್ತೆ ಅಷ್ಟು ಹಣ ಹೊಂದಿಸಲು ಸಾಧ್ಯವಾಗದೆ ನೋಂದಣಿ ಮುಂದೂಡಿದೆವು. 16 ತಿಂಗಳ ಸತತ ಅಲೆದಾಟದ ನಂತರ ಕೊನೆಗೂ ಜಮೆಯಾಗಿದೆ. ಇಂತಹ ಸಮಸ್ಯೆಗೆ ತಕ್ಷಣ ಪರಿಹಾರ ದೊರಕುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು' ಎನ್ನುತ್ತಾರೆ ವೈದ್ಯರಾದ ಡಾ.ನಾಗರಾಜ್.

ಸಾಕಾರಗೊಳ್ಳದ ಏಕಗವಾಕ್ಷಿ ಯೋಜನೆ

ರಾಜ್ಯದ ಯಾವುದೇ ಭಾಗದ ಆಸ್ತಿಯನ್ನು ಯಾವುದೇ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಲು ಅನುಕೂಲವಾಗುವಂತೆ ಏಕಗವಾಕ್ಷಿ ಯೋಜನೆ ಜಾರಿಗೆ ತರುವ ಸರ್ಕಾರದ ಯೋಜನೆ ಸಾಕಾರಗೊಂಡಿಲ್ಲ. ಬೆಂಗಳೂರಿನ ಶಿವಾಜಿನಗರ, ರಾಜಾಜಿನಗರ, ಜಯನಗರ, ಬಸವನಗುಡಿ, ಗಾಂಧಿನಗರ ವ್ಯಾಪ್ತಿಯಲ್ಲಿನ ಆಯಾ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಮಾತ್ರ ಈ ಸೌಲಭ್ಯ ಜಾರಿಯಲ್ಲಿದೆ.

ಶೇ 20ರಷ್ಟು ಹಣ ಕಡಿತ

ನೋಂದಣಿ ಪ್ರಕ್ರಿಯೆ ರದ್ದಾದವರ ಮುದ್ರಾಂಕ ಶುಲ್ಕ ಮರಳಿಸುವಾಗ ಶೇ 20ರಷ್ಟು ಸರ್ಕಾರದ ಕಮಿಷನ್ ಕಡಿತಗೊಳಿಸಲಾಗುತ್ತಿದೆ. ಹಣಕ್ಕಾಗಿ ವರ್ಷಗಳವರೆಗೆ ಕಚೇರಿಗೆ ಅಲೆಯುವುದರ ಜತೆಗೆ, ಹಣವನ್ನೂ ಕಳೆದುಕೊಳ್ಳಬೇಕು. ಮೊದಲೇ ನೋಂದಣಿ ಶುಲ್ಕ ಅಧಿಕವಾಗಿದೆ ಎನ್ನುವುದು ನೋಂದಣಿದಾರರ ಅಳಲು.

ಶುಲ್ಕವನ್ನು ಖಾತೆಗಳಿಗೆ ಜಮೆ ಮಾಡುವಾಗ ವ್ಯತ್ಯಾಸವಾಗಿದ್ದರೆ ತ್ವರಿತ ಮರುಪಾವತಿಗೆ ಸೂಚಿಸಲಾಗಿದೆ. ಹೆಚ್ಚುವರಿ ಪಾವತಿ ವಾಪಸ್ ಪಡೆಯಲು ಮೇಲ್ಮನವಿ ಸಲ್ಲಿಸಬೇಕಿರುವ ಕಾರಣ ವಿಳಂಬವಾಗುತ್ತಿವೆ

ಆರ್.ಅಶೋಕ, ಕಂದಾಯ ಸಚಿವ

ಶುಲ್ಕವನ್ನು ಮರುಪಾವತಿಸುವ ಅಧಿಕಾರ 1957ರ ಮುದ್ರಾಂಕ ಕಾಯ್ದೆಯ ಪ್ರಕಾರ ಆಯಾ ಜಿಲ್ಲಾ ನೋಂದಣಾಧಿಕಾರಿಗೆ ಇರುತ್ತದೆ. ಯಾರೂ ಜವಾಬ್ದಾರಿ ನಿಭಾಯಿಸುತ್ತಿಲ್ಲ ಹೆಸರು ಹೇಳಲು ಇಚ್ಛಿಸದ ಹಿರಿಯ ಅಧಿಕಾರಿ, ಕಂದಾಯ ಇಲಾಖೆ

ಸಹಕಾರ ಸಂಘ: ಸುಧಾರಣೆಗೆ ಶಾ ಕರೆ

ನವದೆಹಲಿ (ಪಿಟಿಐ): ಸಹಕಾರ ಸಂಘಗಳಲ್ಲಿ ಚುನಾವಣಾ ಪ್ರಕ್ರಿಯೆಯು ಹೆಚ್ಚು ಪಾರದರ್ಶಕವಾಗಬೇಕು ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ. 'ಒಬ್ಬನೇ ವ್ಯಕ್ತಿ ಪ್ರತಿ ವರ್ಷವೂ ಚುನಾಯಿತನಾಗುವ ವ್ಯವಸ್ಥೆ ಸರಿಯಲ್ಲ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಸಹಕಾರ ಕ್ಷೇತ್ರದಲ್ಲಿ ಬಹಳ ವೇಗವಾಗಿ ಬದಲಾವಣೆ ತರುವ ಅಗತ್ಯವಿದೆ. ನಾವು ಬದಲಾಗದಿದ್ದರೆ ಜನರೇ ನಮ್ಮನ್ನು ಬದಲಾಯಿಸುತ್ತಾರೆ' ಎಂದು ಅವರು ಹೇಳಿದ್ದಾರೆ.

'ಚುನಾವಣಾ ಪ್ರಕ್ರಿಯೆಯು ಪಾರದರ್ಶಕ ಆಗಬೇಕು. ನಾವು ಬದಲಾವಣೆ ತರಲು ಬಯಸಿದ್ದೇವೆ' ಎಂದು ಅವರು ತಿಳಿಸಿದ್ದಾರೆ. ಸಹಕಾರ ಸಂಘಗಳಿಗೆ ಪಾರದರ್ಶಕವಾಗಿ ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗದ ಮಾದರಿಯಲ್ಲಿ ವ್ಯವಸ್ಥೆಯೊಂದನ್ನು ರೂಪಿಸಲಾಗುವುದು ಎಂದಿದ್ದಾರೆ.

ಶಾ ಅವರು ತಾವು ಕೂಡ 25 ವರ್ಷಗಳಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವೊಂದಕ್ಕೆ ಅಧ್ಯಕ್ಷರಾಗಿದ್ದು ಅಲ್ಲಿ ಈ ವರ್ಷ ಬದಲಾವಣೆ ಆಗಲಿದೆ ಎಂದಿದ್ದಾರೆ. ಸಹಕಾರ ಕ್ಷೇತ್ರದಲ್ಲಿನ ನೇಮಕಾತಿ ವ್ಯವಸ್ಥೆಯಲ್ಲಿ ಕೂಡ ಬದಲಾವಣೆ ತರಬೇಕಾದ ಅಗತ್ಯ ಇದೆ. ಸಚಿವಾಲಯವು ಅದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುತ್ತಿದೆ ಎಂದಿದ್ದಾರೆ.

ಚೆಸ್: ಭಾರತ ತಂಡಗಳಿಗೆ ಕಂಚು



ನಿಹಾಲ್ ಸರೀನ್

ಮಹಾಬಲಿಪುರಂ (ಪಿಟಿಐ): ಆತಿಥೇಯ ಭಾರತ 'ಬಿ' ತಂಡ ಹಾಗೂ ಮಹಿಳೆಯರ ವಿಭಾಗದಲ್ಲಿ ಭಾರತ 'ಎ' ತಂಡ ಮಂಗಳವಾರ ಇಲ್ಲಿ ಮುಕ್ತಾಯವಾದ ಚೆಸ್ ಒಲಿಂಪಿಯಾಡ್‌ನ ಮುಕ್ತ ವಿಭಾಗದಲ್ಲಿ ಕಂಚಿನ ಪದಕ ಪಡೆದುಕೊಂಡವು.

ಮುಕ್ತ ವಿಭಾಗದಲ್ಲಿ ಉಜ್ಬೆಕಿಸ್ತಾನ ಚಿನ್ನ ಹಾಗೂ ಅರ್ಮೇನಿಯಾ ಬೆಳ್ಳಿ ಜಯಿಸಿತು. ಮಹಿಳೆಯರ ವಿಭಾಗದಲ್ಲಿ ಉಕ್ರೇನ್ ಚಾಂಪಿಯನ್ ಆದರೆ, ಜಾರ್ಜಿಯ ಎರಡನೇ ಸ್ಥಾನ ಗಳಿಸಿತು. ಮುಕ್ತ ವಿಭಾಗದಲ್ಲಿ ಭಾರತಕ್ಕೆ ಎರಡನೇ ಬಾರಿ ಕಂಚು ಲಭಿಸಿದೆ. ಈ ಹಿಂದೆ 2014 ರಲ್ಲೂ ಇದೇ ಸಾಧನೆ ಮಾಡಿತ್ತು. 12

ಮಳೆ: ಹಳ್ಳದಲ್ಲಿ ಕೊಚ್ಚಿ ಹೋದ ಕಾರು, ಚಾಲಕ ಸಾವು

ಸೇತುವೆಗಳು ಮುಳುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಮಂಗಳವಾರ ಮಳೆ ಆರ್ಭಟಿಸಿದೆ. ಸೇತುವೆಗಳು ಮುಳುಗಡೆಯಾಗಿವೆ. ಹೊಲ, ತೋಟಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನ ಸಾತ್ಕೋಳಿ ಬಳಿ ಹಳ್ಳದ ಸೇತುವೆಯಲ್ಲಿ ಸಾಗುವಾಗ ಕಾರು ಕೊಚ್ಚಿ ಹೋಗಿ, ಕಾರಿನಲ್ಲಿದ್ದ ಕಡಹಿನಬೈಲಿನ ಅರಶಿನಗೆರೆಯ ಪ್ರಸನ್ನ (50) ಮೃತಪಟ್ಟಿದ್ದಾರೆ.

ಗದಗ ಜಿಲ್ಲೆಯಲ್ಲಿ ಕಟಾವಿಗೆ ಬಂದಿದ್ದ 73 ಸಾವಿರ ಹೆಕ್ಟೇರ್ ಪ್ರದೇಶದಲ್ಲಿನ ಹೆಸರು ಬೆಳೆ ಹಾನಿಯಾಗಿದೆ.

ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಭಾರಿ ಹೆಚ್ಚಳವಾಗಿರುವುದರಿಂದ ವಿಜಯನಗರ–ಬಳ್ಳಾರಿಯಲ್ಲಿ ಮೂರು ಸೇತುವೆಗಳು ಮುಳುಗಿ, ಸಂಪರ್ಕ ಕಡಿತಗೊಂಡಿದೆ.

ಮಡಿಕೇರಿ- ಮಂಗಳೂರು ರಸ್ತೆಯಲ್ಲಿ ಮದೆನಾಡು ಸಮೀಪ ಗುಡ್ಡದಲ್ಲಿ ದೊಡ್ಡ ಪ್ರಮಾಣದ ಬಿರುಕು ಕಾಣಿಸಿಕೊಂಡು ಆತಂಕ ಮೂಡಿಸಿದೆ.

ತುಂಗಭದ್ರಾ ಜಲಾಶಯದಿಂದ ಅಪಾರ ಪ್ರಮಾಣದ ನೀರು ಬಿಟ್ಟಿರುವ ಕಾರಣ ಗಂಗಾವತಿ–ಕಂಪ್ಲಿ ಸಂಪರ್ಕ ಕಲ್ಪಿಸುವ ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ. ನವವೃಂದಾವನ ಜನ ಸಂಪರ್ಕ ಕಳೆದುಕೊಂಡಿದೆ. ತುಂಗಭದ್ರಾ ನದಿ ಪಾತ್ರದಲ್ಲಿ ಪ್ರವಾಹ ಭೀತಿ ಎದುರಾಗಿದೆ.



ಚಿಕ್ಕೋಡಿ ತಾಲ್ಲೂಕಿಗೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ನರಸಿಂಹವಾಡಿಯಲ್ಲಿ ಕೃಷ್ಣಾ ಮತ್ತು ಪಂಚಗಂಗಾ ನದಿಗಳ ಸಂಗಮಸ್ಥಾನದಲ್ಲಿರುವ ದತ್ತ ದೇಗುಲ ಜಲಾವೃತಗೊಂಡಿದೆ

ಮಹಾರಾಷ್ಟ್ರದಲ್ಲಿ ಭಾರಿ ಮಳೆ

ಮುಂಬೈ/ಇಡುಕ್ಕಿ/ಭುವನೇಶ್ವರ (ಪಿಟಿಐ): ಮಹಾರಾಷ್ಟ್ರ, ಕೇರಳ ಮತ್ತು ಒಡಿಶಾದಾದ್ಯಂತ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ.

ಮಹಾರಾಷ್ಟ್ರ, ಒಡಿಶಾದ ಹಲವೆಡೆ ಇನ್ನೂ ಕೆಲ ದಿನಗಳ ಕಾಲ ಮಳೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಕೇರಳದ ಬಹುತೇಕ ಜಲಾಶಯಗಳು ಭರ್ತಿಯಾಗಿದ್ದು, ಇಡುಕ್ಕಿ, ಮಲಪ್ಪುರ ಸೇರಿದಂತೆ ಹಲವು ಅಣೆಕಟ್ಟೆಗಳಿಂದ ನೀರನ್ನು ಹೊರಬಿಡಲಾಗಿದೆ.

ಮಹಾರಾಷ್ಟ್ರದ ಉತ್ತರ ಕೊಂಕಣ ಮತ್ತು ಉತ್ತರ ಕೇಂದ್ರ, ಪೂರ್ವ ಮತ್ತು ಪಶ್ಚಿಮ ವಿದರ್ಭ ಪ್ರದೇಶಗಳಲ್ಲಿ ಇದೇ 12ರ ವರೆಗೂ ರೆಡ್ ಅಲರ್ಟ್ ಘೋಷಿಸಲಾಗಿದೆ.

ಈ ತಿಂಗಳಲ್ಲೇ 5ಜಿ: ಏರ್‌ಟೆಲ್

ನವದೆಹಲಿ (ಪಿಟಿಐ): ಭಾರ್ತಿ ಏರ್‌ಟೆಲ್ ಕಂಪನಿಯು 5ಜಿ ಸೇವೆಗಳನ್ನು ಈ ತಿಂಗಳಿನಿಂದಲೇ ಆರಂಭಿಸಲಿದೆ ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಗೋಪಾಲ್ ವಿಟ್ಠಲ್ ಹೇಳಿದ್ದಾರೆ.

ಕಂಪನಿಯು 2024ರ ಮಾರ್ಚ್‌ಗೆ ಮೊದಲು ಎಲ್ಲ ನಗರಗಳು ಹಾಗೂ ಪ್ರಮುಖ ಗ್ರಾಮೀಣ ಪ್ರದೇಶಗಳಲ್ಲಿ 5ಜಿ ಸೇವೆಗಳು ಲಭ್ಯವಾಗುವಂತೆ ಮಾಡಲಿದೆ ಎಂದಿದ್ದಾರೆ.

ದೇಶದಲ್ಲಿ ಮೊಬೈಲ್ ಸೇವಾ ಶುಲ್ಕವು ತೀರಾ ಕಡಿಮೆ ಇದೆ, ಇದು ಹೆಚ್ಚಾಗಬೇಕು ಎಂದು ಕೂಡ ಅವರು ಹೇಳಿದ್ದಾರೆ. 'ದೇಶದ ಐದು ಸಾವಿರ ನಗರಗಳಲ್ಲಿ ನೆಟ್‌ವರ್ಕ್ ಆರಂಭಿಸಲು ವಿಸ್ತೃತ ಯೋಜನೆಯು ಸಿದ್ಧವಿದೆ' ಎಂದು ಅವರು ಹೇಳಿದ್ದಾರೆ.

ಏರ್‌ಟೆಲ್ ಬಳಿ ಈಗಾಗಲೇ ಇರುವ 900 ಮೆಗಾಹರ್ಟ್ಸ್ ತರಂಗಾಂತರಕ್ಕೆ ಹೋಲಿಸಿದರೆ 700 ಮೆಗಾಹರ್ಟ್ಸ್ ತರಂಗಾಂತರ ಬಳಕೆಯಿಂದ ಹೆಚ್ಚುವರಿ ವ್ಯಾಪ್ತಿಯಲ್ಲಿ ಸೇವೆ ನೀಡಲು ಸಾಧ್ಯವಾಗುವುದಿಲ್ಲ ಎಂದು ಅವರು ವಿವರಿಸಿದ್ದಾರೆ.

ಒಳ ಪುಟಗಳು



ಶ್ರೀಕಾಂತ್ ತ್ಯಾಗಿ ಬಂಧನ 6

'ರಾಷ್ಟ್ರಧ್ವಜ ವಿರೋಧಿಸುವವರಲ್ಲಿ ದೇಶಭಕ್ತಿ ಸಾಧ್ಯವೇ?' 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ತಲಶ್ಶೇರಿ–ಮೈಸೂರು ರೈಲ್ವೆ ಯೋಜನೆ: ಕೇರಳ ಸರ್ಕಾರದಿಂದ ಹೊಸ ಪ್ರಸ್ತಾವ

ನಾಗರಹೊಳೆಯಲ್ಲಿ ಸುರಂಗ ರೈಲು ಮಾರ್ಗ?

• ಮಂಜುನಾಥ ಹೆಬ್ಬಾರ್

ನವದೆಹಲಿ: ಪರಿಸರವಾದಿಗಳ ತೀವ್ರ ವಿರೋಧದ ಹಿನ್ನೆಲೆಯಲ್ಲಿ ತಲಶ್ಶೇರಿ–ಮೈಸೂರು ಹಾಗೂ ನಿಲಂಬೂರು ನಂಜನಗೂಡು ರೈಲು ಯೋಜನೆಯ ಅನುಷ್ಠಾನಕ್ಕೆ ಕೇರಳ ಸರ್ಕಾರ ಹೊಸ ಪ್ರಸ್ತಾವ ಸಿದ್ಧಪಡಿಸಿದೆ. ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಸುರಂಗ ರೈಲು ಮಾರ್ಗ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರದ ಸಹಮತಿ ಕೇಳಿದೆ.


ತಿರುವಂತಪುರದಲ್ಲಿ ಇತ್ತೀಚೆಗೆ ನಡೆದ ಕೇಂದ್ರ ಗೃಹ ಸಚಿವಾಲಯದ ಅಂತರ್ ರಾಜ್ಯ (ದಕ್ಷಿಣ ವಲಯ) ಪರಿಷತ್ತಿನ ಸ್ಥಾಯಿ ಸಮಿತಿ ಸಭೆಯಲ್ಲಿ ಕೇರಳ ಸರ್ಕಾರದ ಪ್ರತಿನಿಧಿಗಳು ಈ ವಿಚಾರವನ್ನು ಪ್ರಸ್ತಾಪಿಸಿದ್ದಾರೆ.

ಸಭೆಯಲ್ಲಿ ಹೊಸ ಪ್ರಸ್ತಾವದ ಬಗ್ಗೆ ವಿವರ ನೀಡಿದ್ದ ಕೇರಳ ಸರ್ಕಾರದ ಪ್ರತಿನಿಧಿಗಳು, 'ನಿಲಂಬೂರು–ನಂಜನಗೂಡು ರೈಲು ಯೋಜನೆಯನ್ನು 2016–17ನೇ ಸಾಲಿನ ರೈಲ್ವೆ ಪಿಂಕ್ ಪುಸ್ತಕದಲ್ಲಿ ಸೇರ್ಪಡೆ ಮಾಡಲಾಗಿದೆ. ರೈಲ್ವೆ ಇಲಾಖೆ ಹಾಗೂ ಕೇರಳ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ಯೋಜನೆಯ ಅನುಷ್ಠಾನ ಮಾಡಲಾಗುತ್ತಿದೆ. ಈ ಯೋಜನೆಯ ಸಮೀಕ್ಷೆಗೆ ಕರ್ನಾಟಕ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿ ಬಂಡೀಪುರ ಅರಣ್ಯ ಪ್ರದೇಶದಲ್ಲಿ ಸಮೀಕ್ಷೆ ನಡೆಸಲು ಒಪ್ಪಿಗೆ ನೀಡಿಲ್ಲ' ಎಂದು ಹೇಳಿದ್ದರು.

'ಯೋಜನೆ ಕಾರ್ಯಗತಗೊಳಿಸುವ ಕುರಿತು ಕೇರಳ ಹಾಗೂ ಕರ್ನಾಟಕ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳು ಹಲವು ಸುತ್ತಿನ ಮಾತುಕತೆ ನಡೆಸಿದ್ದಾರೆ. ತಲಶ್ಶೇರಿ–ಮೈಸೂರು ನಡುವೆ ಪರ್ಯಾಯ ಮಾರ್ಗದಲ್ಲಿ ರೈಲು ಮಾರ್ಗ ನಿರ್ಮಾಣಕ್ಕೆ ಕೇರಳ ಸರ್ಕಾರ ಪ್ರಸ್ತಾವ ಸಿದ್ಧಪಡಿಸಿತ್ತು. ಸಾರ್ವಜನಿಕರ ಆಕ್ಷೇಪದ ಕಾರಣ ಈ ಮಾರ್ಗದ ಸಮೀಕ್ಷೆಗೂ ಕರ್ನಾಟಕ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತ್ತು. ಹೀಗಾಗಿ, ನಾಗರಹೊಳೆ ಅರಣ್ಯದ ಬಫರ್ ಝೋನ್‌ನಲ್ಲಿ ಸುರಂಗ ಮಾರ್ಗ ನಿರ್ಮಾಣಕ್ಕೆ ಹೊಸ ಪ್ರಸ್ತಾಪ ಸಿದ್ಧಪಡಿಸಲಾಗಿದೆ. ಅನುಮತಿಗಾಗಿ ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಲಾಗಿದೆ' ಎಂದು ತಿಳಿಸಿದ್ದರು.

ಈ ಪ್ರಸ್ತಾವದ ಬಗ್ಗೆ ಪರಿಶೀಲನೆ ನಡೆಸಿ ಪ್ರತಿಕ್ರಿಯೆ ನೀಡಲಾಗುತ್ತದೆ ಎಂದು ಕರ್ನಾಟಕ ಸರ್ಕಾರದ ಅಧಿಕಾರಿಗಳು ತಿಳಿಸಿದ್ದಾರೆ. ಹೀಗಾಗಿ, ಸಭೆಯಲ್ಲಿ ಈ ಬಗ್ಗೆ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ.

ತಲಶ್ಶೇರಿ–ಮೈಸೂರು ಪರ್ಯಾಯ ಮಾರ್ಗವು ತಲಶ್ಶೇರಿಯಲ್ಲಿ ಆರಂಭವಾಗಿ ಮೈಸೂರು ಸಮೀಪದ ಕಡಕೋಳದಲ್ಲಿ ಕೊನೆಗೊಳ್ಳಲಿದೆ. ಈ ಮಾರ್ಗವು ಎಚ್.ಡಿ.ಕೋಟೆ, ಅಂತರಸಂತೆ ಗಡಿ ಮೂಲಕ ಕೇರಳದ ಬಾವಲಿ ಗ್ರಾಮದ ಮೂಲಕ ಹಾದು ಹೋಗಲಿದೆ. ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯದ ಅಂತರಸಂತೆ ವಿಭಾಗದಲ್ಲಿ 22 ಕಿ.ಮೀ. ಸುರಂಗ ನಿರ್ಮಾಣ ಮಾಡಲು ಯೋಜಿಸಲಾಗಿದೆ.



ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರ ಅಭಿಪ್ರಾಯವನ್ನು ಕೇಳಿದ್ದೇವೆ. ಆ ಬಳಿಕ ಕರ್ನಾಟಕ ಸರ್ಕಾರವು ಕೇರಳ ಸರ್ಕಾರಕ್ಕೆ ಪ್ರತಿಕ್ರಿಯೆ ನೀಡಲಿದೆ

ಗೌರವ್ ಗುಪ್ತ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಮೂಲಸೌಕರ್ಯ ಅಭಿವೃದ್ಧಿ ಇಲಾಖೆ

ಪರಿಸರ ಸೂಕ್ಷ್ಮ ಪ್ರದೇಶವನ್ನು ಬಿಟ್ಟು ಬೇರೆ ಕಡೆಯಲ್ಲಿ ಯೋಜನೆ ಅನುಷ್ಠಾನ ಮಾಡಲಿ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ

ಸಂಜಯ್ ಗುಬ್ಬಿ, ವನ್ಯಜೀವಿ ವಿಜ್ಞಾನಿ

ಆನೆಗಳ ಕಾರಿಡಾರ್ ಇರುವುದರಿಂದ ಸುರಂಗ ಮಾರ್ಗ ಮಾಡುವಂತೆ ರೈಲ್ವೆ ಇಲಾಖೆ ಸಲಹೆ ನೀಡಿದೆ

ರೈಲ್ವೆ ಮಂಡಳಿಯ ಹಿರಿಯ ಅಧಿಕಾರಿ

ಪ್ರಜಾವಾಣಿ ವಿಶೇಷ

ಇಂದು ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ 11ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್ ನಡೆಯಲಿದೆ. ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೂ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ: 8762228888ಗೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ತಿಳಿಸಿದ್ದಾರೆ.

ಚಾಮರಾಜಪೇಟೆಯ ಈದ್ಗಾ ಮೈದಾನ

ಗಣೇಶೋತ್ಸವಕ್ಕೆ ವೇದಿಕೆ ಆಗ್ರಹ ಮುಸ್ಲಿಂ ಮುಖಂಡರ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿ ಸ್ವಾತಂತ್ರ್ಯೋತ್ಸವ ಆಚರಿಸುವುದಾಗಿ ಹೇಳುತ್ತಿರುವ ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆಯ ಪದಾಧಿಕಾರಿಗಳು, ಗಣೇಶೋತ್ಸವ ಆಚರಣೆಗೂ ಅನುಮತಿ ನೀಡುವಂತೆ ಆಗ್ರಹಿಸಿದ್ದಾರೆ.

ಚಾಮರಾಜಪೇಟೆ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಆಯೋಜಿಸಿದ್ದ ಶಾಂತಿ ಸಭೆಯಲ್ಲಿ ಪಾಲ್ಗೊಂಡಿದ್ದ ಒಕ್ಕೂಟದ ಮುಖಂಡರು, 'ಆಚರಣೆಗಳನ್ನು ರಾಜಕೀಯ ಮಾಡಬೇಡಿ. ಯಾವುದೇ ಗಲಾಟೆ ಇಲ್ಲದೇ ಗಣೇಶೋತ್ಸವ ಆಚರಿಸಲು ನಾಗರಿಕರು ಸಿದ್ಧರಿದ್ದೇವೆ. ಅನುಮತಿ ಕೊಡಿ' ಎಂದರು.

ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ, 'ಮೈದಾನದ ವಿಷಯದಲ್ಲಿ ಭಿನ್ನ ಅಭಿಪ್ರಾಯವಿದೆ. ಹೀಗಾಗಿ, ಹಿಂದೂ ಮುಖಂಡರ ಸಭೆ ಕರೆಯಲಾಗಿದ್ದು, ಒಕ್ಕೂಟದ ಅಭಿಪ್ರಾಯ ದಾಖಲಿಸಿಕೊಳ್ಳಲಾಗಿದೆ. ಬುಧವಾರ ಸಂಜೆ ಪ್ರತ್ಯೇಕವಾಗಿ ಮುಸ್ಲಿಂ ಮುಖಂಡರ ಸಭೆ ಕರೆಯಲಾಗಿದ್ದು, ಅವರ ಅಭಿಪ್ರಾಯ ಸಂಗ್ರಹಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಮೈದಾನದ ವಿಷಯದಲ್ಲಿ ಯಾವುದೇ ಸುಳ್ಳು ಸುದ್ದಿಗಳನ್ನು ಹಬ್ಬಿಸಬಾರದು. ಯಾರಾದರೂ ಕಿಡಿಗೇಡಿಗಳು, ಕಾನೂನುಬಾಹಿರ ಚಟುವಟಿಕೆ ಎಸಗಿ ಸ್ಥಳೀಯರು ಹಾಗೂ ಸಾರ್ವಜನಿಕರ ಆಸ್ತಿಗೆ ಧಕ್ಕೆ ತಂದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಡಿಸಿಪಿ ಎಚ್ಚರಿಕೆ ನೀಡಿದರು.

ಧಾರ್ಮಿಕ ಆಚರಣೆಗೆ 2006ರಲ್ಲಿ ಅನುಮತಿ: '2006ರಲ್ಲಿ ಪೊಲೀಸ್ ಶಾಂತಿ ಸಭೆ ನಡೆದಿತ್ತು. ಈದ್ಗಾ ಮೈದಾನದಲ್ಲಿ ಧಾರ್ಮಿಕ ಆಚರಣೆ ನಡೆಸಲು ಅನುಮತಿ ಸಹ ಸಿಕ್ಕಿತ್ತು. ಅದೇ ಆದೇಶವನ್ನು ಪುನಃ ಹೊರಡಿಸಿ, ಈ ವರ್ಷ ಗಣೇಶೋತ್ಸವಕ್ಕೆ ಅವಕಾಶ ನೀಡಬೇಕು' ಎಂದು ಮುಖಂಡರು ಕೋರಿದರು.

ನಗರಕ್ಕೆ ಬಂತು 'ಗಾಲ್ ಮೊಬೈಲ್'

ತ್ಯಾಜ್ಯ ನೀರು ಸಂಸ್ಕರಿಸಿ ಶುದ್ಧ ಕುಡಿಯುವ ನೀರು ನೀಡುವ ಯಂತ್ರ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಚರಂಡಿಯ ನೀರನ್ನು ಸಂಸ್ಕರಿಸಿ ಶುದ್ಧ ಕುಡಿಯುವ ನೀರು ನೀಡುವ ಇಸ್ರೇಲ್ ಕಂಪನಿಯ 'ಗಾಲ್ ಮೊಬೈಲ್' ನೀರು ಸಂಸ್ಕರಣೆ ಯಂತ್ರವು ನಗರಕ್ಕೆ ಬಂದಿದೆ.

ಬೊಮ್ಮನಹಳ್ಳಿಯ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಇದರ ಮೊದಲ ಪ್ರಾತ್ಯಕ್ಷಿಕೆ ನೀಡಲಾಯಿತು,

ಕೊಳವೆಯ ಮೂಲಕ ಚರಂಡಿ ನೀರನ್ನು ಹೀರಿ, ನಾಲ್ಕು ಹಂತಗಳಲ್ಲಿ ಸಂಸ್ಕರಿಸಿ ಶುದ್ಧ ಕುಡಿಯುವ ನೀರು ಕೊಡುತ್ತದೆ. ಕಿರಿದಾದ ಪ್ರದೇಶಗಳಿಗೂ ಕೊಂಡೊಯ್ಯಬಹುದಾದ ಚಿಕ್ಕ ವಾಹನದಲ್ಲಿ ಯಂತ್ರವನ್ನು ಅಳವಡಿಸಲಾಗಿದೆ. ನಾಲ್ಕು ಶೋಧಕ ಕೊಳಾಯಿಗಳು ತ್ಯಾಜ್ಯ ನೀರಿನ ಸಣ್ಣ ಮತ್ತು ದೊಡ್ಡ ಕಣಗಳನ್ನು ಶೋಧಿಸಿ, ನೀರಿನ ದುರ್ಗಂಧವನ್ನು ತೆಗೆದು, ಅಂತಿಮವಾಗಿ ಕುಡಿಯಲು ಯೋಗ್ಯವಾದ ನೀರನ್ನು ಪ್ರತ್ಯೇಕಿಸುತ್ತವೆ.

ಶಾಸಕ ಸತೀಶ್ ರೆಡ್ಡಿ ಮಾತನಾಡಿ, 'ಮೋದಿ ಅವರು ಇಸ್ರೇಲ್‌ಗೆ ಭೇಟಿ ನೀಡಿದ್ದಾಗ, ಈ ಯಂತ್ರಗಳನ್ನು ಭಾರತಕ್ಕೆ ತರಲು ಆಸಕ್ತಿ ತೋರಿದ್ದರು. ಇದೀಗ ಗುಜರಾತಿನಲ್ಲಿ 15 ಯಂತ್ರಗಳು ಕೆಲಸ ನಿರ್ವಹಿಸುತ್ತಿವೆ. ರಾಜ್ಯದಲ್ಲಿ ಮೊದಲ ಬಾರಿಗೆ ಬೊಮ್ಮನಹಳ್ಳಿಗೆ ತರಲಾಗಿದೆ' ಎಂದರು.

'ನೆರೆ ಸಂದರ್ಭದಲ್ಲಿ ಹಾಗೂ ಫ್ಲೋರೈಡ್‌ಯುಕ್ತ ನೀರು ಇರುವ ಪ್ರದೇಶಗಳಿಗೆ ಇದು ಪ್ರಯೋಜನಕಾರಿ. ಅಪಾರ್ಟ್‌ಮೆಂಟ್‌ನ ಎಸ್‌ಟಿಪಿಗಳಿಗೆ, ಬಡಾವಣೆ, ಶಾಲಾ-ಕಾಲೇಜುಗಳಲ್ಲಿ ಮತ್ತು ಹಳ್ಳಿಗಳಲ್ಲಿಯೂ ಈ ಯಂತ್ರವನ್ನು ಅಳವಡಿಸಿಕೊಳ್ಳಬಹುದು. ಯಂತ್ರಕ್ಕೆ ₹ 1.25 ಲಕ್ಷ ಬೆಲೆ ಇದ್ದು, ಕಂಪನಿಯೇ ಇದರ ನಿರ್ವಹಣೆ ಮಾಡುತ್ತದೆ. ಶೀಘ್ರದಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಈ ಬಗ್ಗೆ ಮನವರಿಕೆ ಮಾಡಿ, ಈ ಯಂತ್ರವನ್ನು 'ಮೇಕ್ ಇನ್ ಕರ್ನಾಟಕ' ಯೋಜನೆಯ ಅಡಿ ಉತ್ಪಾದಿಸಲು ಕೋರಲಾಗುವುದು' ಎಂದು ತಿಳಿಸಿದರು.

'ಈಗಾಗಲೇ ಮಿಲಿಟರಿ, ಎನ್‌ಡಿಆರ್‌ಎಫ್‌ನಲ್ಲಿ ಬಳಸಲಾಗುತ್ತಿದ್ದು, ನಿರ್ವಹಣಾ ವೆಚ್ಚವೂ ಕಡಿಮೆ ಇದೆ. ದಿನಕ್ಕೆ 15 ಸಾವಿರದಿಂದ 20 ಸಾವಿರ ಲೀಟರ್ ನೀರನ್ನು ಸಂಸ್ಕರಿಸುತ್ತದೆ. ಇದಕ್ಕೆ ವಿಶ್ವ ಆರೋಗ್ಯ ಸಂಸ್ಥೆ ಮಾನ್ಯತೆ ನೀಡಿದೆ' ಎಂದು ತಾಂತ್ರಿಕ ಸಲಹೆಗಾರ ಡಾ.ಮೂರ್ತಿ ಹೇಳುತ್ತಾರೆ.

ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತ ಕೃಷ್ಣಮೂರ್ತಿ, ಮಾಜಿ ಉಪ ಮೇಯರ್ ರಾಮಮೋಹನ್ ರಾಜು ಇದ್ದರು.



ಸಂಸ್ಕರಿಸಿದ ನೀರನ್ನು ಕುಡಿಯುತ್ತಿರುವ ಶಾಸಕ ಸತೀಶ್ ರೆಡ್ಡಿ. ತಾಂತ್ರಿಕ ಸಲಹೆಗಾರ ಡಾ.ಮೂರ್ತಿ, ಮಾಜಿ ಉಪ ಮೇಯರ್ ರಾಮಮೋಹನ್ ರಾಜು, ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತ ಕೃಷ್ಣಮೂರ್ತಿ ಇದ್ದಾರೆ.

ಸುಧಾ ಓದಿರಿ

ವಿವಾದಾತ್ಮಕ ಹೇಳಿಕೆ ನೀಡಿದ್ದ ಭಾಸ್ಕರನ್


'ವಕ್ಫ್ ಬೋರ್ಡ್‌ನವರೇ ಗೋಡೆ ನೆಲಸಮ ಮಾಡಬೇಕು. ಇಲ್ಲದಿದ್ದರೆ, ಡಿಸೆಂಬರ್ 6ರಂದು ಬಾಬ್ರಿ ಮಸೀದಿ ಕೆಡವಿದ ದಿನ. ಅಂದೇ ಈ ಗೋಡೆ ನೆಲಸಮ ಮಾಡುತ್ತೇವೆ'

ವಿಶ್ವ ಸನಾತನ ಪರಿಷತ್ ಅಧ್ಯಕ್ಷನ ವಿರುದ್ಧ ಎಫ್‌ಐಆರ್

ಬೆಂಗಳೂರು: 'ಚಾಮರಾಜಪೇಟೆಯಲ್ಲಿರುವ ಈದ್ಗಾ ಮೈದಾನದಲ್ಲಿರುವ ಗೋಡೆಯನ್ನು ನೆಲಸಮ ಮಾಡುತ್ತೇವೆ' ಎಂಬುದಾಗಿ ಹೇಳಿಕೆ ನೀಡಿದ್ದ ವಿಶ್ವ ಸನಾತನ ಪರಿಷತ್ ಅಧ್ಯಕ್ಷ ಎಸ್. ಭಾಸ್ಕರನ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಬಿಬಿಎಂಪಿ ಆಟದ ಮೈದಾನ ಬಳಕೆ ಬಗ್ಗೆ ಹಲವು ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಈ ಜಾಗ ಕಂದಾಯ ಇಲಾಖೆಗೆ ಸೇರಿದ್ದೆಂದು ಬಿಬಿಎಂಪಿ ಜಂಟಿ ಆಯುಕ್ತರು ಆಗಸ್ಟ್ 6ರಂದು ಆದೇಶ ಹೊರಡಿಸಿದ್ದಾರೆ.

ಇದರ ಬೆನ್ನಲ್ಲೇ ಮಾಧ್ಯಮಗಳಿಗೆ ಹೇಳಿಕೆ ನೀಡಿರುವ ಭಾಸ್ಕರನ್, 'ವಕ್ಫ್ ಬೋರ್ಡ್‌ನವರೇ ಗೋಡೆ ನೆಲಸಮ ಮಾಡಬೇಕು. ಇಲ್ಲದಿದ್ದರೆ, ಡಿಸೆಂಬರ್ 6ರಂದು ಬಾಬ್ರಿ ಮಸೀದಿ ಕೆಡವಿದ ದಿನ. ಅಂದೇ ಈ ಗೋಡೆ ನೆಲಸಮ ಮಾಡುತ್ತೇವೆ' ಎಂದಿದ್ದರು. ಉದ್ದೇಶಪೂರ್ವಕವಾಗಿ ಹೇಳಿಕೆ ನೀಡಿ, ಎರಡು ಸಮುದಾಯಗಳ ನಡುವೆ ವೈಷಮ್ಯ ಮೂಡಿಸಲು ಹಾಗೂ ಕೋಮು ಸೌಹಾರ್ದಕ್ಕೆ ಧಕ್ಕೆ ತರಲು ಭಾಸ್ಕರನ್ ಯತ್ನಿಸಿದ್ದಾರೆ. ಹೀಗಾಗಿ, ಇವರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.



ಬಾಂಧವ್ಯದ ಬೆಸುಗೆ

ನಗರದ ಶೇಷಾದ್ರಿಪುರಂನಲ್ಲಿ ಯುವತಿಯರು ರಕ್ಷಾಬಂಧನದ ಅಂಗವಾಗಿ ಮಂಗಳವಾರ ರಾಖಿ ಖರೀದಿಸಿದರು

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಖೇಣಿ ಅರ್ಜಿ: ಅಬ್ರಹಾಂಗೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕ ಎಂ.ಖೇಣಿ ಹಾಗೂ ಅವರ ಸಹೋದರ ಸಂಜಯ್ ಖೇಣಿ ವಿರುದ್ಧ ಸಲ್ಲಿಸಲಾಗಿರುವ ಕ್ರಿಮಿನಲ್ ಪ್ರಕರಣದಲ್ಲಿ ದೂರುದಾರರೂ ಆದ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಖೇಣಿ ಸಹೋದರರು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ನೋಟಿಸ್ ಜಾರಿಗೆ ಆದೇಶಿಸಿದೆ.

'ವಿಶೇಷ ನ್ಯಾಯಾಲಯವು ಪ್ರಕರಣದ ವಿಚಾರಣೆಗೆ ಮುಂದಾಗಬಾರದು' ಎಂದು ಈ ಹಿಂದೆ ನೀಡಿದ್ದ ಆದೇಶವನ್ನು ವಿಸ್ತರಿಸಿದ ನ್ಯಾಯಪೀಠ ಸೆಪ್ಟೆಂಬರ್ 5ಕ್ಕೆ ಮುಂದಿನ ವಿಚಾರಣೆ ನಿಗದಿಪಡಿಸಿದೆ.

'ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಮತದಾರರ ಯಾದಿಗೆ ತಮ್ಮ ಹೆಸರು ಸೇರಿಸುವಂತೆ ಕೋರಿ ಅಶೋಕ್ ಖೇಣಿ 2013 ರ ಏಪ್ರಿಲ್ 1ರಂದು ಫಾರಂ-6ರಲ್ಲಿ ಅರ್ಜಿ ಸಲ್ಲಿಸಿದ್ದರು. ಆದರೆ, ಈ ಅರ್ಜಿಯಲ್ಲಿ ಅವರು ಸಹಿ ಮಾಡಿರಲಿಲ್ಲ. ಬದಲಿಗೆ ಅಶೋಕ ಎಂ. ಖೇಣಿ ಸಹಿಯನ್ನು ಅವರ ಸಹೋದರ ಸಂಜಯ್ ಖೇಣಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅಶೋಕ್ ಎಂ. ಖೇಣಿ ವಿದೇಶ ಪ್ರವಾಸದಲ್ಲಿದ್ದರು' ಎಂದು ಆರೋಪಿಸಿ ಅಬ್ರಹಾಂ ಖಾಸಗಿ ದೂರು ದಾಖಲಿಸಿದ್ದರು. ಈ ದೂರಿನನ್ವಯ ಪೊಲೀಸರು ಖೇಣಿ ಸಹೋದರರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

ಪ್ರಕರಣದಿಂದ ತಮ್ಮನ್ನು ಖುಲಾಸೆಗೊಳಿಸುವಂತೆ ಕೋರಿ ಖೇಣಿ ಸಹೋದರರು ಸಲ್ಲಿಸಿದ್ದ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿತ್ತು. 'ಈ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಅಶೋಕ್ ಎಂ. ಖೇಣಿ ಹಾಗೂ ಅವರ ತಮ್ಮ ಸಂಜಯ್ ಖೇಣಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಕಾಮೆಡ್-ಕೆ ಕೌನ್ಸೆಲಿಂಗ್ ಮುಂದೂಡಲು ಒತ್ತಾಯ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅವಾಂತರದಿಂದಾಗಿ ಸಿಇಟಿ ಪರೀಕ್ಷೆ ಪುನಃ ಬರೆದಿರುವ ರಾಜ್ಯದ 20 ಸಾವಿರಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳ ಭವಿಷ್ಯ ಅತಂತ್ರದಲ್ಲಿದೆ. ಹೀಗಾಗಿ, ಸಿಇಟಿ ಪ್ರಕ್ರಿಯೆ ಮುಗಿಯುವವರೆಗೂ ಕಾಮೆಡ್-ಕೆ ಪ್ರಕ್ರಿಯೆ ಮುಂದೂಡಬೇಕು ಎಂದು ಎಐಡಿಎಸ್‌ಒ ಒತ್ತಾಯಿಸಿದೆ.

ಸಾವಿರಾರು ವಿದ್ಯಾರ್ಥಿಗಳು ಆತಂಕದಲ್ಲಿರುವಾಗ ತಕ್ಷಣವೇ ಸಿಇಟಿ ಕುರಿತಾದ ಸಮಸ್ಯೆ ಬಗೆಹರಿಸುವ ಬದಲು ಕಾಮೆಡ್-ಕೆ ಪ್ರಕ್ರಿಯೆಯನ್ನು ಪ್ರಾರಂಭಗೊಳಿಸುತ್ತಿರುವುದರಿಂದ ಸರ್ಕಾರವು ಖಾಸಗಿ ಕಾಲೇಜು ಲಾಬಿಗೆ ಬಲಿಯಾಗಿದೆ ಎಂದು ಸ್ಪಷ್ಟವಾಗಿ ಅರ್ಥವಾಗುತ್ತಿದೆ ಎಂದು ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

ಕಾಮೆಡ್-ಕೆ ಸೀಟುಗಳು ವ್ಯಾಪಾರಗೊಂಡರೆ ಬಡ ವಿದ್ಯಾರ್ಥಿಗಳ ಪರಿಸ್ಥಿತಿ ಏನು ಎಂದು ಪ್ರಶ್ನಿಸಿದ್ದಾರೆ.

ಹೈಕೋರ್ಟ್ ತೀರ್ಪು ನೀಡುವವರೆಗೂ ಮತ್ತು ಸಿಇಟಿ ಪ್ರಕ್ರಿಯೆ ಮುಗಿಯುವವರೆಗೂ ಕಾಮೆಡ್-ಕೆ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಮುಂದೂಡಬೇಕೆಂದು ಅವರು ಆಗ್ರಹಿಸಿದ್ದಾರೆ.

ನಿಧನ ವಾರ್ತೆ

ಸಂಪೂರ್ಣಮ್ಮ



ಬೆಂಗಳೂರು: ನಗರದ ಕಾವಲ್‌ಸಂದ್ರ ನಿವಾಸಿ ಸಂಪೂರ್ಣಮ್ಮ (77) ಸೋಮವಾರ ರಾತ್ರಿ ನಿಧನರಾದರು.

ಮೃತರಿಗೆ ಪತಿ ಮತ್ತು ನಾಲ್ವರು ಪುತ್ರಿಯರು ಇದ್ದಾರೆ. ಹೆಬ್ಬಾಳದ ಸ್ಮಶಾನದಲ್ಲಿ ಮೃತರ ಅಂತ್ಯಕ್ರಿಯೆ ಬುಧವಾರ ನಡೆಯಿತು.



ಬ್ಯಾಟರಿ ವಿನಿಮಯ ಕೇಂದ್ರಕ್ಕೆ ಇತ್ತೀಚೆಗೆ ಚಾಲನೆ ನೀಡಲಾಯಿತು. ಹೋಂಡಾ ಮೋಟಾರ್ ಕಂಪನಿ ವ್ಯಾಪಾರ ಅಭಿವೃದ್ಧಿ ಮೇಲುಸ್ತುವಾರಿ ಘಟಕದ ಮುಖ್ಯಸ್ಥ ಅರಾಟಾ ಇಚಿನೋಸ್, ಹೋಂಡಾ ಪವರ್ ಪ್ಯಾಕ್ ಎನರ್ಜಿ ಇಂಡಿಯಾದ ಅಧ್ಯಕ್ಷ ಕಿಯೋಶಿ ಇಟೊ, ಎಚ್‌ಪಿಸಿಎಲ್ ರಿಟೇಲ್ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ಸಂದೀಪ್ ಮಹೇಶ್ವರಿ, ಎಚ್‌ಪಿಸಿಎಲ್ ಯೋಜನೆ ಮತ್ತು ವ್ಯವಹಾರ ಅಭಿವೃದ್ಧಿ ಕಾರ್ಯನಿರ್ವಾಹಕ ನಿರ್ದೇಶಕ ಧರ್ಮೇಂದ್ರ ಕುಮಾರ್ ಶರ್ಮಾ ಇದ್ದರು

ಹೋಂಡಾ ಕಂಪನಿಯಿಂದ ಬ್ಯಾಟರಿ ವಿನಿಮಯ ಕೇಂದ್ರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಪಿಸಿಎಲ್ ಪೆಟ್ರೋಲ್ ಬಂಕ್‌ಗಳಲ್ಲಿ ಬ್ಯಾಟರಿ ವಿನಿಮಯ (ಸ್ವ್ಯಾಪ್) ಸೇವೆ ಆರಂಭಿಸಲು ಹೋಂಡಾ ಮೋಟಾರ್ ಕಂಪನಿ ಲಿಮಿಟೆಡ್‌ನ ಅಂಗಸಂಸ್ಥೆ 'ಹೋಂಡಾ ಪವರ್ ಪ್ಯಾಕ್ ಎನರ್ಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್(ಎಚ್‌ಇಐಡಿ)' ಮುಂದಾಗಿದೆ.

ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್(ಎಚ್‌ಪಿಸಿಎಲ್) ಜತೆಗೂಡಿ ಈ ಸೇವೆಯನ್ನು ಆರಂಭಿಸಿದೆ.

'ಎಚ್‌ಇಐಡಿ'ಯ ಬ್ಯಾಟರಿ ಸ್ವ್ಯಾಪ್ ಸೇವೆಯಡಿ ಆಯ್ದ ನಗರಗಳಲ್ಲಿ ಬ್ಯಾಟರಿ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ರಿಕ್ಷಾ ಚಾಲಕರು ತಮ್ಮ ಹತ್ತಿರದ ಬ್ಯಾಟರಿ ನಿಲ್ದಾಣಕ್ಕೆ ತೆರಳಿ ಚಾರ್ಜ್ ಆದ ಬ್ಯಾಟರಿ ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗಲಿದೆ' ಎಂದು ಎಚ್‌ಇಐಡಿ ತಿಳಿಸಿದೆ.

ಬೆಂಗಳೂರಿನ ಪ್ರಮುಖ ಸ್ಥಳಗಳಲ್ಲಿ ಬ್ಯಾಟರಿ ವಿನಿಮಯ ಕೇಂದ್ರಗಳನ್ನು ಈಗಾಗಲೇ ತೆರೆಯಲಾಗಿದ್ದು, ಎಲೆಕ್ಟ್ರಿಕ್ ಆಟೋರಿಕ್ಷಾ ಚಾಲಕರು ಈ ಸೇವೆ ಪಡೆದುಕೊಳ್ಳುತ್ತಿದ್ದಾರೆ. ಒಂದು ವರ್ಷದ ಅವಧಿಯಲ್ಲಿ ಇನ್ನೂ 70 ಕಡೆ ಬ್ಯಾಟರಿ ವಿನಿಯಮ ಕೇಂದ್ರಗಳನ್ನು ತೆರೆಯಲಾಗುತ್ತಿದೆ ಎಂದು ವಿವರಿಸಿದೆ.

ಐವರು ಕೆಎಎಸ್ ಅಧಿಕಾರಿಗಳಿಗೆ ಐಎಎಸ್ ಶ್ರೇಣಿಗೆ ಬಡ್ತಿ

ಬೆಂಗಳೂರು: ರಾಜ್ಯ ನಾಗರಿಕ ಸೇವೆಯ (ಕೆಎಎಸ್) ಐವರು ಅಧಿಕಾರಿಗಳಿಗೆ 'ಐಎಎಸ್' ಶ್ರೇಣಿಗೆ ಬಡ್ತಿ ನೀಡಿ ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ (ಡಿಒಪಿಟಿ) ಅಧಿಸೂಚನೆ ಹೊರಡಿಸಿದೆ.

2021ನೇ ಸಾಲಿನ ಆಯ್ಕೆ ಪಟ್ಟಿ ಅನ್ವಯ ಪ್ರವೀಣ್ ಪಿ. ಬಾಗೇವಾಡಿ, ಶಶಿಧರ ಕುರೇರ, ವಿ. ಸದಾಶಿವ ಪ್ರಭು, ಪ್ರಕಾಶ್ ಜಿ.ಟಿ. ನಿಟ್ಟಾಲಿ, ಶ್ರೀರೂಪ ಈ ಐವರು ಅಧಿಕಾರಿಗಳು ಐಎಎಸ್‌ಗೆ ಬಡ್ತಿ ಪಡೆದಿದ್ದಾರೆ.

ಪ್ರವೀಣ್ ಬಾಗೇವಾಡಿ ಅವರು 1998ರ ಬ್ಯಾಚಿನ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿ. ಕೆಪಿಎಸ್‌ಸಿ ಪ್ರಮಾದದಿಂದ ಮೊದಲು ತಹಶೀಲ್ದಾರ್ ಹುದ್ದೆಗೆ ಆಯ್ಕೆಯಾಗಿ 2012ರಲ್ಲಿ ಉಪವಿಭಾಗಾಧಿಕಾರಿಯಾಗಿ ಬಡ್ತಿ ಪಡೆದಿದ್ದರು. ಹೈಕೋರ್ಟ್ ತೀರ್ಪಿನಂತೆ ಕೆಪಿಎಸ್‌ಸಿ ಪರಿಷ್ಕರಿಸಿದ್ದ ಪಟ್ಟಿಯಲ್ಲಿ ಉಪವಿಭಾಗಾಧಿಕಾರಿಯಾದ ಅವರು 2019ರಲ್ಲಿ ಸ್ಥಾನಪಲ್ಲಟಗೊಂಡಿದ್ದರು. ಉಳಿದ ನಾಲ್ವರು ಅಧಿಕಾರಿಗಳು ನಂತರ ಸಾಲಿನ ಕೆಎಎಸ್ ಅಧಿಕಾರಿಗಳು.

ಜ್ಯೇಷ್ಠತೆ ಆಧಾರದಲ್ಲಿ ಐಎಎಸ್ (ಕರ್ನಾಟಕ ಕೇಡರ್) ಶ್ರೇಣಿಗೆ ಪದೋನ್ನತಿ ನೀಡಲು ಯುಪಿಎಸ್‌ಸಿ (ಕೇಂದ್ರ ಲೋಕಸೇವಾ ಆಯೋಗ) ಜುಲೈ 15 ರಂದು ಆಯ್ಕೆ ಸಮಿತಿ ಸಭೆ ನಡೆಸಿತ್ತು. ಸಭೆಯಲ್ಲಿನ ನಿರ್ಣಯದಂತೆ ಬಡ್ತಿ ಪಡೆದ ಅಧಿಕಾರಿಗಳ ಹೆಸರುಗಳನ್ನು ಅಧಿಕೃತವಾಗಿ ಪ್ರಕಟಿಸಲಾಗಿದೆ.

ವಂಚನೆ ಪ್ರಕರಣ: ನಟ ರಜನೀಕಾಂತ್ ಪತ್ನಿ ಲತಾ ಭಾಗಶಃ ನಿರಾಳ

ಬೆಂಗಳೂರು: 'ಕೊಚ್ಚಾಡಿಯನ್' ಸಿನಿಮಾದ ಆರ್ಥಿಕ ನಷ್ಟಕ್ಕೆ ಸಂಬಂಧಿಸಿದಂತೆ ನಟ ರಜನೀಕಾಂತ್ ಪತ್ನಿ ಲತಾ ವಿರುದ್ಧದ ನಾಲ್ಕು ಆರೋಪಗಳಲ್ಲಿ ಮೂರು ಆರೋಪಗಳನ್ನು ಹೈಕೋರ್ಟ್ ರದ್ದುಪಡಿಸಿದೆ.

ಫೋರ್ಜರಿ ಪ್ರಕರಣದ ವಿಚಾರಣೆ ಮುಂದುವರಿಸಿ ಕಾನೂನು ಪ್ರಕಾರ ವಿಲೇವಾರಿ ಮಾಡುವಂತೆ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ನಿರ್ದೇಶಿಸಿದೆ.

ಈ ಸಂಬಂಧ ಲತಾ ಅವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿದ್ದು, ಈ ಕುರಿತಂತೆ ಇದೇ 2ರಂದು ಆದೇಶಿಸಿದೆ.

ಲತಾ ವಿರುದ್ಧದ ಐಪಿಸಿ ಕಲಂ 196, 199 ಮತ್ತು 420ರ ಅಡಿ ದಾಖಲಾದ ಪ್ರಕರಣಗಳನ್ನು ನ್ಯಾಯಪೀಠವು ರದ್ದುಗೊಳಿಸಿದೆ.

ವನ್ಯಜೀವಿಗಳ ಜತೆಗೆ ರೈತರ ಸಹಬಾಳ್ವೆ: ಧ್ರುವ ಪಾಟೀಲ

'ಕೃಷ್ಣಮೃಗಗಳ ರಕ್ಷಣೆಗೆ ವನ್ಯಜೀವಿ ಧಾಮ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕು ಕೃಷ್ಣ ಮೃಗಗಳ ಆವಾಸ ಸ್ಥಾನವಾಗಿದ್ದು, ಅವುಗಳ ರಕ್ಷಣೆಗೆ ಅರಣ್ಯ ಇಲಾಖೆ ಮತ್ತು ಖಾಸಗಿ ಸಹಭಾಗಿತ್ವದಲ್ಲಿ 'ಸಮುದಾಯ ಮೀಸಲು ಪ್ರದೇಶ' ನಿರ್ಮಾಣ ಅಗತ್ಯ ಎಂದು ಸೊಸೈಟಿ ಫಾರ್ ಪ್ರೊಟೆಕ್ಷನ್ ಆಫ್ ಪ್ಲಾಂಟ್ಸ್ ಆ್ಯಂಡ್ ಅನಿಮಲ್ಸ್ (ಎಸ್‌ಪಿಪಿಎ) ಹೇಳಿದೆ.

'ಇಂಡಿ ತಾಲ್ಲೂಕಿನಲ್ಲಿ ಎರಡು ವರ್ಷಗಳ ಹಿಂದೆ ಬೆರಳೆಣಿಕೆಯಷ್ಟಿದ್ದ ಕೃಷ್ಣ ಮೃಗಗಳ ಸಂಖ್ಯೆ ಈಗ 300ಕ್ಕೆ ಏರಿಕೆಯಾಗಿದೆ. ಕಡಿಮೆ ಸಮಯದಲ್ಲಿ ಅವುಗಳ ಸಂಖ್ಯೆ ಏರಿಕೆಯಾಗಿರುವುದು ಮಹತ್ವದ ಬೆಳವಣಿಗೆ' ಎಂದು ಎಸ್‌ಪಿಪಿಎ ಸಂಸ್ಥಾಪಕ ಧ್ರುವ ಪಾಟೀಲ ಅವರು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದರು.

'ರೈತರು ಈ ವನ್ಯಜೀವಿಗಳ ಜತೆ ಸಹಬಾಳ್ವೆ ನಡೆಸುತ್ತಿದ್ದಾರೆ. ಕೃಷ್ಣಮೃಗ ಎಂದು ಕರೆಯುವುದರಿಂದ ಅವುಗಳ ಬಗ್ಗೆ ಜನರಿಗೆ ದೈವಿಕ ಭಾವನೆ ಇದೆ. ಆದ್ದರಿಂದ ಅವುಗಳ ಪ್ರಾಣಕ್ಕೆ ಈವರೆಗೆ ಅಪಾಯ ಬಂದಿಲ್ಲ. ಆದರೆ, ಬೆಳೆಗಳನ್ನು ರಕ್ಷಿಸಿಕೊಳ್ಳಲು ಕೆಲ ರೈತರು ವಿದ್ಯುತ್ ತಂತಿ ಬೇಲಿ ನಿರ್ಮಿಸಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಈ ಪ್ರಾಣಿಗಳು ಅಪಾಯಕ್ಕೆ ಸಿಲುಕುವ ಸಾಧ್ಯತೆ ಇದೆ' ಎಂದು ಅವರು ಆತಂಕ ವ್ಯಕ್ತಪಡಿಸಿದರು.



ಧ್ರುವ ಪಾಟೀಲ

'ಖಾಸಗಿ ಮತ್ತು ಸರ್ಕಾರದ ಸಹಭಾಗಿತ್ವದಲ್ಲಿ ಸಮುದಾಯ ಮೀಸಲು ಪ್ರದೇಶ ನಿರ್ಮಿಸುವುದು ಸೂಕ್ತ ಎಂಬ ಸಲಹೆಯನ್ನು ಅರಣ್ಯ ಇಲಾಖೆಗೆ ನೀಡಿದ್ದೇವೆ. ಅದು ಸಾಕಾರಗೊಂಡರೆ ಕೃಷ್ಣಮೃಗಗಳ ರಕ್ಷಣೆ ಜತೆಗೆ ರೈತರ ಬೆಳೆಗಳೂ ಉಳಿಯುತ್ತವೆ' ಎಂದು ಅವರು ತಿಳಿಸಿದರು.

'ಅಧಿಕಾರಿಗಳ ಮಟ್ಟದಲ್ಲಿ ಪೂರಕ ಸ್ಪಂದನ ದೊರಕಿದೆ. ಇಂಡಿ ತಾಲ್ಲೂಕಿನ ನಂದರ್ಗಿ, ಜೇವೂರ, ಧುಮುಕೂಳ, ಬರ್ದೂಳ, ಶಿಗ್ನಾಪುರ ಸುತ್ತಮುತ್ತ 400ರಿಂದ 500 ಎಕರೆ ಜಾಗವನ್ನು ಮೀಸಲು ಅರಣ್ಯವಾಗಿ ಪರಿವರ್ತಿಸುವ ಬಗ್ಗೆ ಚರ್ಚೆಗಳು ನಡೆದಿವೆ' ಎಂದು ಹೇಳಿದರು.

'ಇಲ್ಲಿರುವ ಕೃಷ್ಣಮೃಗಗಳ ಬಗ್ಗೆ ಸಾಕ್ಷ್ಯಚಿತ್ರವೊಂದನ್ನು ಸಿದ್ಧಪಡಿಸುವ ತಯಾರಿಯಲ್ಲಿದ್ದೇವೆ. ಚಿತ್ರ ಮತ್ತು ವಿಡಿಯೊಗಳನ್ನು ಸೆರೆ ಹಿಡಿಯಲು ಎರಡು–ಮೂರು ವರ್ಷಗಳಷ್ಟು ಸಮಯ ಬೇಕಾಗುತ್ತದೆ' ಎಂದು ಅವರು ವಿವರಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED LECTURERS in Commerce, Physics, English, Computer Science, Kannada and Physical Education for Vidyavana College, Tirumalashettyhalli, Whitefield, Bengaluru. Walk-in for Interview. Contact: 9663389388.

R E S POLYTECHNIC (Estd: 1986)
5, Sunkadakatte, Magadi Main Road, Hegganahalli Cross, Bengaluru-91 Phone: 080-23484814 99166 46466
DIPLOMA COURSES OFFERED:
1. Automobile 2. Information Technology 3. Computer Science 4. Electrical & Electronics 5. Electronics & Commn. 6. Civil 7. Mechanical 8. Fashion Technology 9. Commercial Practice
REQUIRE FULLTIME / PARTTIME - LECTURERS
LAB INSTRUCTORS / ASSISTANTS
For all above courses for the year 2022-2023
Admission for DIPLOMA ENGINEERING
Just pay 5,000 to book your seats to save one year..
HURRY UP!! Only few DAYS left...
Eligibility: ♦ 10th PASS for 3 years Diploma
Lateral Entry ♦ PUC / ITI PASS for 2 Years Diploma
Note: Send your resume to: respt450@gmail.com
WITH stating branch of your specialization in SUBJECT line
Apply to CHAIRMAN within 10 days
RES-22315

St. Paul's Public School
No.52/1, Erannapalya, A.C Post, Bangalore - 560045
REQUIRES STAFF
- TEACHING STAFF TRAINED GRADUATES/ UNDER GRADUATES
- DATA ENTRY
- FLOOR MANAGERS
- SUPPORT STAFF
- PHYSICAL TRAINER (PT)

For details kindly contact the office for immediate appointment
Ph: 8105823292, 8105823392
Email: paulschool007@gmail.com

MES COLLEGE of Pharmacy, Bengaluru, Requires following Faculty. 1. M.PHARM Pharmaceutics. 2. M.PHARM Pharmachestry. 3. M.PHARM Pharmacology. OR PHARMA.D. Call: 9342850853/ 9342859503

WANTED ENGLISH MEDIUM TRAINED Lady Teachers for Primary/ High School to teach English/ Social Science. Lady Graduates Interested in teaching can also apply, Attractive Salary with PF and ESI Facilities, Contact in person (10.00 am-3.00 pm on all working days) -Secretary, Deccan Educational Society®, No.95, 3rd Cross, Srirampuram, Bengaluru– 560021 (Near Sampige Theater, Malleswaram).

REQUIRED EXPERIENCED Teacher Maths, Science Nayana Vidyanikethan Patashale Near Kengeri P. No: 9632202212 / 9606746931

WANTED TEACHERS with BA/MA (Eng, Hindi and SS) with BEd, BCA/MCA. Salary 14000 to 25000. Contact Sidhartha International School, Peenya, Dasarahalli. Contact No. 9620100046, 9964670328.

WANTED IMMEDIATELY Primary, Maths, Craft, Music, Sanskrit Teachers With Experience Ge Kay Convent 3rd Stage 2nd Block, Basaveshwar Nagar, Blr-79, Contact Principal: 9880800758

WANTED LADY Yoga/ P.E. TEACHERS. B.Sc B.Ed; D.Ed; N.T.T. MISTRESSES. Those appeared for exam may also apply. Decent Salary. New Oxford English School, VI Cross, Gandhinagar, Bangalore-9. Walk-in Interview. Phone: 22261590/ 41475015.

WANTED ENGLISH Teacher for School Sagar Convent Kanakapura Main Bangalore 82 Near Aps Engineering College Good Salary: 9342552428

Manager

WANTED OFFICE Manager Well Versed With Typing Drafting and Maintaining Accounts For Construction Company In-Around Bannerghatta Road BTM-Bangalore. Minimum Experience 7-8years Salary Negotiable Mail: perodybuilders@yahoo.co.in Call:9845332110

WANTED BUILDING manager for 13 apartment building, off Kasturba Road with experience in facilities management in large building. Tech diploma or degree preferred. English/ Hindi must. Apply with details to gkopsp@gmail.com Contact: 9448365665

DH DECCAN HERALD | ಪ್ರಜಾವಾಣಿ

Classifieds EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
- Admission Notice,
- Education Success
- Congratulation Ads

Part-Time Jobs

GOVERNMENT RECOGNISED Data Entry Typing Work From Home, Daily Payment, No Target, No Accuracy, With Govt Bond. For details M: 9742344447

Hospital & Medical Jobs

PRISTINE HOSPITAL & RESEARCH CENTRE PVT. LTD.
No.877, Modi Hospital Road, Second Stage Extension, Bangalore-86
Business Development Manager - 1 Post
2+ Years Medical Marketing, Marketing Executives, Experienced in Hospital / Medical Industry
Business Development Executive - 2 Posts
Fresher's welcome: UG completion, Fluent in English and Kannada
PR - 1 Post
1 year experience, Preferably female: Degree completion Fluent in English & Kannada
Nursing Superintendent - 1 Post
5+ years of experience as a Nursing Superintendent with NABH Standardisation & BSC/MSC Nursing.
Ph: 080-4135 4444, Mobile-+91 98807 62701

NABH & NABL Accredited P. D. Hinduja Sindhi Multispeciality Hospital, Bangalore requires
- Part time ENT Surgeon
- Dermatologist
- Endocrinologist
- Neurologist
- Neurosurgeon
- Junior Specialist in Medicine D.N.B/ M.D
- Psychologist
- Marketing Officer
- Medical Record Technician / Medical Transcriptionist
- Staff Nurses

Mail Resume to sandhya@hindujasindhihospital.com
Ph: 7899585377 / 49030307

Drivers

WANTED DRIVERS Required 'Female & Male Drivers' to Drive Electric Cars for MNC's Please Contact: GURU TOURS AND TRAVELS: 9448042351 /7349785449 /080-22224555 /080-22222050

General

LADY ADVOCATE, Reqd. Skills: Kannada Reading, Title Verification Work, Registration, Property Law, Fresher preferred, Off: Sheshadripuram, 9:30AM to 6:30PM, Ph:080-23561811/ 9844034104/ 9141218400 (E-mail: dpshiva@gmail.com)

Wanted

WANTED PLASTIC Moulding Operators. And ITI/ Diploma Technicians with Computer Knowledge Male/ Female for a Private Limited Company in Prakash Nagar, Bangalore: 9448481947/ 9448376584: magraa@magraa.in

Hotel

BENGALURU'S REPUTED Catering Company looking for OPERATION MANAGER (male/female) with 5 years experience only in Industries, Factories and Institutional Canteen/Mess. Contact: 9900141311 industrialcaterers@gmail.com

Multiple Vacancy

REQUIRED TEAMLEADER, Telecaller, & FieldExecutive For BankLoan collection. direct recruitment to company Contact:- 9620206756, 9620200756.

OPPORTUNITY FOR Retired Officials,Bankers,NRI, Teachers, Professionals, Homemakers, CAs.Earn salary+ Incentives. CALL:8095301555

Looking for
SALE EXECUTIVES
OPERATION EXECUTIVES
CUSTOMER CARE EXECUTIVES
PAYMENT COLLECTION EXECUTIVES
DATA ENTRY OPERATOR for Chandapura and Nelamangala Hub
WALK-IN INTERVIEW
KGS LOGISTICS P LTD
CHANDAPURA
Survey No.42, Hosur Main Road, Anekal Taluk, Old Chandapura, Opp. RK Dhabha, Bangalore 560099
Nelamangala Hub
No.1326-1/22, Sy No.22, Opp. TCI Behind Scotts Garments, Madavara Village, Tumkur Main Road, NH-4, Bengaluru Dist-562123
Contact: 9513716391 9513716395/ 9513716400
admin@kgscargo.co.in

FEMALE CANDIDATE required for news- media related firm. Candidate should know read and write Kannada, English and speaking fluency. 9019043325

Walk-in

WE ARE LOOKING FOR NEW TALENTS FOR
- MEDIA SALES
- DIGITAL MARKETING

IAM PVT.LTD
WALK IN INTERVIEW ON 10TH -11TH AUG 2022
#192, 3RD FLOOR, SHRI SATHYA ARCADE, SERVICE ROAD OF WEST OF CHORD ROAD MAHALAKSHMIPURAM, BANGALORE - 86
Mob: 9902 002 111

REAL ESTATE SELLING

Industrial & Factory

Tumkur Road

SALE 1 to 100 Acres Industrial Warehouse Commercial Agriculture Land around Nelamangala, Dabaspet. NAIK: 9141326819

REAL ESTATE BUYING

Sites

Banashankari

BDA SITES WANTED BANASHANKARI 6TH STAGE.,ANJANAPURA, J.P NAGAR 8TH-9TH PHASE,..BCC LAYOUT IMMEDIATE SETTIEMENT CALL:9845444588

AUTOMOTIVE

Four Wheelers Selling

Others

ACCIDENT VEHICLE KA-05 MV-3087 Volkswagen GT 2017 Model for Sale WITHOUT PAPERS. For Vehicle inspection Contact Ravikumar Jain- 09880077112. Quotation to Reach within SEVENDAYS

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building,Sites,Flats, Converted& Agriculture Lands Call:7411265189

WE ARRANGE Mortgage Loan, Housing loan & Purchase Loan on A-B & E Khata, CMC and Panchayat Khatas from Schedule Bank. If you require. Contact: 8971377299

WE FINANCE to NPA/ Default Properties to Release from Banks and Sell at Best Market Price.Call Verna Developers, MG-Road. 9916310226/ 9353128035

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

FINANCE AGAINST Land & Building Properties Industries Schools Hospitals Projects & NRI Funds.7358729820

PERSONAL

Change of Name

I PRIYA GANESH BHAT. R/a, #108, Durga Prasad, 7th main, 27th cross , 4th block Jayanagar, Bangalore-560011 Have Changed My Minor Daughter name from HANIKA SUBRAMANYA / HANIKA.S To HANIKA BHAT vide Affidavit Dated 08/08/2022 Before Notary T.R. Raghavendra Rao Bangalore

I, LEKHASHREE D/o Govindappa aged about 21 Years, R/at 1st Cross beside General Hostel Thyagaraj Colony Mulbagal Town Mulbagal Taluk Kolar Dist. Have changed my name to Lekhashree.G and my Father name as G.M.Govindappa and also my Mother name as M. Varalakshmi. Vide affidavit dated 02.08.2022 before Notary P.M Sadhashivaiah Mulbagal. Henceforth we shall be called as Lekhashree.G. Father name as G.M.Govindappa, also my mother name as M. Varalakshmi only. Attachments area

I, MURUGANANTHAM SUBATHRA W/o 6497308N-Sep/ASH- SELVAM K R/a Muthaliyar Patti, Vikramasingapram, Tirunelveli, TN changed name from MURUGANANTHAM SUBATHRA to SUBATHRA S 09-08-2022 notary K.V.Mani, Bangalore.

I, A. Chanchal Agarwal D/o Ashok Agarwal, Yogitha Jindal, R/a #27/604, 9th C Main 6th Cross Hampinagar Bangalore- 560104, Have Changed My Name to Chanchal Agarwal Vide Affidavit Dated 13-08-2021 Before Notary MK Devaki, Bangalore.

I, H.B. NAGALAKSHMI alias NAGALAKSHMI alias NAGALAKSHMI H.B. Residing at #B2-2045, Sobha Hill View, Sobha Sunscape Thalaghattapura, Kanakapura Main Road, Bangalore- 560062, have changed my name to NAGALAKSHMI HYDERABAD BABOO vide affidavit dated 08.08.2022, before notary V. Rajashekara, Bangalore. Henceforth I shall be known as NAGALAKSHMI HYDERABAD BABOO only.

I, SAROJA Subba Rao, aged about 73 years, W/o late A.R. Subba Rao, residing at No.356, "Gurukrupa", 1st Floor, 5th Main, Srinagara, Bengaluru- 560050 have changed my name from Smt. SAROJAMMA SUBBA RAO to Smt. SAROJA SUBBA RAO Vide affidavit dated 8/8/2022 before Notary Public Sri. Jayappa A. Bangalore

I, NAGARATNA SHARAD BHAT Residing at No. 18A, Aniruddha Niwas, SBI Colony, K.Kodichikkanahalli, Bilekahali, Bengaluru- 560076, have changed my name to NAGARATHNA S BHAT, vide affidavit dated 08.08.2022, before notary B. Chitra, Bangalore. Henceforth I shall be called NAGARATHNA S BHAT only.

I, PENNABADI Deepesh Kumar Reddy S/o Pennabadi Eswara Reddy, 201, E5 Preeti Developers, Aditi Greenscapes 1st Phase MCECHS Layout, Sampigehalli, Bangalore 560077 have changed my name to P V DEEPESH KUMAR REDDY Vide Affidavit dated 09-08-2022 sworn to before notary G R Ravichandra Reddy Advocate Bangalore.

I, BANDAMMA .S, W/o Harish. H 28 years, Residing at Balekoppa village, Muddanahalli post, Shikaripura taluka, Shivamogga, district 577427. have changed my name to Roopa. H, vide affidavit dated 08.08.2022 sworn before notary Chandrashekar, Bangalore

KHANT PUSHPABEN JUJARBHAI W/O 6503287F SEP PARMAR LALSINH JAVANSINH R/a SONISAR TALOD BADODARA SABARKANTHA GUJARAT my name KHANT PUSHPABEN JUJARBHAI TO PARMAR PUSHPABEN LALSINH NOTARY KV MANI

EDUCATION CORNER

ಕ್ಲಾಸಿಫೈಡ್ಸ್

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 | ESTD.: 1997 | COMEDK CODE: E149
BE: Bachelor of Engineering
- Computer Science
- Information Science
- Artificial Intelligence & Machine Learning
- Electronics & Communication
- Mechanical
- Civil

Ph.D Program
CSE | E&C | MECH
Maths | Chemistry
Physics
VKIT

College of Pharmacy
D.Pharm
B.Pharm
M.Pharm
CET B060
Institute of Management
BCA | BCA - Hons.
BBA | BBA - Hons.
MBA | M.Com
PGCET B-323
College of Law
5 Yrs : BA - LLB | B.Com - LLB
3 Yrs : LLB
Degree College
BSc | BA | BA-Journalism
B.Com | B.Com-Data Analytics
NAAC ACCREDITED
2022-23 Admissions Open
7625013738
9513953482
Admission Center: Dr.Rajkumar Road, Next to Orion Mall, Rajajinagar II Stage, Bengaluru-560055
VKIT Campus: Kumbalagodu, Kengeri, Bengaluru-560074
JES

Golden opportunity for SSLC / PUC passed student's ...
SIDDAGANGA INSTITUTE OF PARAMEDICAL SCIENCES
(Recognised by Ministry of Medical Education, Govt of Karnataka)
43, Narasimhaswamy Layout, Service Road, Near Laggere Last Bus Stop, Laggere, Bengaluru-560058
ADMISSIONS ARE OPEN 2022-2023
JOB ORIENT DIPLOMA IN PARAMEDICAL COURSES
LABORATORY / RADIOLOGY / DIALYSIS
OPERATION THEATER / OPHTHALMIC
Eligibility & Duration: 3 years for SSLC & 2 years for PUC (Science)
For admission contact: 9844068838 / 9036181812
SGGNG-22301

RGUHS FELLOWSHIP IN ALLERGY
ADMISSION NOTICE
Fellowship in Allergy and Allergen Specific Immunotherapy 2022-23
Applications are invited for the Fellowship in Allergy and Allergen Specific Immunotherapy (ASI) awarded by Rajiv Gandhi University of Health Sciences. This program provides expertise in the diagnosis and management of allergic disorders with an emphasis on Immunotherapy.

Duration	: 12 Months
No of Seats	: Four
Course Director	: Dr. Nagendra Prasad KV
Dean & Course Coordinator	: Dr. Gayathri Devi S
Last Date to Apply	: 19th August 2022

Minimum qualifications for admission : MD/DNB in Internal Medicine/Pediatrics/ Respiratory Medicine/Dermatology/MS/DNB in ENT
To apply, visit : www.bafacademy.org OR contact by Email / Phone
BAF Academy & Bengaluru Allergy Centr
Jayanagar 4th Block, Bengaluru – 560011
Email: bafacademy20@gmail.com • Mob No. : 9019856454, 6360402341



ಆಭರಣ ರಫ್ತು ಉತ್ತೇಜನ ಮಂಡಳಿಯು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಲಬಾರ್ ಗೋಲ್ಡ್ ಹಾಗೂ ಡೈಮಂಡ್ಸ್ 2021ನೇ ಸಾಲಿನಲ್ಲಿ ಅತ್ಯಧಿಕ ಉದ್ಯೋಗ ಹಾಗೂ ಜಾಗತಿಕ ಮಟ್ಟದಲ್ಲಿ ಚಿಲ್ಲರೆ ವ್ಯಾಪಾರ ವಿಭಾಗದ ಪ್ರಶಸ್ತಿ ತನ್ನದಾಗಿಸಿಕೊಂಡಿದೆ. ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯವರು ಪ್ರಶಸ್ತಿ ಸ್ವೀಕರಿಸಿದರು.

ಅಕ್ರಮ ಸಾಗಣೆ 1.70 ಕೆ.ಜಿ ಚಿನ್ನ ಜಪ್ತಿ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಚಿನ್ನವನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಇಬ್ಬರು ಪ್ರಯಾಣಿಕರನ್ನು ವಶಕ್ಕೆ ಪಡೆದಿರುವ ಕಸ್ಟಮ್ಸ್ ಅಧಿಕಾರಿಗಳು, ₹90 ಲಕ್ಷ ಮೌಲ್ಯದ 1 ಕೆ.ಜಿ 70 ಗ್ರಾಂ ಚಿನ್ನ ಜಪ್ತಿ ಮಾಡಿದ್ದಾರೆ.

‘ಥಾಯ್ಲೆಂಡ್ ಹಾಗೂ ಬಹರೇನ್ ದೇಶದಿಂದ ಪ್ರತ್ಯೇಕವಾಗಿ ವಿಮಾನದಲ್ಲಿ ನಗರದ ನಿಲ್ದಾಣಕ್ಕೆ ಬಂದಿಳಿದಿದ್ದ ಪ್ರಯಾಣಿಕರ ಬಗ್ಗೆ ಅನುಮಾನ ಬಂದಿತ್ತು. ತಪಾಸಣೆ ನಡೆಸಿದಾಗ, ಬಟ್ಟೆ ಹಾಗೂ ಒಳ ಉಡುಪಿನಲ್ಲಿ ಚಿನ್ನದ ಬಿಸ್ಕತ್‌ಗಳು ಪತ್ತೆಯಾದು’ ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಘಟನೆ

ಬಾಂಬ್ ಬೆದರಿಕೆ: ಇಬ್ಬರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದ ಇಂಡಿಗೊ ವಿಮಾನದಲ್ಲಿ ಬಾಂಬ್ ಇರುವುದಾಗಿ ಬೆದರಿಸಿದ್ದ ಆರೋಪದಡಿ ಇಬ್ಬರು ಪ್ರಯಾಣಿಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘174 ಪ್ರಯಾಣಿಕರಿದ್ದ ಇಂಡಿಗೊ ವಿಮಾನ, ಜೈಪುರದಿಂದ ಬೆಂಗಳೂರಿಗೆ ಸೋಮವಾರ ರಾತ್ರಿ 9.25ರ ಸುಮಾರಿಗೆ ಬಂದಿತ್ತು. ಅದರ ಶೌಚಾಲಯದಲ್ಲಿದ್ದ ಟಿಶ್ಯೂ ಪೇಪರ್‌ನಲ್ಲಿ ಬೆದರಿಕೆ ಸಂದೇಶವಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿಮಾನವನ್ನು ನಿಲ್ದಾಣದಲ್ಲಿ ಇಳಿಸಬೇಡಿ. ವಿಮಾನದಲ್ಲಿ ಬಾಂಬ್ ಇದೆ. ಇಳಿಸಿದರೆ ಸ್ಫೋಟವಾಗುತ್ತದೆ’ ಎಂದು ಟಿಶ್ಯೂ ಪೇಪರ್‌ನಲ್ಲಿ ಬರೆಯಲಾಗಿತ್ತು. ಅದನ್ನು ಗಮನಿಸಿದ್ದ ವಿಮಾನದ ಸಿಬ್ಬಂದಿ, ರಕ್ಷಣಾ ಪಡೆಗಳಿಗೆ ಮಾಹಿತಿ ನೀಡಿದ್ದರು. ನಂತರವೇ ವಿಮಾನವನ್ನು ನಿಲ್ದಾಣದಲ್ಲಿ ಇಳಿಸಲಾಗಿತ್ತು’ ಎಂದು ತಿಳಿಸಿವೆ.

‘ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದ ಜೊತೆ ವಿಮಾನದಲ್ಲಿ ಪರಿಶೀಲನೆ ನಡೆಸಲಾಯಿತು. ಯಾವುದೇ ಸ್ಫೋಟಕ ವಸ್ತು ಪತ್ತೆಯಾಗಲಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆಯೆಂದು ರಕ್ಷಣಾ ಪಡೆಯವರು ಘೋಷಿಸಿದರು’ ಎಂದು ಮೂಲಗಳು ಹೇಳಿವೆ.

ಪ್ರಯಾಣಿಕರ ಕೈ ಬರಹ ಸಂಗ್ರಹ: ವಿಮಾನದಲ್ಲಿದ್ದ ಪ್ರಯಾಣಿಕರೇ ಬೆದರಿಕೆ ಹಾಕಿರುವುದು ಖಾತ್ರಿಯಾಗಿತ್ತು. ಎಲ್ಲ ಪ್ರಯಾಣಿಕರ ಕೈ ಬರಹ ಸಂಗ್ರಹ ಮಾಡಿದ ರಕ್ಷಣಾ ಪಡೆಗಳವರು, ಪರಿಶೀಲನೆ ನಡೆಸಿದರು.

ಟಿಶ್ಯೂ ಪೇಪರ್‌ನಲ್ಲಿದ್ದ ಬರಹಕ್ಕೆ ಹೋಲಿಕೆಯಾದ ಇಬ್ಬರು ಪ್ರಯಾಣಿಕರನ್ನು ವಶಕ್ಕೆ ಪಡೆದಿರುವ ಪೊಲೀಸರು, ಅವರ ವಿಚಾರಣೆ ನಡೆಸುತ್ತಿದ್ದಾರೆ. ಉಳಿದವರನ್ನು ಮಾತ್ರ ನಿಲ್ದಾಣದಿಂದ ಹೊರಗೆ ಕಳುಹಿಸಲಾಗಿದೆ.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

ಸಂಕ್ಷಿಪ್ತ ಸುದ್ದಿ

ಆ್ಯಸಿಡ್ ದಾಳಿ: ದೋಷಾರೋಪ ಪಟ್ಟಿ ಸಿದ್ಧ

ಬೆಂಗಳೂರು: ಪ್ರೀತಿ ನಿರಾಕರಿಸಿದರೆಂಬ ಕಾರಣಕ್ಕೆ 24 ವರ್ಷದ ಯುವತಿ ಮೇಲೆ ಆ್ಯಸಿಡ್ ಎರಚಿದ್ದ ಆರೋಪಿ ನಾಗೇಶ್ ಬಾಬು (30) ವಿರುದ್ಧ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ದೋಷಾರೋಪ ಪಟ್ಟಿ ಸಿದ್ಧಪಡಿಸಿದ್ದು, ಸದ್ಯದಲ್ಲೇ ನ್ಯಾಯಾಲಯಕ್ಕೆ ಸಲ್ಲಿಸಲಿದ್ದಾರೆ.

ಏಪ್ರಿಲ್ 28ರಂದು ಕೃತ್ಯ ಎಸಗಿ ಪರಾರಿಯಾಗಿದ್ದ ನಾಗೇಶ್, ತಮಿಳುನಾಡಿನಲ್ಲಿ ಸ್ವಾಮೀಜಿ ವೇಷದಲ್ಲಿ ಸಿಕ್ಕಿಬಿದ್ದಿದ್ದ. ಈತನನ್ನು ಬಂಧಿಸಿ ಮಹಜರು ಹಾಗೂ ಇತರೆ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿರುವ ಪೊಲೀಸರು, ಸುಮಾರು 700 ಪುಟಗಳ ಪ್ರಾಥಮಿಕ ದೋಷಾರೋಪ ಪಟ್ಟಿ ಸಿದ್ಧಪಡಿಸಿದ್ದಾರೆ.

‘ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ಸುಂಕದಕಟ್ಟೆಯಲ್ಲಿರುವ ಫೈನಾನ್ಸ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವತಿಯ ಬೆನ್ನು ಬಿದ್ದಿದ್ದ ಆರೋಪಿ, ಪ್ರೀತಿಸುವಂತೆ ಪೀಡಿಸುತ್ತಿದ್ದ. ಇದಕ್ಕೆ ಒಪ್ಪದಿದ್ದಾಗ, ಆ್ಯಸಿಡ್ ಎರಚಿದ್ದ. ಘಟನೆಯಿಂದ ಗಾಯಗೊಂಡ ಯುವತಿ, ಇಂದಿಗೂ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.

ಕಿದ್ವಾಯಿ: ರಕ್ತದಾನ ಶಿಬಿರ ನಾಳೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಇದೇ ಗುರುವಾರ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಿದೆ.

‘ಸಂಸ್ಥೆಯ ಆವರಣದಲ್ಲಿ ಈ ಶಿಬಿರ ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ನಡೆಯಲಿದೆ. ಕ್ಯಾನ್ಸರ್ ರೋಗಿಗಳಿಗೆ ಹೆಚ್ಚಿನ ರಕ್ತದ ಅಗತ್ಯವಿದ್ದು, ಇಲ್ಲಿ ದಾಖಲಾಗುವ ರೋಗಿಗಳಲ್ಲಿ ಶೇ 60ರಷ್ಟು ಮಂದಿಗೆ ರಕ್ತ ನೀಡಬೇಕಾಗುತ್ತದೆ’ ಎಂದು ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ಮನವಿ ಮಾಡಿಕೊಂಡಿದ್ದಾರೆ.

ಸಂಪರ್ಕ ಸಂಖ್ಯೆ: 9448949217 ಅಥವಾ 9632310056

ಐಇಟಿ ವಿದ್ಯಾರ್ಥಿವೇತನ: ಅವಧಿ ವಿಸ್ತರಣೆ

ಬೆಂಗಳೂರು: ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯ (ಐಇಟಿ) ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಆಗಸ್ಟ್ 15ರ ವರೆಗೆ ವಿಸ್ತರಿಸಲಾಗಿದೆ.

ಈಗಾಗಲೇ 20 ಸಾವಿರಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಎಲ್ಲ ಎಐಸಿಟಿಇ, ಯುಜಿಸಿ ಅನುಮೋದಿತ ಮತ್ತು ರಾಷ್ಟ್ರೀಯ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಕಠಿಣವಾದ ನಾಲ್ಕು ಹಂತದ ಪ್ರಕ್ರಿಯೆಯಲ್ಲಿ ನೋಂದಣಿಯು ಮೊದಲ ಹಂತವಾಗಿದೆ. ಮೌಲ್ಯಮಾಪನವು ನಾಲ್ಕು ಸುತ್ತಿನಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. **ಮಾಹಿತಿಗೆ:** https://bit.ly/Scholarship_Award_PR2 ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ನೈಸ್ ರಸ್ತೆಯಲ್ಲಿ ಅಪಘಾತ: ಕಾರಿನಲ್ಲಿದ್ದ ಯುವತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯ ನೈಸ್ ರಸ್ತೆಯಲ್ಲಿ ಕಾರು ಹಾಗೂ ಕಂಟೇನರ್ ವಾಹನದ ನಡುವೆ ಅಪಘಾತ ಸಂಭವಿಸಿದ್ದು, ಕಾರಿನಲ್ಲಿದ್ದ ಸುಶ್ಮಿತಾ (19) ಎಂಬುವರು ಮೃತಪಟ್ಟಿದ್ದಾರೆ.

‘ಮಂಡ್ಯದ ಸುಶ್ಮಿತಾ, ಬೆಂಗಳೂರಿನ ಬೊಮ್ಮನಹಳ್ಳಿ ಬಳಿಯ ಮಂಗಮ್ಮನಪಾಳ್ಯದಲ್ಲಿ ನೆಲೆಸಿದ್ದರು. ಪಿಯುಸಿ ಮುಗಿಸಿ ಕಂಪ್ಯೂಟರ್ ಕೋರ್ಸ್ ಮಾಡುತ್ತಿದ್ದರು. ದೇವರ ಕಾರ್ಯಕ್ಕೆಂದು ಇತ್ತೀಚೆಗೆ ಮಂಡ್ಯಕ್ಕೆ ಹೋಗಿದ್ದ ಸುಶ್ಮಿತಾ ಹಾಗೂ ಕುಟುಂಬದವರು, ಮಂಗಳವಾರ ನಸುಕಿನಲ್ಲಿ ಬೆಂಗಳೂರಿಗೆ ವಾಪಸು ಬರುತ್ತಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

‘ಕಾರಿನ ಚಾಲಕ ಅಭಿಷೇಕ್ ತೀವ್ರ ಗಾಯಗೊಂಡಿದ್ದು, ಬಿಜಿಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾರಿನಲ್ಲಿದ್ದ ಜಯಮ್ಮ (60), ಯಶವಂತ್ (14), ಸರಸ್ವತಮ್ಮ (37) ಸಹ ಗಾಯಗೊಂಡಿದ್ದು, ಕಾವೇರಿ ಆಸ್ಪತ್ರೆಯಲ್ಲಿದ್ದಾರೆ’ ಎಂದು ತಿಳಿಸಿದರು.

20 ದಿನಗಳ ಹಿಂದೆಯಷ್ಟೇ ಕಾರು ಖರೀದಿ: ‘ಮಂಡ್ಯದ ಅಭಿಷೇಕ್, 20 ದಿನಗಳ ಹಿಂದೆಯಷ್ಟೇ ಹೊಸ ಕಾರು ಖರೀದಿಸಿದ್ದರು. ಅದನ್ನು ಬೆಂಗಳೂರಿನಲ್ಲಿದ್ದ ಕಂಪನಿಗೆ ಬಾಡಿಗೆ ನೀಡುವುದಕ್ಕಾಗಿ ಸೋಮವಾರ ತಡರಾತ್ರಿ ಬೆಂಗಳೂರಿಗೆ ಬರುತ್ತಿದ್ದರು. ಸಂಬಂಧಿಕರೇ ಆಗಿದ್ದ ಸುಶ್ಮಿತಾ ಹಾಗೂ ಕುಟುಂಬದವರು ಸಹ ಅದೇ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಅಭಿಷೇಕ್ ಅತಿ ವೇಗವಾಗಿ ಕಾರು ಚಲಾಯಿಸಿದ್ದರು. ನೈಸ್ ರಸ್ತೆಯಲ್ಲಿ ನಿಯಂತ್ರಣ ತಪ್ಪಿದ್ದ ಕಾರು, ಎದುರಿಗೆ ಹೊರಟಿದ್ದ ಕಂಟೇನರ್ ವಾಹನಕ್ಕೆ ಡಿಕ್ಕಿ ಹೊಡೆದು ಉರುಳಿಬಿದ್ದಿತ್ತು. ಚಾಲಕನ ಪಕ್ಕದ ಸೀಟಿನಲ್ಲಿ ಕುಳಿತಿದ್ದ ಸುಶ್ಮಿತಾ ಸ್ಥಳದಲ್ಲೇ ಮೃತಪಟ್ಟರು. ಉಳಿದ ಗಾಯಾಳುಗಳನ್ನು ದಾರಿಹೋಕರು ಹಾಗೂ ಸ್ಥಳೀಯರೇ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ’ ಎಂದು ತಿಳಿಸಿದರು.

‘ಕಾರು ಚಾಲಕನ ನಿರ್ಲಕ್ಷ್ಯದಿಂದಲೇ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಅವರ ವಿರುದ್ಧವೇ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದೂ ಹೇಳಿದರು.

ನಗರದಲ್ಲಿ ಇಂದು

ಭಗವಾನ್ ಜಿಹ್ವೇಶ್ವರ ಜಯಂತಿ: ಸಾನ್ನಿಧ್ಯ: ಸ್ವಾಮಿ ನಾರಾಯಣಾನಂದ ಸರಸ್ವತಿ, ಉದ್ಘಾಟನೆ: ಬಿ.ಎಸ್. ಯಡಿಯೂರಪ್ಪ, ಮುಖ್ಯ ಅತಿಥಿಗಳು: ಕೆ. ಗೋಪಾಲಯ್ಯ, ಮಹೇಶ ಜೋಶಿ, ಆಯೋಜನೆ: ಸಂಯುಕ್ತ ಸ್ವಕುಳಸಾಳಿ ಸಂಘ, ಸ್ಥಳ: ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿಹಬ್ಬ ಭವನ, ಗಾಂಧಿನಗರ, ಬೆಳಿಗ್ಗೆ 10

ಡಿಜಿಟಲ್ ಗ್ರಂಥಾಲಯ ಬೆಳವಣಿಗೆ ಬಗ್ಗೆ ವಿಚಾರ ಸಂಕಿರಣ: ಉದ್ಘಾಟನೆ: ಜೆ.ಪಿ. ಸಿಂಗ್ ಜೂರೆಲ್, ಅಧ್ಯಕ್ಷತೆ: ಪ್ರೊ. ಸಂಘಮಿತ್ರ ಬಂದೋಪಾಧ್ಯಾಯ, ಆಯೋಜನೆ ಹಾಗೂ ಸ್ಥಳ: ಭಾರತೀಯ ಸಾಂಖ್ಯಿಕ ಸಂಸ್ಥೆ, ಮೈಸೂರು ರಸ್ತೆ, ಬೆಳಿಗ್ಗೆ 10

ಶೈಕ್ಷಣಿಕ ಸಮಾವೇಶ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಭಿನಂದನೆ: ಪಿ. ಪ್ರದೀಪ್, ಆಯೋಜನೆ: ಕರ್ನಾಟಕ ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜ್, ಅರಮನೆ ರಸ್ತೆ, ಬೆಳಿಗ್ಗೆ 10.30

ವಚನ ಶ್ರಾವಣ: ಗಾಯನ: ದೇವೇಂದ್ರಕುಮಾರ್ ಪತ್ತಾರ್, ಉಪನ್ಯಾಸ: ಎಸ್. ಪಿನಾಕಪಾಣಿ, ಅತಿಥಿ: ಸಾಗರನಹಳ್ಳಿ ನಟರಾಜ್, ಅಧ್ಯಕ್ಷತೆ: ಎಂ.ಎಸ್. ಮೃತ್ಯುಂಜಯ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಆರ್. ಪಿ.ಎ.ಪದವಿಪೂರ್ವ ಕಾಲೇಜು, ರಾಜಾಜಿನಗರ, ಬೆಳಿಗ್ಗೆ 10.30

ವಿಚಾರ ಸಂಕಿರಣ: ‘ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅರವಿಂದರು’, ಉದ್ಘಾಟನೆ: ಲಿಂಗರಾಜ ಗಾಂಧಿ, ಮುಖ್ಯ ಅತಿಥಿ: ಗುರುರಾಜ ಕರಜಗಿ, ಪ್ರಸ್ತಾವನೆ: ವಿ. ನಾಗರಾಜ್, ಸ್ಥಳ ಮತ್ತು ಆಯೋಜನೆ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10.30



ಗುರುರಾಜ ಕರಜಗಿ

ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನ 12ನೇ ಘಟಿಕೋತ್ಸವ: ಮುಖ್ಯ ಅತಿಥಿ: ಗಣೇಶನ್, ಉಪಸ್ಥಿತಿ: ಎ.ಸಿ. ಷಣ್ಮುಗಮ್, ಎ.ಸಿ.ಎಸ್. ಅರುಣ್ ಕುಮಾರ್, ಡಾ.ಸತ್ಯಮೂರ್ತಿ, ಡಾ.ನವೀನ್, ಆಯೋಜನೆ ಮತ್ತು ಸ್ಥಳ: ಎ.ಸಿ.ಎಸ್. ಸಮ್ಮೇಳನ ಸಭಾಂಗಣ, ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು, ಮಧ್ಯಾಹ್ನ 3

ಮೈಸೂರು ರಾಮಚಂದ್ರಾಚಾರ್ ಮತ್ತು ಸಂಗಡಿಗರಿಂದ ಹರಿನಾಮ ಸಂಕೀರ್ತನೆ: ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಪ್ರಕಾಶನಗರ, ಸಂಜೆ 6

ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ 20ನೇ ವರ್ಷದ ಕಾರ್ಯಕ್ರಮದ ಅಂಗವಾಗಿ ಮನೆ–ಮನೆಗಳಲ್ಲಿ ಶಿವಪೂಜೆ, ವಚನ ಪ್ರವಚನ: ಸ್ಥಳ: ಪ್ರಭಾವತಿ ಮತ್ತು ನಾಗೇಶ್ ಅವರ ನಿವಾಸ, ನಂ.31, ಬಿಕೆಇಬಿ ರಸ್ತೆ, 7ನೇ ಅಡ್ಡರಸ್ತೆ, ಸುಬ್ಬಯ್ಯ ಲೇಔಟ್, ಅಂಜನಾನಗರ, ಸಂಜೆ

ರಾಘವೇಂದ್ರತೀರ್ಥರ ಆರಾಧನಾ ಸಪ್ತ ರಾತ್ರೋತ್ಸವ ಉದ್ಘಾಟನೆ: ಸುಬುಧೇಂದ್ರ ತೀರ್ಥ ಸ್ವಾಮೀಜಿ, ವಿಶೇಷ ದಾಸವಾಣಿ: ಅನ್ವಿತಾ ಸಾವಿತ್ರಿ, ಭೂಮಿಕಾ ಎಸ್. ಕುಂದಗೋಳ, ನಿಶಿತಾ ಪ್ರಸಾದ್, ಆಯೋಜನೆ ಹಾಗೂ ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಜಯನಗರ 5ನೇ ಹಂತ, ಸಂಜೆ 5



ಸುಬುಧೇಂದ್ರ ತೀರ್ಥ ಸ್ವಾಮೀಜಿ



ಕೇಂದ್ರ ವಿಭಾಗದ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ದ್ವಿಚಕ್ರ ವಾಹನಗಳನ್ನು ಕಮಿಷನರ್ ಪ್ರತಾಪ್ ರೆಡ್ಡಿ ವೀಕ್ಷಿಸಿದರು. ಹೆಚ್ಚುವರಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ, ಡಿಸಿಪಿ ಶ್ರೀನಿವಾಸ್ ಗೌಡ ಇದ್ದರು

₹1.32 ಕೋಟಿ ಮೌಲ್ಯದ ವಸ್ತುಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಲಿಗೆ, ಕಳ್ಳತನ ಸೇರಿ ವಿವಿಧ ಪ್ರಕರಣ ಭೇದಿಸಿರುವ ಕೇಂದ್ರ ವಿಭಾಗದ ಪೊಲೀಸರು, 24 ಆರೋಪಿಗಳನ್ನು ಬಂಧಿಸಿದ್ದಾರೆ. ಅವರಿಂದ ₹1.32 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

‘ಶೇಷಾದ್ರಿಪುರ, ಕಬ್ಬನ್ ಪಾರ್ಕ್, ಹಲಸೂರು ಗೇಟ್, ವಿಲ್ಸನ್ ಗಾರ್ಡನ್, ಎಸ್.ಜೆ. ಪಾರ್ಕ್ ಹಾಗೂ ವೈಯಾಲಿ ಕಾವಲ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಅಪರಾಧ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಕಮಿಷನರ್ ಪ್ರತಾಪ್ ರೆಡ್ಡಿ ತಿಳಿಸಿದರು.

‘87 ಮೊಬೈಲ್, 27 ದ್ವಿಚಕ್ರ ವಾಹನ, 340 ಗ್ರಾಂ ಚಿನ್ನಾಭರಣ, 7 ಕಾರು, 58 ಕೆ.ಜಿ 122 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ₹6.39 ಲಕ್ಷ ನಗದು ಜಪ್ತಿ ಮಾಡಲಾಗಿದೆ. ₹7.50 ಲಕ್ಷವಿರುವ ಆರೋಪಿಗಳ ಬ್ಯಾಂಕ್ ಖಾತೆಗಳ ವಹಿವಾಟು ಸ್ಥಗಿತಗೊಳಿಸಲಾಗಿದೆ’ ಎಂದು ಹೇಳಿದರು.

ಕಾರು ಬಾಡಿಗೆ ಪಡೆದು ಮಾರಾಟ: ‘ಟ್ರಾವೆಲ್ಸ್ ಏಜೆನ್ಸಿ ಹೆಸರಿನಲ್ಲಿ ಕಾರು ಬಾಡಿಗೆ ಪಡೆದು ಮಾರುತ್ತಿದ್ದ ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ಈತನಿಂದಲೇ ₹45 ಲಕ್ಷ ಮೌಲ್ಯದ 7 ಕಾರು ಜಪ್ತಿ ಮಾಡಲಾಗಿದೆ’ ಎಂದು ಕಮಿಷನರ್ ತಿಳಿಸಿದರು.

74 ಸುಲಿಗೆ ಮಾಡಿದ್ದ ಆರೋಪಿಗಳು: ‘ಸುಲಿಗೆ ಪ್ರಕರಣದಲ್ಲಿ ಆರೋಪಿಗಳಾದ ಮಹಮ್ಮದ್ ಉಸ್ಮಾನ್, ಮಹಮ್ಮದ್ ಹುಸೇನ್, ತಬ್ರೇಜ್ ಖಾನ್, ಜುನೈದ್ ಮತ್ತು ಇರ್ಫಾನ್ ಪಾಷಾ ಎಂಬುವರನ್ನು ಬಂಧಿಸಲಾಗಿದೆ. ಇವರು 74 ಸುಲಿಕೆ ಪ್ರಕರಣದಲ್ಲಿ ಭಾಗಿಯಾಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಕಮಿಷನರ್ ಹೇಳಿದರು.







ಮೊಹರಂ ಆಚರಣೆ

1. ಬೆಂಗಳೂರಿನಲ್ಲಿ ಮಂಗಳವಾರ ಶಿಯಾ ಮುಸ್ಲಿಮರು ಜಾನ್ಸನ್ ಮಾರುಕಟ್ಟೆಯ ಬಳಿ ಮೆರವಣಿಗೆ ನಡೆಸಿದರು
2. ಮೊಹರಂ ಅಂಗವಾಗಿ ಶಿಯಾ ಮುಸ್ಲಿಮರು ದೇಹ ದಂಡಿಸಿದರು
3. ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಕಂಠಿ ಗಲ್ಲಿಯಲ್ಲಿ ಹಿಂದೂ, ಮುಸ್ಲಿಮರು ಮಂಗಳವಾರ ಡೋಲಿ ಹೊತ್ತುಕೊಂಡು ಕೊಂಡ ಹಾಯ್ದರು —ಪ್ರಜಾವಾಣಿ ಚಿತ್ರಗಳು

ಕಿರಿದಾದ ರಸ್ತೆಗಳಲ್ಲಿ ಬಳಸುವ ವಾಹನಗಳಿಗೇ ಸ್ಥಳದ ಅಭಾವ, ಈ ವಾಹನಗಳಿಂದ ಇನ್ನೂ ಕಿರಿಕಿರಿ

ವರ್ಷಗಟ್ಟಲೆ ನಿಂತಲ್ಲೇ ನಿಂತ ವಾಹನ

● ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದ ಸೌಂದರ್ಯಕ್ಕೆ ಹಳೇ ವಾಹನಗಳು ಧಕ್ಕೆ ತರುತ್ತಿವೆ. ಬಡಾವಣೆಗಳ ಕಿರಿದಾದ ರಸ್ತೆಗಳಲ್ಲಿ ಹಳೇ ವಾಹನಗಳು ಹತ್ತಾರು ವರ್ಷಗಳಿಂದ ಒಂದೇ ಸ್ಥಳದಲ್ಲಿ ನಿಂತಿವೆ. ಪಳೆಯುಳಿಕೆಯಂತೆ ಕಾಣಿಸುತ್ತಿವೆ. ಆ ವಾಹನಗಳ ಮಾಲೀಕರು ಯಾರು ಎಂಬುದೇ ತಿಳಿದಿಲ್ಲ. ಬಿಬಿಎಂಪಿಯೂ ಅವುಗಳನ್ನು ಆ ಸ್ಥಳದಿಂದ ಕೊಂಡೊಯ್ದು ಗುಜರಿಗೆ ಹಾಕುವ ಪ್ರಯತ್ನ ಮಾಡಿಲ್ಲ. ಇದರಿಂದ ನಾಗರಿಕರು ಕಿರಿಕಿರಿ ಅನುಭವಿಸುತ್ತಿದ್ದಾರೆ.

ಒಡೆದಿರುವ ವಾಹನದ ಗಾಜುಗಳು, ಮಗುಚಿ ಬಿದ್ದಿರುವ ಆಟೊ, ರಸ್ತೆಯ ಬದಿಯಲ್ಲಿ ಮಾಸಲು ಕವರ್ ಮುಚ್ಚಿಕೊಂಡು ಹಲವು ದಿನಗಳಿಂದ ನಿಂತಿರುವ ಬೈಕ್‌ಗಳು... ಇಂತಹ ವಾಹನಗಳಲ್ಲಿ ಎಂಜಿನ್, ಸೀಟ್ ಯಾವುದೂ ಇಲ್ಲ. ನಿಂತ ಸ್ಥಳದಲ್ಲೇ ವಾಹನಗಳು ನಿಂತು ಸಿಲಿಕಾನ್ ಸಿಟಿಯ ಅಂದ ಕೆಡಿಸುತ್ತಿವೆ ಎಂದು ಸ್ಥಳೀಯರು ದೂರಿದ್ದಾರೆ.

‘ರಾಜಧಾನಿಯಲ್ಲಿ ಪ್ರತಿನಿತ್ಯ ದೊಡ್ಡ ಸಂಖ್ಯೆಯಲ್ಲಿ ಹೊಸ ವಾಹನಗಳು ರಸ್ತೆಗೆ ಇಳಿಯುತ್ತಿದ್ದು, ಸುಗಮ ಸಂಚಾರ ವ್ಯವಸ್ಥೆ ಸಾಧ್ಯವಾಗುತ್ತಿಲ್ಲ. ಇದರ ಜತೆಗೆ ಹಳೇ ವಾಹನಗಳು ಫುಟ್‌ಪಾತ್ ಮಾರ್ಗ ಆಕ್ರಮಿಸಿಕೊಂಡು ನಿಂತಿದ್ದು, ಬೆಳಿಗ್ಗೆ ವಾಯುವಿಹಾರಿಗಳಿಗೆ ಹಾಗೂ ಪಾದಚಾರಿಗಳಿಗೆ ಕಿರಿಕಿರಿ ಉಂಟು ಮಾಡುತ್ತಿವೆ. ಕೆಲವು ರಸ್ತೆಗಳಲ್ಲಿ ನಿಲುಗಡೆ ಮಾಡಿರುವ ವಾಹನಗಳ ಮಾಲೀಕರು ಯಾರು ಎಂಬುದು ತಿಳಿದಿಲ್ಲ’ ಎಂದು ಆಸ್ಟಿನ್ ರಸ್ತೆ ನಿವಾಸಿಗಳ ಕ್ಷೇಮಾಭಿವೃದ್ಧಿ ಒಕ್ಕೂಟದ ಸ್ಥಾಪಕ ಅಧ್ಯಕ್ಷ ಡಿ.ಆರ್.ಪ್ರಕಾಶ್ ದೂರಿದರು.

ಮತ್ತಿಕೆರೆ, ಜಾಲಹಳ್ಳಿ, ಟಿ.ದಾಸರಹಳ್ಳಿ, ಪೀಣ್ಯ 2ನೇ ಹಂತ, ಸುಂಕದಕಟ್ಟೆ, ವಸಂತ ನಗರ, ಹಲಸೂರು, ಶಿವಾಜಿನಗರ, ಮರಿಯಮ್ಮನಪಾಳ್ಯ, ಕೆಂಗೇರಿ, ಬ್ಯಾಟರಾಯನಪುರ, ಯಲಹಂಕ... ಹೀಗೆ ನಗರದ ವಿವಿಧ ಬಡಾವಣೆಗಳಲ್ಲಿ ಬಳಕೆಗೆ ಬಾರದ ಸಾವಿರಾರು ಸಂಖ್ಯೆಯ ವಾಹನಗಳು ರಸ್ತೆಯ ಬದಿಯಲ್ಲಿ ನಿಂತಿವೆ. ಇವುಗಳ ವಿಲೇವಾರಿ ನಡೆಯುತ್ತಿಲ್ಲ. ಶಿವಾಜಿನಗರ ಕ್ಷೇತ್ರದಲ್ಲಿ ಈ ಸಮಸ್ಯೆ ತೀವ್ರವಾಗಿದೆ ಎಂದು ಅಲ್ಲಿನ ನಿವಾಸಿಗಳು ದೂರಿದ್ದಾರೆ.

‘ಬಳಸಲು ಸಾಧ್ಯವಿಲ್ಲದ ವಾಹನಗಳ ಖರೀದಿಗೆ ಯಾರೂ ಮುಂದೆ ಬರುತ್ತಿಲ್ಲ. ಇದೇ ಕಾರಣಕ್ಕೆ ಮನೆಯ ಮುಂದೆ ಎರಡು ವರ್ಷಗಳಿಂದ ಹಳೆಯ ವಾಹನ ನಿಲುಗಡೆ ಮಾಡಲಾಗಿದೆ. ನಾವೇ ವಿಲೇವಾರಿ ಮಾಡಲು ಜಾಗದ ಸಮಸ್ಯೆಯಿದೆ. ಬೇರೆ ಸ್ಥಳಕ್ಕೆ ಹಾಕಿ ಬಂದರೆ ಆ ಜಾಗದ ಮಾಲೀಕರು ಪೊಲೀಸರಿಗೆ ದೂರು ನೀಡುತ್ತಾರೆ ಎಂಬ ಭಯವಿದೆ’ ಎಂದು ವಸಂತ ನಗರದ ನಿವಾಸಿ ರಾಜೀವ್ ಹೇಳಿದರು.





ನಗರದ ಹಲಸೂರಿನ ಸೇಂಟ್ ಜಾನ್ಸನ್ ರಸ್ತೆಯ ಪಾದಚಾರಿ ಮಾರ್ಗ ಆಕ್ರಮಿಸಿಕೊಂಡಿರುವ ಹಳೇ ವಾಹನ (ಎಡಚಿತ್ರ) ರಸ್ತೆ ಆಕ್ರಮಿಸಿಕೊಂಡು ನಿಂತಿರುವ ಹಳೇ ಕಾರು

ಅಪರಿಚಿತ ಕಾರಿನಲ್ಲಿ ಮೃತದೇಹ ಪತ್ತೆ

ಈ ಹಿಂದೆ ರಾಜಾಜಿನಗರ ಕೈಗಾರಿಕಾ ಪ್ರದೇಶದ ರಸ್ತೆಬದಿಯಲ್ಲಿ ನಿಲ್ಲಿಸಿದ್ದ ಅಪರಿಚಿತ ಕಾರಿನಲ್ಲಿ ವ್ಯಕ್ತಿಯ ಮೃತದೇಹ ಪತ್ತೆಯಾಗಿತ್ತು. ಇದು ಸ್ಥಳೀಯರಲ್ಲಿ ಆತಂಕ ಸೃಷ್ಟಿಸಿತ್ತು.

‘4ನೇ ಅಡ್ಡರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದ ಅಂಬಾಸಿಡರ್ ಕಾರಿನಿಂದ ದುರ್ವಾಸನೆ ಬರುತ್ತಿತ್ತು. ಅನುಮಾನಗೊಂಡ ಸ್ಥಳೀಯರು, ಕಾರಿನ ಬಳಿ ಹೋಗಿ ನೋಡಿದಾಗ ಮೃತದೇಹ ಕಂಡಿತ್ತು. ನಂತರ ಪೊಲೀಸರಿಗೆ ಮಾಹಿತಿ ನೀಡಿದ್ದರು’ – ಹೀಗೆ ಅಪರಾಧ ಚಟುವಟಿಕೆಗಳಿಗೂ ಈ ಹಳೇ ಕಾರುಗಳು ಬಳಕೆ ಆಗುತ್ತಿವೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಅಕ್ರಮ ಚಟುವಟಿಕೆಗೆ ಬಳಸುವ ಆತಂಕ

ಮಾಲೀಕರಿಲ್ಲದ ಸಾವಿರಾರು ಹಳೇ ವಾಹನಗಳು ರಸ್ತೆಬದಿ ಹಾಗೂ ಪಾದಚಾರಿ ಮಾರ್ಗದಲ್ಲಿ ನಿಂತಿದ್ದು, ಸುರಕ್ಷತೆಯ ಪ್ರಶ್ನೆ ಎದುರಾಗಿದೆ. ದುಷ್ಕರ್ಮಿಗಳು ವಿಧ್ವಂಸಕ ಕೃತ್ಯ ಹಾಗೂ ಅಕ್ರಮ ಚಟುವಟಿಕೆಗೆ ಇಂತಹ ವಾಹನಗಳನ್ನೇ ಬಳಸಿಕೊಳ್ಳುವ ಆತಂಕ ಎದುರಾಗಿದೆ. ನಗರದ ಹೊರವಲಯಕ್ಕೆ ಎಲ್ಲ ವಾಹನಗಳನ್ನು ವಿಲೇವಾರಿ ಮಾಡುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

‘ಜಾಗ ಹುಡುಕದ ಬಿಬಿಎಂಪಿ’

ಹೊರವಲಯದಲ್ಲಿ 5ರಿಂದ 6 ಎಕರೆಯಷ್ಟು ಜಾಗ ಹುಡುಕಿ ಅಲ್ಲಿಗೆ ಬಳಕೆಗೆ ಬಾರದ ಹಳೆಯ ವಾಹನ ವಿಲೇವಾರಿ ಮಾಡಬಹುದು ಎಂದು ಹಲವು ಶಾಸಕರು ಬಿಬಿಎಂಪಿಗೆ ಸಲಹೆ ನೀಡಿದ್ದರು. ಆದರೆ, ಅಧಿಕಾರಿಗಳು ಜಾಗ ಹುಡುಕುವ ಪ್ರಯತ್ನ ಮಾಡಿಲ್ಲ ಎಂಬ ಆರೋಪ ಇದೆ.

ಮುಂದಿನ ಅಧಿವೇಶನ ದಲ್ಲಿ ಪ್ರಶ್ನಿಸಿ ಜಾಗ ಮಂಜೂರಿಗೆ ಪ್ರಯತ್ನಿಸಲಾಗುವುದು ಎಂದು ಶಿವಾಜಿನಗರ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಭರವಸೆ ನೀಡಿದ್ದಾರೆ.

ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ಹಳೇ ವಾಹನಗಳ ಬಿಡಿಭಾಗಗಳು ಕಳ್ಳರ ಪಾಲಾಗಿವೆ. ಹೀಗಾಗಿ ಮಾಲೀಕರೂ ಅವುಗಳ ಮಾರಾಟಕ್ಕೆ ಆಸಕ್ತಿ ತೋರುತ್ತಿಲ್ಲ

ಡಿ.ಆರ್.ಪ್ರಕಾಶ್, ಅಧ್ಯಕ್ಷ, ಆಸ್ಟಿನ್ ರಸ್ತೆ ನಿವಾಸಿಗಳ ಕ್ಷೇಮಾಭಿವೃದ್ಧಿ ಒಕ್ಕೂಟ

ಆಯುಕ್ತರೊಂದಿಗೆ ಚರ್ಚಿಸಿ, ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು.

ರಂಗಪ್ಪ, ವಿಶೇಷ ಆಯುಕ್ತ, ಬಿಬಿಎಂಪಿ

ಸುದ್ದಿ 2 ನಿಮಿಷ

ಅನುಮಾನಾಸ್ಪದ ಬ್ಯಾಗ್: ರಿಚ್ಮಂಡ್ ವೃತ್ತದಲ್ಲಿ ಆತಂಕ

ಬೆಂಗಳೂರು: ನಗರದ ರಿಚ್ಮಂಡ್ ವೃತ್ತದ ಬಳಿ ಮಂಗಳವಾರ ಅನುಮಾನಾಸ್ಪದ ಬ್ಯಾಗ್ ಪತ್ತೆಯಾಗಿದ್ದು, ಅದರಲ್ಲಿ ಬಾಂಬ್ ಇರಬಹುದೆಂಬ ಸುದ್ದಿ ಸ್ಥಳೀಯರಲ್ಲಿ ಆತಂಕವನ್ನುಂಟು ಮಾಡಿತು.

ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದ ವ್ಯಕ್ತಿಯೊಬ್ಬ, ‘ರಿಚ್ಮಂಡ್ ವೃತ್ತದಲ್ಲಿ ವಾರಸುದಾರರಿಲ್ಲದ ಬ್ಯಾಗ್ ಇದೆ. ಅದರಲ್ಲಿ ಸ್ಫೋಟಕ ಇರುವ ಸಂಶಯ ಬರುತ್ತಿದೆ’ ಎಂದಿದ್ದ. ಸಂಪಂಗಿರಾಮನಗರ ಠಾಣೆ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳ ಸಿಬ್ಬಂದಿ ಜೊತೆ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದರು.

ಅಂತಿಮವಾಗಿ ಬ್ಯಾಗ್ ತೆರೆದು ನೋಡಿದಾಗ, ವಿದ್ಯುತ್ ಅಲಂಕಾರಿಕ ದೀಪಗಳು ಅದರಲ್ಲಿದ್ದವು. ಯಾವುದೇ ಆತಂಕಪಡುವ ಅಗತ್ಯವಿಲ್ಲವೆಂದು ಪೊಲೀಸರು ಹೇಳಿದರು. ಬಳಿಕವೇ ಸ್ಥಳೀಯರು ನಿಟ್ಟುಸಿರು ಬಿಟ್ಟರು.

‘ಬ್ಯಾಗ್ ಇರಿಸಿ ಹೋದವರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.



ಮಲ್ಲೇಶ್ವರದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರ ಎಚ್‌.ವಿ. ನಾಗಭೂಷಣ ರಾವ್ ಅವರ ನಿವಾಸಕ್ಕೆ ಮಂಗಳವಾರ ಭೇಟಿನೀಡಿ ಅವರನ್ನು ಸನ್ಮಾನಿಸಿದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಸಿಹಿ ತಿನ್ನಿಸಿದರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌. ಅಶ್ವತ್ಥನಾರಾಯಣ, ರಾವ್ ಅವರ ಪುತ್ರ ಡಾ.ರವಿಕುಮಾರ್ ಮತ್ತು ಅವರ ಪತ್ನಿ ಇದ್ದರು – ಪ್ರಜಾವಾಣಿ ಚಿತ್ರ

ರಾಜ್ಯಪಾಲರಿಂದ ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ

ಬೆಂಗಳೂರು: ‘ಭಾರತ ಬಿಟ್ಟು ತೊಲಗಿ ಚಳವಳಿ’ ವರ್ಷಾಚರಣೆ ಅಂಗವಾಗಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ನಗರದಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಮನೆಗಳಿಗೆ ಮಂಗಳವಾರ ಭೇಟಿ ನೀಡಿ ಅವರನ್ನು ಸನ್ಮಾನಿಸಿದರು.

ಜೆ.ಪಿ. ನಗರದ ನಾಲ್ಕನೇ ಹಂತದ ನಿವಾಸಿಯಾಗಿರುವ ಆರ್. ನಾರಾಯಣಪ್ಪ, ಬನಶಂಕರಿ ಮೂರನೇ ಹಂತದಲ್ಲಿರುವ ಶಂಕರನಾರಾಯಣ ರಾವ್ ಮತ್ತು ಮಲ್ಲೇಶ್ವರದ ನಾಗಭೂಷಣ ರಾವ್ ಅವರನ್ನು ರಾಜ್ಯಪಾಲರು ಗೌರವಿಸಿದರು. ಮೂವರ ಮನೆಗಳಿಗೂ ಭೇಟಿ ನೀಡಿ, ಶಾಲು ಹೊದಿಸಿ, ಸಿಹಿ ತಿನ್ನಿಸಿ, ಸ್ಮರಣಿಕೆ ನೀಡಿ ಗೌರವ ಸಲ್ಲಿಸಿದರು.

‘ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ದೇಶಸೇವೆ ನಮ್ಮೆಲ್ಲರಿಗೂ ಆದರ್ಶಪ್ರಾಯವಾದುದು. ದೇಶಕ್ಕಾಗಿ ಹೋರಾಡಿದ ಅವರನ್ನು ಗೌರವಿಸುವುದು ನಮ್ಮ ಕರ್ತವ್ಯ’ ಎಂದು ಗೆಹಲೋತ್ ಹೇಳಿದರು.

ಸಚಿವರಾದ ಆರ್. ಅಶೋಕ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಬೆಂಗಳೂರು ನಗರ ಜಿಲ್ಲಾಧಿಕಾರಿ ಶ್ರೀನಿವಾಸ್ ಇದ್ದರು.

ಎಲ್‌ಎಲ್‌ಎಂ ಸ್ನಾತಕೋತ್ತರ ಪದವಿ ಕೋರ್ಸ್‌ನ ಪ್ರವೇಶಾತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗದಲ್ಲಿ ಎರಡು ವರ್ಷದ ಎಲ್‌ಎಲ್‌ಎಂ ಸ್ನಾತಕೋತ್ತರ ಪದವಿ ಕೋರ್ಸ್‌ನ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಮೂರು ವರ್ಷದ ಎಲ್‌ಎಲ್‌ಬಿ ಪದವಿಯಲ್ಲಿ ಕನಿಷ್ಠ ಶೇ 45 ಅಂಕ ಗಳಿಸಿರುವವರು (ಎಸ್ಸಿ,ಎಸ್ಟಿ ಮತ್ತು ಪ್ರವರ್ಗ-1 ಹಾಗೂ ಅಂಗವಿಕಲರು ಶೇ 40ರಷ್ಟು) ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ.

ಮಾಹಿತಿಗೆ www.bangaloreuniversity.ac.in ಅಥವಾ www.ulcbangalore.com ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಕುಲಸಚಿವರು ತಿಳಿಸಿದ್ದಾರೆ.

ಮೈಸೂರು ರೇಸ್

ಮೈ ಒಪಿನಿಯನ್ ಗೆಲ್ಲುವ ನಿರೀಕ್ಷೆ

ಹೇಮಾವತಿ ಮಿಲಿಯನ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೈ ಒಪಿನಿಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.30ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಗೋಲ್ಡ್ ಚಾರ್ಮ್ 1, ಶಿವಾಲಿಕ್ ಎಂಪರರ್ 12, ಗೇಮ್ ಬಾಯ್ 10
2ನೇ ರೇಸ್: ವಿಸ್ಕಿ ಸೋರ್ 9, ಮಿಸ್ಟಿಕ್ ಮೌಂಟೇನ್ 4, ಆರಿಲ್ 2
3ನೇ ರೇಸ್: ಕ್ಯಾಲಿಫೋರ್ನಿಯಾ ಗೋಲ್ಡ್ 8, ಸ್ವಿಸ್ ಟೈಗ್ರೆಸ್ 2, ಡೀನ್ಸ್ ಗಾಲ್ 1
4ನೇ ರೇಸ್: ಮಿಲೊಸ್ 9, ಮೇಬ್ಯೂರಿ 7, ಮೀಡೋಸ್ ಫ್ಲವರ್ 8
5ನೇ ರೇಸ್: ಸೌಂಡ್ ಆಫ್ ಕೆನನ್ಸ್ 10, ಮ್ಯುಟಂಟ್ 4, ವಾಟ್ ಈಸ್ ದಿಸ್ 5
6ನೇ ರೇಸ್: ಸ್ಪಾರ್ಕಲ್ಸ್ 1, ಇನ್‌ಎಫೆಬಲ್ 9, ಕಂಟ್ರೀಸ್ ಫ್ಲಾಶ್ 2
7ನೇ ರೇಸ್: ಸಡೀಕ್ 6, ಅಬರ್ಲರ್ 3, ಕ್ರೆಸೆಂಡೊ 7
8ನೇ ರೇಸ್: ಮೈ ಒಪಿನಿಯನ್ 1, ಎಮೆಲ್ಡಾ 5
9ನೇ ರೇಸ್: ಫಾರೆಸ್ಟಿ 2, ಸ್ಟಿಲ್ ಐ ರೈಸ್ 3, ಅಶ್ವ ಯುದ್ವೀರ್ 1
10ನೇ ರೇಸ್: ಕಲಹರಿ ಗೋಲ್ಡ್ 1, ಡಿ ಪೈರ್ 5, ಇವಾಂಡರ್ 2

ಉತ್ತಮ ಬೆಟ್: ಫಾರೆಸ್ಟಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
6,7,8,9,10	2,3,4	5,6,7	8,9,10

ಮಳೆ ತೊಡಕು: ಉಕ್ಕಿನ ಸೇತುವೆ ಉದ್ಘಾಟನೆ ಇನ್ನೂ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾನಂದ ವೃತ್ತದ ಉಕ್ಕಿನ ಸೇತುವೆಯ ಅಂತಿಮ ಹಂತದ ಕಾಮಗಾರಿಗೆ ಮಳೆ ತೊಡಕಾಗಿದ್ದು, ಕಾರ್ಯಾರಂಭಕ್ಕೆ ಇನ್ನಷ್ಟು ದಿನ ಕಾಯಬೇಕಿದೆ.

ಹೈಕೋರ್ಟ್ ಹಸಿರು ನಿಶಾನೆ ತೋರಿದ ಬಳಿಕ ಕಾಮಗಾರಿಯನ್ನು ಬಿಬಿಎಂಪಿ ಚುರುಕುಗೊಸಿದ್ದು, ಆ.15ರಂದು ಉದ್ಘಾಟನಾ ನೆರವೇರಿಸಲು ಸಿದ್ಧತೆ ಮಾಡಿಕೊಂಡಿತ್ತು. ದಿನವೂ ಮಳೆ ಸುರಿಯುತ್ತಿರುವುದರಿಂದ ಡಾಂಬರ್ ಕಾಮಗಾರಿ ನಿರ್ವಹಿಸುವುದು ಕಷ್ಟ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

‘ತರಾತುರಿಯಲ್ಲಿ ಡಾಂಬರ್ ಹಾಕಿದರೆ ಕಿತ್ತು ಬರುವ ಸಾಧ್ಯತೆ ಇದೆ. ಆದ್ದರಿಂದ ಮಳೆ ನಿಂತ ಬಳಿಕವೇ ಡಾಂಬರ್ ಹಾಕಲಾಗುವುದು’ ಎಂದು ಪಾಲಿಕೆ ಯೋಜನಾ ವಿಭಾಗದ ಎಂಜಿನಿಯರ್ ಒಬ್ಬರು ಸ್ಪಷ್ಟಪಡಿಸಿದರು.

2017ರ ಜೂನ್‌ನಲ್ಲಿ ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕಾಮಗಾರಿ ಗುತ್ತಿಗೆ ವಹಿಸಿ ಬಿಬಿಎಂಪಿ ಕಾರ್ಯಾದೇಶ ನೀಡಿತ್ತು. 13 ತಿಂಗಳಲ್ಲಿ ಅಂದರೆ 2018ರ ಜುಲೈನಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂಬ ಕಾಲಮಿತಿ ನಿಗದಿ ಮಾಡಿತ್ತು. ಯೋಜನೆ ಜಾರಿಯಿಂದ ರಸ್ತೆ ಬದಿಯಿರುವ ಮರಗಳಿಗೆ ಕೊಡಲಿ ಬೀಳಲಿದೆ ಎಂದು ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದರು.

ಇದರಿಂದ 2018ರಲ್ಲಿ ಮೂರು ತಿಂಗಳ ಕಾಲ ಕಾಮಗಾರಿ ಸ್ಥಗಿತಗೊಂಡಿತ್ತು. ಅದರ ಜತೆಗೆ ಪದೇ ಪದೇ ಯೋಜನೆ ಬದಲಾಗಿದ್ದು ಕೂಡ ಕಾಮಗಾರಿ ವಿಳಂಬಕ್ಕೆ ಕಾರಣವಾಯಿತು ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಕಾಡಿನಿಂದ ಜೇನು ಕುರುಬರ ಹೊರಹಾಕುವಿಕೆಗೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಡನ್ನೇ ನಂಬಿಕೊಂಡಿರುವ ನಾಗರಹೊಳೆಯ ಜೇನು ಕುರುಬರನ್ನು ಬಲವಂತವಾಗಿ ಸರ್ಕಾರ ಕಾಡಿನಿಂದ ಹೊರಹಾಕಬಾರದು’ ಎಂದು ಸರ್ಕಾರೇತರ ಸಂಸ್ಥೆಗಳು ಆಗ್ರಹಿಸಿವೆ.

ಫ್ರೈಡೆ ಫಾರ್ ಫ್ಯೂಚರ್ ಕರ್ನಾಟಕ ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಒಕ್ಕೂಟ (ಎಐಎಸ್‌ಎ) ಜಂಟಿಯಾಗಿ ಮಂಗಳವಾರ ಇಲ್ಲಿ ಆಯೋಜಿಸಿದ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಮುಖ್ಯಸ್ಥ ಶರತ್ ಮಾತನಾಡಿ, ‘ನಾಗರಹೊಳೆ ಜೇನು ಕುರುಬ ಜನಾಂಗದವರು ಎರಡು ದಶಕಗಳಿಂದ ಅರಣ್ಯ ಇಲಾಖೆ ಅಧಿಕಾರಿಗಳಿಂದ ಕಿರುಕುಳ ಅನುಭವಿಸುತ್ತಿದ್ದಾರೆ. ಈಗಾಗಲೇ ಅನೇಕ ಕುಟುಂಬಗಳನ್ನು ಬಲವಂತವಾಗಿ, ಬೆದರಿಕೆ ಹಾಕಿ ಕಾಡುಗಳಿಂದ ಹೊರ ಹಾಕಲಾಗಿದೆ. ಇದರಿಂದ ನಿರಂತರ ಸಮಸ್ಯೆಗಳನ್ನು ಎದುರಿಸುತ್ತಲೇ ಜೀವನ ಸಾಗಿಸುತ್ತಿದ್ದಾರೆ. ಕೂಡಲೇ ಸರ್ಕಾರ ಹೊರಹಾಕುವ ಪ್ರಯತ್ನಗಳನ್ನು ಸ್ಥಗಿತಗೊಳಿಸಬೇಕು’ ಎಂದರು.

‘ಅರಣ್ಯ ಹಕ್ಕುಗಳ ಕಾಯ್ದೆ (2006) ಅಡಿ ನೀಡಲಾದ ಅರಣ್ಯ ಹಕ್ಕುಗಳನ್ನು ನಿರಾಕರಿಸಲಾಗಿದೆ. ಇದರಿಂದ ನಾಗರಹೊಳೆಯ ಜೇನು ಕುರುಬರು ಅತಂತ್ರರಾಗಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಜೇನು ಕುರುಬ ಸಮುದಾಯದ ಶಿವು, ‘ರಾಜ್ಯದಲ್ಲಿ 1.24 ಲಕ್ಷ ಮಂದಿ ಜೇನು ಕುರುಬರಿದ್ದಾರೆ. ನಾವು ಪ್ರತಿನಿತ್ಯ ಒಂದಲ್ಲ ಒಂದು ಸಮಸ್ಯೆ ಎದುರಿಸುತ್ತಿದ್ದೇವೆ. ಸರ್ಕಾರದ ನೀತಿಗಳು ನಮ್ಮನ್ನು ಬಲವಂತವಾಗಿ ಕಾಡಿನಿಂದ ಹೊರಹಾಕುವ ಉದ್ದೇಶ ಹೊಂದಿವೆ. ಇಲ್ಲಿಯೇ ಹುಟ್ಟಿ, ತಲತಲಾಂತರಗಳಿಂದ ಕಾಡಿನೊಂದಿಗೆ ಬೆಸೆದುಕೊಂಡಿರುವ ನಮ್ಮ ಜೀವನಕ್ರಮ ಮತ್ತು ಸಂಸ್ಕೃತಿಯನ್ನು ಕಿತ್ತುಕೊಳ್ಳುವ ಹುನ್ನಾರ ನಡೆಯುತ್ತಿದೆ. ಸರ್ಕಾರ ನಮಗೆ ರಕ್ಷಣೆ ಒದಗಿಸಬೇಕು’ ಎಂದು ಹೇಳಿದರು.

ಸುಲಿಗೆ ಆರೋಪ: ‘ವಿಳಂಬಿತ ದೂರಿನ ತನಿಖೆ ಸಲ್ಲ’

ಬೆಂಗಳೂರು: ‘ಭಾರತೀಯ ದಂಡ ಸಂಹಿತೆ ಕಲಂ 384ರ ಅಡಿಯಲ್ಲಿ ಸುಲಿಗೆ ಮಾಡಿದ್ದಾರೆಂದು ಆರೋಪಿಸಿ ನೀಡಲಾಗುವ ದೂರನ್ನು ತಡವಾಗಿ ದಾಖಲಿಸಿದರೆ ಅದರ ನೈಜತೆ ಬಗ್ಗೆ ಅನುಮಾನ ಹುಟ್ಟುತ್ತದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ದಾವಣಗೆರೆಯ ಇಮ್ರಾನ್ ಸಿದ್ದಿಕಿ ಎಂಬುವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಅಂತೆಯೇ ಅರ್ಜಿದಾರರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 384, 594, 596 ಮತ್ತು 34ರ ಅಡಿಯಲ್ಲಿ ದಾಖಲಿಸಲಾಗಿದ್ದ ಎರಡು ಎಫ್‌ಐಆರ್‌ಗಳನ್ನು ರದ್ದುಗೊಳಿಸಿದೆ.

‘ಈಗಿರುವ ಕೈ ನಾಯಕರು ಗುಂಡಿಗೆ ಎದೆಯೊಡ್ಡಿಲ್ಲ’

ಪ್ರಜಾವಾಣಿ ವಾರ್ತೆ

ಆನೇಕಲ್: ‘ಸಿದ್ದರಾಮಯ್ಯ ಅವರಾಗಲೀ ಅಥವಾ ಸಿದ್ದರಾಮಯ್ಯ ಅವರ ವಂಶಸ್ಥರಾಗಲೀ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿಲ್ಲ. ಈಗಿರುವ ಕಾಂಗ್ರೆಸ್‌ನವರು ಬ್ರಿಟಿಷರ ಗುಂಡಿಗೆ ಎದೆಯೊಡ್ಡಿ ಹೋರಾಟ ಮಾಡಿಲ್ಲ. ತಾವು ಸ್ವಾತಂತ್ರ್ಯ ಹೋರಾಟದ ಭವಿಷ್ಯದ ಪೀಳಿಗೆ ಎಂಬ ಮುದ್ರೆ ಹಾಕಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ಟೀಕಿಸಿದರು.

ತಾಲ್ಲೂಕಿನ ಸರ್ಜಾಪುರದಲ್ಲಿ ಮಂಗಳವಾರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಆನೇಕಲ್ ಅಭಿವೃದ್ಧಿಗೆ ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಿ ಯಾವುದೇ ತಾರತಮ್ಯ ಮಾಡದೆ ಹಣ ಬಿಡುಗಡೆ ಮಾಡಿದ್ದಾರೆ. ಎಷ್ಟು ಹಣ ಬಿಡುಗಡೆ ಮಾಡಿದೆ ಎಂಬ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡಬೇಕು. ಕಳಪೆ ಕಾಮಗಾರಿ ಬಗ್ಗೆ ತನಿಖೆ ಮಾಡುವಂತೆ ಸರ್ಕಾರಕ್ಕೆ ಪತ್ರ ನೀಡಲಾಗಿದೆ. ಇದರ ವರದಿ ಬಂದ ನಂತರ ನೈಜತೆಯು ಜನರಿಗೆ ತಿಳಿಯುತ್ತದೆ ಎಂದರು.

‘ಆನೇಕಲ್‌ನಲ್ಲಿ ಪಕ್ಷವು ಯಾರಿಗೆ ಟಿಕೆಟ್ ನೀಡಿದರೂ ಪ್ರಾಮಾಣಿಕವಾಗಿ ಕೆಲಸ ಮಾಡಿ ಅಭ್ಯರ್ಥಿಯನ್ನು ಗೆಲ್ಲಿಸುವುದು ನಮ್ಮ ಜವಾಬ್ದಾರಿ. ನನಗೆ ಅಥವಾ ನನ್ನ ಕುಟುಂಬದವರಿಗೆ ಟಿಕೆಟ್ ಸಿಗಬೇಕು ಎಂಬ ಕುಟುಂಬ ರಾಜಕಾರಣ ನಮ್ಮದಲ್ಲ. ನಮ್ಮದು ತತ್ವ, ಸಿದ್ಧಾಂತದ ರಾಜಕಾರಣ. ಒಬ್ಬ ಸಾಮಾನ್ಯ ಕಾರ್ಯಕರ್ತನನ್ನು ರಾಜ್ಯ, ರಾಷ್ಟ್ರಮಟ್ಟದಲ್ಲಿ ಗುರುತಿಸಿರುವ ಏಕೈಕ ಪಕ್ಷ ಬಿಜೆಪಿಯಾಗಿದೆ’ ಎಂದು ತಿಳಿಸಿದರು.

ಕೆಪಿಸಿಸಿ ವಕ್ತಾರ ಡಾ. ಶಂಕರ ಗುಹಾ ದ್ವಾರಕನಾಥ್ ನೇತೃತ್ವದಲ್ಲಿ ಪೂಜೆ

ತೇಜಸ್ವಿ ಸೂರ್ಯಗೆ ಒಳ್ಳೆಯ ಬುದ್ಧಿ ಬರಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಸದ ತೇಜಸ್ವಿ ಸೂರ್ಯ ಮತ್ತು ಬಸವನಗುಡಿ ಶಾಸಕ ರವಿ ಸುಬ್ರಹ್ಮಣ್ಯ ಅವರಿಗೆ ಒಳ್ಳೆಯ ಬುದ್ಧಿ ಬರಲಿ ಎಂದು ಪ್ರಾರ್ಥಿಸಿ ಪಂಚ ದುರ್ಗಾ ಪೂಜೆ ಮಾಡಿದ್ದೆವು. ಪೂಜೆಯ ಪಂಚ ಪುಷ್ಪ ಪ್ರಸಾದವನ್ನು ಸಂಸದರಿಗೆ ಕಳುಹಿಸಲು ಮುಂದಾದ ಪಕ್ಷದ ಇಬ್ಬರು ಕಾರ್ಯಕರ್ತರನ್ನು ತಡೆದ ಪೊಲೀಸರು ವಶಕ್ಕೆ ತೆಗೆದುಕೊಂಡರು’ ಎಂದು ಕೆಪಿಸಿಸಿ ವಕ್ತಾರ ಡಾ. ಶಂಕರ ಗುಹಾ ದ್ವಾರಕನಾಥ್ ಬೆಳ್ಳೂರು ಆರೋಪಿಸಿದರು.

ತಮ್ಮ ಕಚೇರಿಯಲ್ಲಿ ಪಕ್ಷದ ಕಾರ್ಯಕರ್ತರ ಜೊತೆ ಅವರು ಮಂಗಳವಾರ ಪೂಜೆ ಸಲ್ಲಿಸಿದರು.

ಬಳಿಕ ಮಾತನಾಡಿದ ಗುಹಾ, ‘ತೇಜಸ್ವಿ ಸೂರ್ಯ ಮತ್ತು ರವಿ ಸುಬ್ರಹ್ಮಣ್ಯ ಅವರು ತಮ್ಮ ಸ್ವಾರ್ಥಕ್ಕಾಗಿ ಪೊಲೀಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಲೋಕ ಕಲ್ಯಾಣಾರ್ಥವಾಗಿ ನಾವು ಪೂಜೆ ಮಾಡಿದ್ದೆವು. ಆದರೆ, ಪೂಜೆಯ ಪ್ರಸಾದ ಕಳುಹಿಸುವಾಗ ಪೊಲೀಸರನ್ನು ಬಳಸಿಕೊಂಡು ಅಡ್ಡಿಪಡಿಸಿದರು. ಅಧಿಕಾರ ಬಳಸಿ ನಮ್ಮನ್ನು ಹೆದರಿಸಿದರು. ಇಂಥ ಬೆದರಿಕೆಗಳಿಗೆ ನಾವು ಜಗ್ಗಲ್ಲ. ನಮಗೆ ಭಯ ಇಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿ ಇತ್ತೀಚೆಗೆ ನಡೆದ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದ ಬಗ್ಗೆ ಮಾತನಾಡುವ ವೇಳೆ ತೇಜಸ್ವಿ ಸೂರ್ಯ ಅವರು, ಕಾಂಗ್ರೆಸ್ ಸರ್ಕಾರ ಇದ್ದಿದ್ದರೆ ಕಲ್ಲು ಹೊಡೆಯಬಹುದಿತ್ತು ಎಂದು ಬೇಜವಾಬ್ದಾರಿ ಹೇಳಿಕೆ ನೀಡಿದ್ದರು. ಇದನ್ನು ಖಂಡಿಸಿ ಮತ್ತು ಅವರಿಗೆ ಒಳ್ಳೆಯ ಮನಃಸ್ಥಿತಿಯನ್ನು ದೇವರು ದಯಪಾಲಿಸಲಿ ಎಂದು ಪಂಚದುರ್ಗೆಯ ಜ್ವಾಲೆಯಲ್ಲಿ ದ್ವೇಷ, ಕ್ಲೇಶ, ದುಷ್ಟ ಬುದ್ಧಿ ದೂರವಾಗಲಿ ಎಂದು ಬ್ರಾಹ್ಮೀ ಮುಹೂರ್ತದಲ್ಲಿ ವಿಶೇಷ ಪೂಜೆ ಮಾಡಿದ್ದೇವೆ. ಈ ಮೂಲಕ, ‘ದ್ವೇಷ ಬಿಡಿ ಸಂಸದ ತೇಜಸ್ವಿ ಸೂರ್ಯ’ ಅಭಿಯಾನಕ್ಕೆ ಚಾಲನೆ ಕೊಟ್ಟಿದ್ದೇವೆ’ ಎಂದರು.



ಕೆಪಿಸಿಸಿ ವಕ್ತಾರ ಶಂಕರ ಗುಹಾ ಅವರು ಬನಶಂಕರಿಯ ತಮ್ಮ ಕಚೇರಿಯಲ್ಲಿ ಮಂಗಳವಾರ ಪಂಚದುರ್ಗಾ ಪೂಜೆ ನೆರವೇರಿಸಿ, ಸಂಸದ ತೇಜಸ್ವಿಸೂರ್ಯ ಮತ್ತು ಶಾಸಕ ರವಿ ಸುಬ್ರಹ್ಮಣ್ಯಗೆ ಒಳ್ಳೆಯ ಮನಃಸ್ಥಿತಿ ಬರಲಿ ಎಂದು ಪ್ರಾರ್ಥಿಸಿದರು – ಪ್ರಜಾವಾಣಿ ಚಿತ್ರ

ಕೋವಿಡ್ ನಂತರ ಬಹುತೇಕ ಎಲ್ಲ ಮಾರ್ಗಗಳಲ್ಲಿ ಬಸ್ ಸಂಚಾರ ● 2 ವರ್ಷಗಳ ಬಳಿಕ ಆರಂಭವಾದ ಒ.ಟಿ ಪದ್ಧತಿ

ಬಿಎಂಟಿಸಿಗೆ ಸಿಬ್ಬಂದಿ ಕೊರತೆ: ನೌಕರರಿಗೆ ಒ.ಟಿ

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಸಿಬ್ಬಂದಿ ಕೊರತೆ ಸಮಸ್ಯೆ ಎದುರಿಸುತ್ತಿರುವ ಬಿಎಂಟಿಸಿ, ಎರಡು ವರ್ಷಗಳ ಬಳಿಕ ಚಾಲನಾ ಸಿಬ್ಬಂದಿಗೆ ಅವಧಿ ಮೀರಿದ ಹೆಚ್ಚುವರಿ ಕರ್ತವ್ಯ(ಒ.ಟಿ) ನೀಡುವ ಪದ್ಧತಿಯನ್ನು ಮತ್ತೆ ಆರಂಭಿಸಿದೆ.

ಕೋವಿಡ್ ಬಳಿಕ ಬಸ್‌ಗಳ ಕಾರ್ಯಾಚರಣೆ ಸಂಖ್ಯೆ ಕಡಿಮೆ ಮಾಡಲಾಗಿತ್ತು. ಇದೀಗ ಬಹುತೇಕ ಎಲ್ಲಾ ಮಾರ್ಗಗಳಲ್ಲಿ ಕಾರ್ಯಾಚರಣೆ ಆರಂಭಿಸಿದ್ದು, ಸಿಬ್ಬಂದಿ ಕೊರತೆ ಎದುರಾಗಿದೆ.

ಮುಷ್ಕರದ ಸಂದರ್ಭದಲ್ಲಿ ವಜಾಗೊಂಡ ಸಿಬ್ಬಂದಿಯಲ್ಲಿ 650ಕ್ಕೂ ಹೆಚ್ಚು ಮಂದಿ ಇನ್ನೂ ಕರ್ತವ್ಯದಿಂದ ಹೊರಗಿದ್ದಾರೆ. ಜತೆಗೆ ಪ್ರತಿ ತಿಂಗಳು ಸಿಬ್ಬಂದಿ ವಯೋನಿವೃತ್ತಿ ಆಗುತ್ತಿದ್ದು, ಕರ್ತವ್ಯದಲ್ಲಿರುವ ಸಿಬ್ಬಂದಿ ಮೇಲೆ ಕಾರ್ಯದ ಒತ್ತಡ ಹೆಚ್ಚುತ್ತಿದೆ. ಕರ್ತವ್ಯ ಮುಗಿದ ಬಳಿಕವೂ ಅವರನ್ನು ಹೆಚ್ಚವರಿ ಸೇವೆಗೆ ನಿಯೋಜಿಸಿಕೊಳ್ಳಲಾಗುತ್ತಿದೆ. 'ಹೆಚ್ಚುವರಿ ಕೆಲಸ ಮಾಡಿದ ದಿನಗಳ ಬದಲಿಗೆ ಬೇರೆ ದಿನ ರಜೆ ಪಡೆಯಲು ಕಳೆದ ತಿಂಗಳಲ್ಲಿ ಅವಕಾಶ ನೀಡಲಾಗಿತ್ತು. ಈಗ ರಜೆ ಬದಲು ಹೆಚ್ಚುವರಿ ಸೇವೆ ಎಂದು ಪರಿಗಣಿಸಿ ಭತ್ಯೆ ಸಂದಾಯ ಮಾಡಲಾಗುತ್ತಿದೆ. ಹೊಸದಾಗಿ ಸಿಬ್ಬಂದಿ ನೇಮಕಕ್ಕೆ ಸರ್ಕಾರ ಅನುಮತಿ ನೀಡುತ್ತಿಲ್ಲ. ಆದ್ದರಿಂದ ಇರುವ ಸಿಬ್ಬಂದಿಯಲ್ಲೇ ಕಾರ್ಯಾಚರಣೆ ಮಾಡಬೇಕಿದೆ' ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ಹೇಳಿದರು.

ನಿರ್ವಾಹಕರಹಿತ ಕಾರ್ಯಾಚರಣೆಗೆ ತಯಾರಿ

ಪ್ರಜಾವಾಣಿ ವಿಶೇಷ

ಸಿಬ್ಬಂದಿ ಕೊರತೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ನಿರ್ವಾಹಕರಹಿತ ಬಸ್‌ಗಳ ಕಾರ್ಯಾಚರಣೆ ಬಗ್ಗೆ ಬಿಎಂಟಿಸಿ ಆಲೋಚನೆ ನಡೆಸಿದೆ. ನಿರ್ವಾಹಕರಿಲ್ಲದೆ-ಯೇ ಕಾರ್ಯಾಚರಣೆ ಮಾಡಬಹುದಾದ 500 ಮಾರ್ಗಗಳನ್ನು ಗುರುತಿಸುತ್ತಿದೆ.

ಚಾಲಕರ ಕೊರತೆಯಿಂದ 500ಕ್ಕೂ ಹೆಚ್ಚು ಬಸ್‌ಗಳು ರಸ್ತೆಗಳಿಯಲು ಸಾಧ್ಯವಾಗದೆ ಡಿಪೋಗಳಲ್ಲೇ ನಿಂತಿವೆ. ಕೋವಿಡ್ ಪೂರ್ವದ ವೇಳಾಪಟ್ಟಿ ಗಮನಿಸಿದರೆ ಬಸ್‌ಗಳ ಕಾರ್ಯಾಚರಣೆ ಸಂಖ್ಯೆ ಕಡಿಮೆ ಆಗಿರುವುದು ಗೊತ್ತಾಗುತ್ತದೆ.

'ಕೋವಿಡ್ ಪೂರ್ವದಲ್ಲಿ ಇದ್ದಷ್ಟೇ ಮಾರ್ಗಗಳ ಕಾರ್ಯಾಚರಣೆಯನ್ನು ಪುನರ್ ಆರಂಭಿಸಲು ಕನಿಷ್ಠ 2 ಸಾವಿರ ಸಿಬ್ಬಂದಿ ಅಗತ್ಯವಿದೆ. ಸಿಬ್ಬಂದಿ ಭರ್ತಿ ಮಾಡಿ-ಕೊಳ್ಳುವಷ್ಟು ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗಿಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ನಿರ್ವಾಹಕ ರಹಿತ ಸೇವೆ ಒದಗಿಸುವ ಬಗ್ಗೆ ಆಲೋಚನೆ ನಡೆಸಲಾಗುತ್ತಿದೆ. ಎಂ.ಆರ್. ಶ್ರೀನಿವಾಸ ಮೂರ್ತಿ ನೇತೃತ್ವದ ಏಕ ಸದಸ್ಯ ಸಮಿತಿ ಕೂಡ ಇದೇ ರೀತಿಯ ಶಿಫಾರಸು ಮಾಡಿದೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು.



'ವಜಾಗೊಂಡ ಸಿಬ್ಬಂದಿ ನೇಮಿಸಿಕೊಳ್ಳಲಿ'

'ಮುಷ್ಕರದ ಸಂದರ್ಭದಲ್ಲಿ ವಜಾಗೊಂಡಿದ್ದ ಸಿಬ್ಬಂದಿಯಲ್ಲಿ 650ಕ್ಕೂ ಹೆಚ್ಚು ಮಂದಿಯ ಪ್ರಕರಣ ಕಾರ್ಮಿಕ ನ್ಯಾಯಾಲಯದಲ್ಲಿ ಬಾಕಿ ಇದೆ. ಆ ಸಿಬಂದಿಯನ್ನೂ ಮರು ನೇಮಕ ಮಾಡಿಕೊಂಡರೆ ಸಮಸ್ಯೆ ಪರಿಹಾರವಾಗಲಿದೆ' ಎನ್ನುವುದು ನೌಕರರ ಸಂಘಟನೆಗಳ ಅಭಿಪ್ರಾಯ.

'ಮರು ನೇಮಕಕ್ಕೆ ಆದೇಶ ನೀಡುವಾಗ ಅರ್ಧ ಸಂಬಳ ನೀಡಬೇಕು ಎಂದು ನ್ಯಾಯಾಲಯ ಆದೇಶ ಮಾಡುತ್ತಿದೆ. ಅದರ ವಿರುದ್ಧ ಹೈಕೋರ್ಟ್‌ಗೆ ಬಿಎಂಟಿಸಿ ಮೇಲ್ಮನವಿ ಸಲ್ಲಿಸುತ್ತಿದೆ. ಅದರ ಬದಲು ಸಿಬ್ಬಂದಿಯನ್ನು ಕೆಲಸಕ್ಕೆ ನಿಯೋಜಿಸಿಕೊಂಡರೆ ಆಗುವ ನಷ್ಟ ಏನು' ಎಂದು ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ಪ್ರಶ್ನಿಸಿದರು.

'ನೌಕರರ ವಿರುದ್ಧ ಸೇಡು ತೀರಿಸಿಕೊಳ್ಳುವ ಯೋಚನೆ ಬಿಟ್ಟು ಸಮಸ್ಯೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಅಧಿಕಾರಿಗಳು ಯೋಚಿಸಬೇಕು. ನಿರ್ವಾಹಕರಹಿತ ಬಸ್ ಕಾರ್ಯಾಚರಣೆ ಮಾಡುವುದು ಅಸಾಧ್ಯದ ಮಾತು' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ರಾಷ್ಟ್ರಧ್ವಜ ಉಚಿತ ವಿತರಣೆ

ಬೆಂಗಳೂರು: 'ಮನೆ ಮನೆಯಲ್ಲಿ ತ್ರಿವರ್ಣ ಧ್ವಜ' ಅಭಿಯಾನದ ಅಂಗವಾಗಿ ಬೆಂಗಳೂರು ಟ್ರೇಡ್ಸ್ ಅಸೋಸಿಯೇಷನ್ ಎಂ.ಜಿ.ರಸ್ತೆಯ ಮಳಿಗೆಗಳಿಗೆ ಉಚಿತವಾಗಿ ರಾಷ್ಟ್ರಧ್ವಜ ವಿತರಿಸಲು ತೀರ್ಮಾನಿಸಿದೆ.

ಆಗಸ್ಟ್ 13, 14 ಹಾಗೂ 15ರಂದು ಮಳಿಗೆಗಳ ಎದುರು ಧ್ವಜಾರೋಹಣ ನೆರವೇರಿಸಬಹುದು ಅಥವಾ ರಾಷ್ಟ್ರಧ್ವಜ ಪ್ರದರ್ಶಿಸಬಹುದು. ರಾಷ್ಟ್ರಧ್ವಜ ಪಡೆದುಕೊಳ್ಳಲು ವ್ಯಾಪಾರಸ್ಥರು ಮೊಬೈಲ್: 96116 60222 ಸಂಪರ್ಕಿಸಬಹುದು ಎಂದು ಪ್ರಕಟಣೆ ಕೋರಿದೆ.

ನ್ಯೂನತೆಯ ರಾಷ್ಟ್ರಧ್ವಜ ಪೂರೈಕೆ: ಆಕ್ರೋಶ

ಹುಬ್ಬಳ್ಳಿ: 'ಮನೆ ಮನೆಯಲ್ಲಿ ತ್ರಿವರ್ಣ-ಧ್ವಜ' ಅಭಿಯಾನಕ್ಕಾಗಿ ಹುಬ್ಬಳ್ಳಿಯ ಪ್ರಧಾನ ಅಂಚೆ ಕಚೇರಿ ಹಾಗೂ ಉಪ ಅಂಚೆ ಕಚೇರಿಯಲ್ಲಿ ಸಾರ್ವಜನಿಕರ ಖರೀದಿಗೆ ಇಟ್ಟಿರುವ ಬಹುತೇಕ ರಾಷ್ಟ್ರಧ್ವಜಗಳನ್ನು ಮಾನದಂಡಕ್ಕೆ ವಿರುದ್ಧವಾಗಿ ಸಿದ್ಧಪಡಿಸಲಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

24 ಗೆರೆಯುಳ್ಳ ಅಶೋಕ ಚಕ್ರ ಬಿಳಿ ಬಣ್ಣದ ಮಧ್ಯ ಭಾಗದಲ್ಲಿ ಇರುವ ಬದಲು, ಎಡ ಅಥವಾ ಬಲ ಭಾಗದಲ್ಲಿ ಅಂಡಾಕಾರದಲ್ಲಿ ಅಚ್ಚಾಗಿದೆ.

ನಿಯಮ ಉಲ್ಲಂಘಿಸಿ, ಪಾಲಿಸ್ಟರ್ ಬಟ್ಟೆ ಬಳಸಿ ಧ್ವಜ ತಯಾರಿಸಲಾಗಿದ್ದು, ಹೊಲಿಗೆ ಸಹ ಸರಿಯಾಗಿಲ್ಲ.

'ಈಗ ಮಾರಾಟ ಮಾಡಲಾ-ಗುತ್ತಿರುವ ಧ್ವಜಗಳು ಬಿಐಎಸ್ ಮಾನದಂಡ ಪ್ರಕಾರ ಇಲ್ಲ. ಇವು ರಾಷ್ಟ್ರಧ್ವಜ ಮಾದರಿಯ ಬ್ಯಾನರ್‌ಗಳೇ ಹೊರತು ರಾಷ್ಟ್ರಧ್ವಜ ಎಂದು ಒಪ್ಪಲು ಸಾಧ್ಯವಿಲ್ಲ' ಎಂದು ಬೆಂಗೇರಿ ಖಾದಿ ಗ್ರಾಮೋದ್ಯೋಗ ಕೇಂದ್ರ ಕಾರ್ಯದರ್ಶಿ ಶಿವಾನಂದ ಮಠಪತಿ ಹೇಳಿದರು.

ಇಲಾಖೆಗೆ ಮರಳಿಸಿ: ಅಂಚೆ ಇಲಾಖೆಗೆ ಪೂರೈಕೆಯಾದ ಶೇ 10ರಷ್ಟು ಧ್ವಜಗಳು ನ್ಯೂನತೆಯಿಂದ ಕೂಡಿವೆ. ಅವುಗಳನ್ನು ಮಾರಾಟ ಮಾಡದಂತೆ ಸೂಚಿಸಲಾಗಿದೆ. ಸಾರ್ವಜನಿಕರು ಅಂತಹ ಧ್ವಜಗಳನ್ನು ಖರೀದಿಸಿದರೆ ಇಲಾಖೆಗೆ ಮರಳಿಸುವಂತೆ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಹೇಳಿದರು.

ಜೈಲಿನಲ್ಲಿರುವ ಅಪರಾಧಿ: ಪೊಲೀಸ್ ಕಮಿಷನರ್‌ಗೆ ಮನವಿ ಸಲ್ಲಿಕೆ

ಪ್ರವೀಣ್ ಕುಮಾರ್ ಬಿಡುಗಡೆಗೆ ವಿರೋಧ

ಮಂಗಳೂರು: ವಾಮಂಜೂರಿನಲ್ಲಿ ತನ್ನದೇ ಕುಟುಂಬದ ನಾಲ್ವರನ್ನು ಕೊಲೆ ಮಾಡಿರುವ ಹಂತಕ ಪ್ರವೀಣ್ ಕುಮಾರ್ (59) ಜೈಲಿನಿಂದ ಬಿಡುಗಡೆಯಾದರೆ ತಮ್ಮೆಲ್ಲರ ಜೀವಕ್ಕೆ ಅಪಾಯವಿದ್ದು, ಯಾವುದೇ ಕಾರಣಕ್ಕೂ ಆತನನ್ನು ಬಿಡುಗಡೆಗೊಳಿಸಬಾರದು ಎಂದು ಕುಟುಂಬಸ್ಥರು ಮಂಗಳೂರು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಹಂತಕ ಪ್ರವೀಣ್ ಕುಮಾರ್ ಪತ್ನಿ ಅನಸೂಯಾ ಹಾಗೂ ಕೊಲೆಯಾದವರ ನಿಕಟ ಸಂಬಂಧಿಗಳು ಸೇರಿದಂತೆ 50ಕ್ಕೂ ಹೆಚ್ಚು ಜನರು ಕಮಿಷನರ್ ಭೇಟಿಯಾಗಿ ತಮ್ಮ ಅಭಿಪ್ರಾಯ ಹೇಳಿಕೊಂಡರು. ಆತನನ್ನು ಯಾವುದೇ ಕಾರಣಕ್ಕೂ ಬಿಡುಗಡೆ ಮಾಡಬಾರದು ಎಂದು, ಕಮಿಷನರ್ ಮೂಲಕ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.

'ಪ್ರವೀಣ್ ಬಿಡುಗಡೆಯಾದರೆ ನನ್ನ ಹಾಗೂ ಕುಟುಂಬಕ್ಕೆ ಅಪಾಯವಿದ್ದು, ಆತನನ್ನು ಬಿಡುಗಡೆ ಮಾಡಬಾರದು' ಎಂದು ಅನಸೂಯಾ ವಿನಂತಿಸಿದರು.



ಹಂತಕ ಪ್ರವೀಣ್ ಕುಮಾರ್ ಬಿಡುಗಡೆ ಮಾಡಬಾರದು ಎಂದು ಒತ್ತಾಯಿಸಿ ಕುಟುಂಬಸ್ಥರು ಮಂಗಳೂರು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅವರಿಗೆ ಮನವಿ ಸಲ್ಲಿಸಿದರು

ಕೊಲೆಯಾಗಿದ್ದ ಅಪ್ಪಿ ಶೇರಿಗಾರ್ತಿಯ ಪುತ್ರ ಸೀತಾರಾಮ ಗುರುಪುರ ಮಾತನಾಡಿ,'ಪ್ರವೀಣ್ ಕುಮಾರ್ ಜೈಲಿನಲ್ಲಿದ್ದಾಗ ಒಮ್ಮೆ ಭೇಟಿಗೆ ಹೋದ ಸಂದರ್ಭದಲ್ಲಿ, ತಾನು ನಾಲ್ಕು ಕೊಲೆ ಮಾಡಿದ್ದು, ನಿಮ್ಮನ್ನೂ ಕೊಲೆ ಮಾಡುತ್ತೇನೆ ಎಂದು ನನಗೆ ಬೆದರಿಕೆ ಹಾಕಿದ್ದ' ಎಂದರು.

ಘಟನೆ ಹಿನ್ನೆಲೆ: ಪ್ರವೀಣ್ ಕುಮಾರ್ ತನ್ನ ತಂದೆಯ ಅಕ್ಕ ಅಪ್ಪಿ ಶೇರಿಗಾರ್ತಿ ಸೇರಿದಂತೆ ಮನೆಯಲ್ಲಿದ್ದ ನಾಲ್ಕು ಮಂದಿಯನ್ನು 1994ರ ಫೆಬ್ರವರಿ 23ರ ಮಧ್ಯರಾತ್ರಿ ಕೊಲೆ ಮಾಡಿ, ಸುಮಾರು ₹80 ಸಾವಿರ ಮೌಲ್ಯದ ಚಿನ್ನಾಭರಣ, ₹5,000 ನಗದು ಎಗರಿಸಿ ಪರಾರಿಯಾಗಿದ್ದ. ಆತನನ್ನು ಪೊಲೀಸರು ಬಂಧಿಸಿದ್ದರು. ಒಂದು ಜೈಲಿನಿಂದ ಮತ್ತೊಂದು ಜೈಲಿಗೆ ಸಾಗಿಸುತ್ತಿದ್ದ ವೇಳೆ ತಪ್ಪಿಸಿಕೊಂಡಿದ್ದ ಆರೋಪಿ ಸುಮಾರು ನಾಲ್ಕು ವರ್ಷಗಳ ಕಾಲ ಗೋವಾದಲ್ಲಿ ತಲೆ ಮರೆಸಿಕೊಂಡಿದ್ದ. ಕೊಲೆಗೆ ಮುನ್ನವೇ ವಿವಾಹಿತನಾಗಿದ್ದ ಆತ ಗೋವಾದಲ್ಲಿ ತಲೆ ಮರೆಸಿಕೊಂಡಿದ್ದ ಸಂದರ್ಭದಲ್ಲಿ ಮತ್ತೆ ಮದುವೆಯಾಗಿದ್ದ. ಆ ವೇಳೆ ಆತನ ಪತ್ತೆಗೆ ಬಹುಮಾನದ ಘೋಷಿಸಲಾಗಿತ್ತು. ಆಗ ಆತ ಎರಡನೇ ವಿವಾಹವಾಗಿದ್ದ ಮಹಿಳೆಯ ತಮ್ಮನೇ ಪೊಲೀಸರಿಗೆ ಮಾಹಿತಿ ನೀಡಿದ್ದ. ನಂತರ ಮತ್ತೆ ಅವನನ್ನು ಬಂಧಿಸಲಾಗಿತ್ತು ಎಂದು ಸೀತಾರಾಮ ಗುರುಪುರ ವಿವರಿಸಿದರು.

'ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಸನ್ನಡತೆ ಆಧಾರದಲ್ಲಿ ಆತನ ಬಿಡುಗಡೆ ಬಗ್ಗೆ ಮಾಹಿತಿ ದೊರಕಿದೆ. ಇದು ಆತಂಕಕ್ಕೆ ಕಾರಣವಾಗಿದೆ. ಆತನನ್ನು ಯಾವುದೇ ಕಾರಣಕ್ಕೂ ಬಿಡುಗಡೆ ಮಾಡಬಾರದು. ಆತ ಜೈಲಿನಲ್ಲೇ ಇರಬೇಕು. ಈ ಸಂಬಂಧ ಶಾಸಕರಿಗೂ ಮನವಿ ಸಲ್ಲಿಸಿ, ವಿನಂತಿಸುತ್ತೇವೆ' ಎಂದು ತಿಳಿಸಿದರು.

ಪ್ರವೀಣ್ ಕುಮಾರ್ ಪತ್ನಿ ಸೇರಿದಂತೆ ಕುಟುಂಬಸ್ಥರು ಆತನ ಬಿಡುಗಡೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು.
ಎನ್. ಶಶಿಕುಮಾರ್
ಪೊಲೀಸ್ ಕಮಿಷನರ್



ರಾಷ್ಟ್ರ ಧ್ವಜ ಖರೀದಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಅಂಗವಾಗಿ ಬೆಂಗಳೂರಿನ ಬಳೇಪೇಟೆಯ ಅಂಗಡಿಯೊಂದರಲ್ಲಿ ಮಂಗಳವಾರ ಶಾಲಾ ಮಕ್ಕಳು ರಾಷ್ಟ್ರ ಧ್ವಜ ಖರೀದಿಸುತ್ತಿರುವ ದೃಶ್ಯ ಕಂಡುಬಂತು - ಪ್ರಜಾವಾಣಿ ಚಿತ್ರ/ ರಂಜು ಪಿ.

'ಸ್ವಾತಂತ್ರ್ಯ ನಡಿಗೆ' ಪಾದಯಾತ್ರೆಗೆ ಚಾಲನೆ

ಯಲಹಂಕ: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯಲ್ಲಿ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿರುವ ಮೂರು ದಿನಗಳ 'ಸ್ವಾತಂತ್ರ್ಯ ನಡಿಗೆ' ಪಾದಯಾತ್ರೆಗೆ ಶಾಸಕ ಕೃಷ್ಣಬೈರೇಗೌಡ ಅವರು ಸಾದಹಳ್ಳಿ ಟೋಲ್ ಬಳಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸೆರೆಮನೆ ವಾಸ ಅನುಭವಿಸಿ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಹೋರಾಟಗಾರರು ಹಾಗೂ ಮಹನೀಯರನ್ನು ಸ್ಮರಿಸಿ, ಗೌರವಿಸುವುದು ಈ ಪಾದಯಾತ್ರೆಯ ಮುಖ್ಯ ಉದ್ದೇಶ ಎಂದು ತಿಳಿಸಿದರು.

ಪ್ರಜಾಪ್ರಭುತ್ವದ ಮೇಲೆ ವ್ಯವಸ್ಥಿತವಾಗಿ ದಾಳಿ ನಡೆಯುತ್ತಿದೆ. ರಾಜ್ಯ ಬಿಜೆಪಿ ಸರ್ಕಾರವು ಶೇ 40ರಷ್ಟು ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಕೋಮುಗಲಭೆ ಸೃಷ್ಟಿ, ಸರ್ವಾಧಿಕಾರಿ ಧೋರಣೆ, ಇವೆಲ್ಲದರ ನಡುವೆ ಜನಸಾಮಾನ್ಯರು ತತ್ತರಿಸಿ ಹೋಗಿದ್ದಾರೆ ಎಂದು ದೂರಿದರು.

ಸಂಚಾರ ದಟ್ಟಣೆ:

ಸಾವಿರಾರು ಕಾರ್ಯಕರ್ತರು ಸಾದಹಳ್ಳಿ ಟೋಲ್ ಬಳಿ ಜಮಾಯಿಸಿ, ನಂತರ ಪಾದಯಾತ್ರೆಯಲ್ಲಿ ಪಾಲ್ಗೊಂಡ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ 3 ಕಿ.ಮೀಗೂ ಹೆಚ್ಚು ದೂರ ಸಂಚಾರ ದಟ್ಟಣೆ ಉಂಟಾಗಿತ್ತು.

ವಿಧಾನ ಪರಿಷತ್ ಸದಸ್ಯರಾದ ಎಸ್. ರವಿ, ನಾಗರಾಜ್ ಯಾದವ್, ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್.ಶ್ರೀನಿವಾಸಯ್ಯ, ಟಿ.ಜಿ.ಚಂದ್ರು, ರವಿಕುಮಾರ್, ದಾನೇಗೌಡ, ಕೆ.ಅಶೋಕನ್, ಬಿ.ಕೆ.ಮಂಜುನಾಥಗೌಡ, ಆರ್.ಎಂ.ಶ್ರೀನಿವಾಸ್, ಎನ್.ಕೆ.ಮಹೇಶ್ ಕುಮಾರ್ ಉಪಸ್ಥಿತರಿದ್ದರು.



ಪಾದಯಾತ್ರೆಯಲ್ಲಿ ಸಾವಿರಾರು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು

ಗುಂಡಿಮಯ ರಸ್ತೆಯಲ್ಲಿ ಸಾಹಸದ ಪಯಣ



ನರಸೀಪುರ ಗ್ರಾಮ ಪಂಚಾಯಿತಿಯ ಚನ್ನೋಹಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಸೋಂಪುರ ಹೋಬಳಿಯ ಗ್ರಾಮಗಳನ್ನು ಸಂಪರ್ಕ ಕಲ್ಪಿಸುವ ಬಹುತೇಕ ರಸ್ತೆಗಳು ಕಿತ್ತುಹೋಗಿದ್ದು, ಮುಕ್ತ ಸಂಚಾರಕ್ಕೆ ಅಡಚಣೆ ಉಂಟಾಗಿದೆ.

ಮಳೆಯಿಂದ ರಸ್ತೆಗಳು ಇನ್ನಷ್ಟು ಅದ್ವಾನವಾಗಿವೆ. ಕೆಸರುಮಯವಾಗಿ ಗ್ರಾಮಸ್ಥರ ದಿನನಿತ್ಯದ ಸಂಚಾರಕ್ಕೆ ತೊಂದರೆಯಾಗಿದೆ.

ನರಸೀಪುರ ಗ್ರಾಮ ಪಂಚಾಯಿತಿಯ ಚನ್ನೋಹಳ್ಳಿ ಗ್ರಾಮದ ರಸ್ತೆಯು ಸಂಪೂರ್ಣವಾಗಿ ಕಿತ್ತುಹೋಗಿದ್ದು, ರಸ್ತೆಯಲ್ಲಿ ಮೊಳಕಾಲುದ್ದದ ಗುಂಡಿಗಳು ಬಿದ್ದಿವೆ. ಅವುಗಳಲ್ಲಿ ನೀರು ತುಂಬಿಕೊಂಡು ಗ್ರಾಮಕ್ಕೆ ಹೋಗಲು ಹರಸಾಹಸ ಪಡುವಂತಾಗಿದೆ.

ರಸ್ತೆಯಲ್ಲಿ ನೀರು ನಿಂತಿರುವುದರಿಂದ ಗುಂಡಿ ಯಾವುದು ಎಂದು ತಿಳಿಯದೇ ಬಿದ್ದು ಕೈಕಾಲು ಮುರಿದುಕೊಳ್ಳುವಂತಹ ಸ್ಥಿತಿ ಇದೆ ಎಂದು ಗ್ರಾಮಸ್ಥರು ನೋವು ತೋಡಿಕೊಂಡಿದ್ದಾರೆ.

ಆಗಲಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಲಕ್ಕೂರು ಗ್ರಾಮಕ್ಕೆ ಸಂಪರ್ಕಿಸುವ ರಸ್ತೆಯ ಸುಮಾರು ಅರ್ಧ ಕಿಲೋಮೀಟರ್ ಉದ್ದಕ್ಕೂ ಗುಂಡಿಗಳು ಬಿದ್ದಿವೆ. ಸುಮಾರು ಐದುನೂರಕ್ಕೂ ಹೆಚ್ಚು ಮನೆಗಳನ್ನು ಹೊಂದಿರುವ ಗ್ರಾಮದ ಜನರು ಈ ರಸ್ತೆಯನ್ನೇ ಅವಲಂಬಿಸಿದ್ದಾರೆ.

ದಾಬಸ್‌ಪೇಟೆ ಪಟ್ಟಣದ ಸಮೀಪವಿರುವ ಈ ರಸ್ತೆ ಡಾಂಬರ್ ಆಗಲಿ, ಕಾಂಕ್ರೀಟ್ ಭಾಗ್ಯ ಕಂಡಿಲ್ಲ ಎಂದು ದೂರುತ್ತಾರೆ ಗ್ರಾಮಸ್ಥರು.

ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸರ್ಕಾರವು ಗಮನ ಹರಿಸುತ್ತಿಲ್ಲ ಎಂದು ಸಾಮಾಜಿಕ ಕಾರ್ಯಕರ್ತೆ ಮಾರುತಿ ದೂರಿದರು.

ಚೀನಾ: 35 ಜನರಲ್ಲಿ 'ಹೆನಿಪಾವೈರಸ್' ಸೋಂಕು ಪತ್ತೆ

ಬೀಜಿಂಗ್ (ಪಿಟಿಐ): ಪ್ರಾಣಿಗಳಲ್ಲಿ ಜನಿಸಿದ ವೈರಸ್ ಮೂಲಕ ಹರಡುವ ಸೋಂಕಿನ ಪ್ರಕರಣಗಳು ಚೀನಾದಲ್ಲಿ ವರದಿಯಾಗಿವೆ. ಹೊಸ ವಿಧದ ಈ ಸೋಂಕು ಶಾಂಡಾಂಗ್ ಮತ್ತು ಹೆನಾನ್ ಪ್ರಾಂತ್ಯದಲ್ಲಿ ಒಟ್ಟು 35 ಜನರಲ್ಲಿ ಕಾಣಿಸಿಕೊಂಡಿದೆ ಎಂದು ಸರ್ಕಾರಿ ಒಡೆತನದ ಮಾಧ್ಯಮ ಗ್ಲೋಬಲ್ ಟೈಮ್ಸ್ ಮಂಗಳವಾರ ವರದಿ ಮಾಡಿದೆ.

ಈ ಹೊಸ ವಿಧದ ವೈರಸ್‌ಅನ್ನು ಹೆನಿಪಾವೈರಸ್ ಅಥವಾ ಎಲ್‌ವೈವಿ (ಲಾಂಗ್ಯಾ ಹೆನಿಪಾವೈರಸ್) ಎಂದು ಕರೆಯಲಾಗುತ್ತದೆ. ಜ್ವರದಿಂದ ಬಳಲುತ್ತಿರುವವರ ಗಂಟಲು ದ್ರವವನ್ನು ಪರೀಕ್ಷೆಗೆ ಒಳಪಡಿಸಿದ ಸಂದರ್ಭದಲ್ಲಿ ಈ ಸೋಂಕು ಇರುವುದು ಪತ್ತೆಯಾಗಿದೆ ಎಂದು ಪತ್ರಿಕೆ ವರದಿ ಮಾಡಿದೆ.

'ಈ ಹೊಸ ವೈರಸ್‌ನ ಸೋಂಕಿಗೆ ಒಳಗಾದವರಲ್ಲಿ ಜ್ವರ, ನಿಶ್ಶಕ್ತಿ, ಕೆಮ್ಮು, ಉಬ್ಬಳಿಕೆ, ಸ್ನಾಯುಸೆಳೆತ ಹಾಗೂ ಹಸಿವಿಲ್ಲದಿರುವಿಕೆಯಂತಹ ಲಕ್ಷಣಗಳು ಕಂಡುಬರುತ್ತವೆ.'

'ಈ ಸೋಂಕಿಗೆ ಸದ್ಯ ಲಸಿಕೆ ಅಥವಾ ಚಿಕಿತ್ಸೆ ಇಲ್ಲ. ಈ ಸೋಂಕಿನಿಂದಾಗಿ ಈ ವರೆಗೆ ಮರಣ ಸಂಭವಿಸಿಲ್ಲ. ಹೀಗಾಗಿ ಆತಂಕ ಪಡುವ ಅಗತ್ಯ ಇಲ್ಲ' ಎಂದು ಡ್ಯೂಕ್–ಎನ್‌ಯುಎಸ್ ಮೆಡಿಕಲ್ ಸ್ಕೂಲ್‌ನ ಪ್ರಾಧ್ಯಾಪಕ ವಾಂಗ್ ಲಿನ್‌ಫಾ ಹೇಳಿದ್ದಾರೆ.

ಮರಕ್ಕೆ ಕಾರು ಡಿಕ್ಕಿ: ಕಾಡಸಿದ್ದೇಶ್ವರ ಶ್ರೀ ಪಾರು

ಗುಳೇದಗುಡ್ಡ(ಬಾಗಲಕೋಟೆ ಜಿಲ್ಲೆ): ಪಟ್ಟಣದ ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಸ್ವಾಮೀಜಿ ಪ್ರಯಾಣಿಸುತ್ತಿದ್ದ ಕಾರು ತಾಲ್ಲೂಕಿನ ತೋಗುಣಸಿ ತಾಂಡಾದ ಹತ್ತಿರ ಮರಕ್ಕೆ ಮಂಗಳವಾರ ಡಿಕ್ಕಿ ಹೊಡೆದಿದೆ. ಸ್ವಾಮೀಜಿ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಗದಗ ಜಿಲ್ಲೆಯ ಹಾಲಕೆರೆ ಅನ್ನದಾನೇಶ್ವರ ಮಠದ ಕಾರ್ಯಕ್ರಮದಿಂದ ಮರಳುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ. ಕಾರು ನಜ್ಜುಗುಜ್ಜಾಗಿದ್ದು, ಚಾಲಕ ಸುನಿಲ್ ಹಾಗೂ ಸ್ವಾಮೀಜಿ ಜೊತೆಗಿದ್ದ ಗಣೇಶ ಕಳ್ಳಿಗುಡ್ಡ ಅವರಿಗೂ ಗಾಯಗಳಾಗಿವೆ.

ಪಟ್ಟಣದ ಖಾಸಗಿ ಆಸ್ಪತ್ರೆಯಲ್ಲಿ ಶ್ರೀಗಳಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಯಾವುದೇ ಸಮಸ್ಯೆ ಇಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

'ದೇಶದ ಮುಂದಿರುವ ಎಲ್ಲ ಸವಾಲುಗಳನ್ನು ಒಬ್ಬ ನಾಯಕನೇ ನಿವಾರಿಸಲಾರ'

ನಾಗ್ಪುರ (ಪಿಟಿಐ): 'ಈ ದೇಶದ ಮುಂದಿರುವ ಎಲ್ಲ ಸವಾಲುಗಳನ್ನು ಒಬ್ಬ ನಾಯಕನೇ ನಿವಾರಿಸಲು ಸಾಧ್ಯವಿಲ್ಲ. ಒಂದು ಸಂಘಟನೆ ಅಥವಾ ಪಕ್ಷದಿಂದಲೇ ಬದಲಾವಣೆ ತರಲು ಸಾಧ್ಯವಿಲ್ಲ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ ಭಾಗವತ್ ಮಂಗಳವಾರ ಹೇಳಿದರು.

ಮರಾಠಿ ಸಾಹಿತ್ಯ ಸಂಘಟನೆ 'ವಿದರ್ಭ ಸಾಹಿತ್ಯ ಸಂಘ'ದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಈ ವಿಚಾರವೇ ಆರ್‌ಎಸ್‌ಎಸ್ ಸಿದ್ಧಾಂತದ ತಳಹದಿಯೂ ಆಗಿದೆ. ಅಲ್ಲದೇ, ಒಬ್ಬ ನಾಯಕನೇ ಎಲ್ಲ ಸವಾಲುಗಳನ್ನು ನಿವಾರಿಸಬೇಕು ಎಂದು ನಿರೀಕ್ಷಿಸುವುದು ಸರಿಯಲ್ಲ. ಎಂಥ ದೊಡ್ಡ ನಾಯಕನೇ ಆಗಿದ್ದರೂ, ಆತನಿಂದ ಇದು ಸಾಧ್ಯವಿಲ್ಲ' ಎಂದರು.

'ಸಾಮಾನ್ಯ ಜನರು ಬೀದಿಗಿಳಿದು ಹೋರಾಟ ನಡೆಸಿದ್ದರಿಂದಲೇ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕ್ರಾಂತಿಕಾರಿಗಳ ಕೊಡುಗೆಯೂ ದೊಡ್ಡದಿದೆ. ಸುಭಾಷ್ಚಂದ್ರ ಬೋಸ್ ಅವರು ಬ್ರಿಟಿಷರಿಗೇ ಸವಾಲಾಗಿ ಪರಿಣಮಿಸಿದ್ದರು. ಅವರಿಂದಾಗಿ ಸಾಮಾನ್ಯ ಪ್ರಜೆಯೂ ಧೈರ್ಯದಿಂದ ಸಂಗ್ರಾಮದಲ್ಲಿ ಧುಮುಕುವಂತಾಯಿತು' ಎಂದು ಹೇಳಿದರು.

'ಹಿಂದೂ ಸಮಾಜ ತನ್ನ ಮೇಲಿರುವ ಜವಾಬ್ದಾರಿಯನ್ನು ನಿಭಾಯಿಸುವಷ್ಟು ಸಾಮರ್ಥ್ಯವನ್ನು ಹೊಂದಬೇಕು. ಸಮಾಜವೇ ನಾಯಕರನ್ನು ಸೃಷ್ಟಿಸುತ್ತದೆಯೇ ಹೊರತು ನಾಯಕರು ಸಮಾಜವನ್ನು ನಿರ್ಮಿಸಲಾರರು' ಎಂದೂ ಅವರು ಹೇಳಿದರು.

'ಜನರು ದೇಶದ ಸ್ಥಿತಿಯನ್ನು ಸುಧಾರಿಸುವ ಗುತ್ತಿಗೆಯನ್ನು ಇತರರಿಗೆ ನೀಡಬಾರದು. ಆರ್‌ಎಸ್‌ಎಸ್‌ಗೆ ಸಹ ಈ ಜವಾಬ್ದಾರಿಯನ್ನು ಹೊರಿಸಬಾರದು. ಬದಲಾಗಿ, ಜನರೇ ಈ ಜವಾಬ್ದಾರಿಯನ್ನು ನಿಭಾಯಿಸಬೇಕು. ನಿಮಗೆ ವಹಿಸಿದ ಕಾರ್ಯವನ್ನು ನೀವು ಮಾಡಿದರೆ ಸಾಕು, ಇತರರು ಅದನ್ನು ನೋಡಿ ಕಲಿಯುತ್ತಾರೆ' ಎಂದು ಭಾಗವತ್ ಹೇಳಿದರು.

'ಕಾಂಗ್ರೆಸ್ಸಿಗರಿಗೆ ರಾಷ್ಟ್ರಧ್ವಜದ ಬಣ್ಣಗಳೇ ಗೊತ್ತಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಮತ್ತು ಕಾಂಗ್ರೆಸ್ ಒಂದೇ ನಾಣ್ಯದ ಎರಡು ಮುಖಗಳು. ವಿಧಾನಸಭೆ ವಿರೋಧ ಪಕ್ಷದ ನಾಯಕರಿಗೆ ನಮ್ಮ ದೇಶದ ಧ್ವಜದಲ್ಲಿ ಯಾವ ಬಣ್ಣ ಇದೆ ಎಂಬುದೇ ಗೊತ್ತಿಲ್ಲ. ಇಂಥ ಮರೆವು ದುರದೃಷ್ಟಕರ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ವಿದ್ಯಾರಣ್ಯಪುರದ ದೊಡ್ಡಬೊಮ್ಮಸಂದ್ರ ಸರ್ಕಲ್ ಬಳಿ ಮಂಗಳವಾರ ನಡೆದ ಪಾದಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಷ್ಟ್ರಧ್ವಜದಲ್ಲಿ ಬಣ್ಣ ಏನಿದೆ ಎಂದು ಗೊತ್ತಿರದಷ್ಟು ಅವರು ಅಮಾಯಕರೇ? ದೇಶದ ರಾಷ್ಟ್ರಧ್ವಜದ ಬಣ್ಣದ ವಿಚಾರದಲ್ಲಿ ತಪ್ಪು ಮಾಹಿತಿ ಕೊಟ್ಟಿರುವ ಸಿದ್ದರಾಮಯ್ಯ ದೇಶದ ಜನರ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದರು.



ವಿದ್ಯಾರಣ್ಯಪುರದ ದೊಡ್ಡಬೊಮ್ಮಸಂದ್ರ ಸರ್ಕಲ್ ಬಳಿ ನಡೆದ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಬಿಜೆಪಿ ಕಾರ್ಯಕರ್ತರು

'ಆರ್‌ಎಸ್‌ಎಸ್ ಸೇರುವವರು ಜೀವನವನ್ನು ರಾಷ್ಟ್ರಕ್ಕಾಗಿ ಸಮರ್ಪಿಸಿಕೊಂಡಿರುತ್ತಾರೆ. ಮೇಲ್ವರ್ಗ, ಕೆಳವರ್ಗ ಎಂದು ಒಡೆದು ಆಳುವ ನೀತಿಯನ್ನು ಬ್ರಿಟಿಷರು ಕಲಿಸಿದ್ದು. ಅದನ್ನು ಸಿದ್ದರಾಮಯ್ಯ ಉಳಿಸಿಕೊಳ್ಳಲು ಬಯಸಿದ್ದಾರಾ? ಅಥವಾ ಒಡೆದು ಆಳುವುದು ಕಾಂಗ್ರೆಸ್ ನೀತಿಯೇ' ಎಂದು ಪ್ರಶ್ನಿಸಿದರು.

ರಾಷ್ಟ್ರಭಾವದ ಜಾಗೃತಿಗಾಗಿ ಬ್ಯಾಟರಾಯನಪುರದ ಬಿಜೆಪಿ ಘಟಕವು ಈ ಪಾದಯಾತ್ರೆ ಆಯೋಜಿಸಿತ್ತು.

'ಪೊಲೀಸ್ ನೇಮಕಾತಿ ವಯೋಮಿತಿ ಹೆಚ್ಚಿಸಿ'

ಬೆಂಗಳೂರು: 'ಪೊಲೀಸ್ ನೇಮಕಾತಿಗೆ ಸಂಬಂಧಿಸಿದಂತೆ ನೆರೆಯ ರಾಜ್ಯಗಳಲ್ಲಿ ಗರಿಷ್ಠ ವಯೋಮಿತಿ 30–35 ವರ್ಷ ಇದೆ. ನಮ್ಮ ರಾಜ್ಯದಲ್ಲಿ 25–27 ವರ್ಷ ಎಂದು ಇರುವುದು ರಾಜ್ಯದ ಯುವಜನರಿಗೆ ಎಸಗಿದ ಅನ್ಯಾಯ' ಎಂದು ಅಖಿಲ ಭಾರತ ನಿರುದ್ಯೋಗಿ ಯುವಜನರ ಹೋರಾಟ ಸಮಿತಿ ಆಕ್ರೋಶ ವ್ಯಕ್ತಪಡಿಸಿದೆ.

ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಕಾರ್ಯದರ್ಶಿ ಚನ್ನಬಸವ ಜಾನೇಕಲ್, 'ಕೋವಿಡ್ ಕಾಣಿಸಿ ಕೊಂಡ ಬಳಿಕ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಉದ್ಯೋಗದ ಕನಸು ಹೊತ್ತ ಲಕ್ಷಾಂತರ ಯುವಜನರು ವಯೋಮಿತಿ ಮೀರುತ್ತಿದ್ದಾರೆ. ಸರ್ಕಾರ ಪೊಲೀಸ್ ನೇಮಕಾತಿಗೆ ವಯೋಮಿತಿ ಕಡಿತಗೊಳಿಸಿದೆ. ಇದನ್ನು ಖಂಡಿಸಿ ಬುಧವಾರ ಬೆಳಿಗ್ಗೆ 10.30ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದರು.

'ಪೊಲೀಸ್ ನೇಮಕಾತಿಗೆ ಸಂಬಂಧಿಸಿದಂತೆ ಸಾಮಾನ್ಯ ವರ್ಗಕ್ಕೆ ಕೇರಳದಲ್ಲಿ ಗರಿಷ್ಠ ವಯೋಮಿತಿ 36 ವರ್ಷ ಇದೆ. ಮಹಾರಾಷ್ಟ್ರ, ಗುಜ ರಾತ್, ಆಂಧ್ರಪ್ರದೇಶದಲ್ಲಿ 30 ವರ್ಷ ಇವೆ. ರಾಜ್ಯದಲ್ಲಿ ಗರಿಷ್ಠ ವಯೋಮಿತಿ 25 ವರ್ಷ. ಪ.ಜಾತಿ, ಪ.ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಗರಿಷ್ಠ ವಯೋಮಿತಿ ಕೇರಳದಲ್ಲಿ 36 ವರ್ಷ, ಗುಜರಾತ್ ಮತ್ತು ಆಂಧ್ರ ಪ್ರದೇಶದಲ್ಲಿ 35 ವರ್ಷ ಇದೆ. ಕರ್ನಾಟಕದಲ್ಲಿ 27 ವರ್ಷಕ್ಕೆ ಸೀಮಿತಗೊಳಿಸ ಲಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರವು ವಯೋಮಿತಿ ಹೆಚ್ಚಿಸಿ, ನೇಮಕಾತಿ ಮಾಡಬೇಕು ಎಂದು ಅವರು ಹೇಳಿದರು.

'ಜಾತಿಯ ಕೀಳರಿಮೆ ತೊರೆಯಿರಿ'

ಆನೇಕಲ್: 'ಜಾತಿಯ ಬಗೆಗಿನ ಕೀಳರಿಮೆ ಬಿಟ್ಟು ಮಾದಿಗ ಎಂಬ ಹೆಮ್ಮೆಯಿಂದ ಹೇಳಿಕೊಳ್ಳುವ ಸ್ವಾಭಿಮಾನವನ್ನು ಸಮಾಜದವರು ಬೆಳೆಸಿಕೊಳ್ಳಬೇಕು' ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ಸಲಹೆ ನೀಡಿದರು.

ತಾಲ್ಲೂಕಿನ ಸರ್ಜಾಪುರದಲ್ಲಿ ಮಂಗಳವಾರ ಸ್ವಾಭಿಮಾನಿ ಮಾದಿಗ ಮಹಾಸಭಾದ ಆನೇಕಲ್ ಘಟಕದಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಜ್ಯ ಮತ್ತು ರಾಷ್ಟ್ರದಲ್ಲಿ ಶಿಕ್ಷಣ, ಉದ್ಯೋಗ, ಸಾಮಾಜಿಕ ಸ್ಥಾನಮಾನದಲ್ಲಿ ಮಾದಿಗರ ಪರಿಸ್ಥಿತಿ ಅತ್ಯಂತ ಕೆಳಮಟ್ಟದಲ್ಲಿದೆ. ಸದಾಶಿವ ಆಯೋಗದಲ್ಲಿ ಮಾದಿಗರ ಸ್ಥಿತಿಗತಿ ಬಗ್ಗೆ ಅತ್ಯಂತ ಸ್ಪಷ್ಟವಾಗಿ ತಿಳಿಸಿದ್ದಾರೆ. ಉನ್ನತ ಶಿಕ್ಷಣ ಪಡೆಯುವಲ್ಲಿ ಈ ಸಮಾಜದ ಜನರು ಹಿಂದುಳಿದಿರುವುದನ್ನು ಗುರುತಿಸಿದ್ದಾರೆ ಎಂದು ತಿಳಿಸಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮಾತನಾಡಿ, ಶಿಕ್ಷಣದಿಂದ ಮಾತ್ರ ಉನ್ನತವಾದುದ್ದನ್ನು ಸಾಧಿಸಲು ಸಾಧ್ಯ ಎಂಬುದನ್ನು ಅಂಬೇಡ್ಕರ್ ಸೇರಿದಂತೆ ಮಹಾನ್ ವ್ಯಕ್ತಿಗಳು ಸಾಧಿಸಿ ತೋರಿಸಿದ್ದಾರೆ. ಹಾಗಾಗಿ, ಪ್ರತಿಯೊಬ್ಬರು ಶಿಕ್ಷಣ ಪಡೆಯಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಎಂ. ಶಂಕರಪ್ಪ, ಮುಖಂಡರಾದ ಎ. ಉದಯ್‌ಕುಮಾರ್ ಮತ್ತಿತರರಿದ್ದರು.

ಚಿತ್ರಾವಳಿ



ಕ್ವಿಟ್ ಇಂಡಿಯಾ ದಿನಾಚರಣೆ ಹಾಗೂ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ ಅವರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಸದಸ್ಯರನ್ನು ಮಂಗಳವಾರ ಗೌರವಿಸಲಾಯಿತು



ಶಾಸಕ ಡಾ.ಜಿ. ಪರಮೇಶ್ವರ ಅವರ ಜನ್ಮದಿನದ ಅಂಗವಾಗಿ ಕಾಂಗ್ರೆಸ್ ಮುಖಂಡ ಬಿ. ವಿ. ಜಯರಾಮು ಅಭಿನಂದಿಸಿದರು. ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸುನಿಲ್ ಪ್ರಕಾಶ್, ಕನಕಪುರ ಜಗದೀಶ್ ಇದ್ದರು



ಮೊಹರಂ ಹಬ್ಬದ ರಜೆ ಇದ್ದ ಕಾರಣ ಬೆಂಗಳೂರಿನ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಮಂಗಳವಾರ ಜನಸಾಗರವೇ ಹರಿದುಬಂದಿತ್ತು. ಸುಮಾರು 49 ಸಾವಿರ ಮಂದಿ ಲಾಲ್‌ಬಾಗ್‌ಗೆ ಭೇಟಿ ನೀಡಿದ್ದು, ₹32.64 ಲಕ್ಷ ಸಂಗ್ರಹವಾಗಿದೆ – ಪ್ರಜಾವಾಣಿ ಚಿತ್ರಗಳು

ಅಂತರಿಕ್ಷದಲ್ಲಿ ಕೇಳಿಬಂದ

ಲಬ್ ಡಬ್... ಲಬ್ ಡಬ್...

ನೇಸರ ಕಾಡನಕುಪ್ಪೆ

> ನಾವು ಹೇಗೆ ಅನ್ಯಗ್ರಹಜೀವಿಗಳ ಶೋಧದಲ್ಲಿ ಉತ್ಸುಕರಾಗಿದ್ದೇವೆಯೋ, ಅಂತೆಯೇ ಅನ್ಯಗ್ರಹಜೀವಿಗಳು ಅದೇ ಪ್ರಯತ್ನದಲ್ಲಿರಬಹುದು




ಅನ್ಯಗ್ರಹ ಜೀವದ ಶೋಧದ ಪ್ರಯತ್ನ ಹೊಸತೇನಲ್ಲ. ಭೂಮಿಯನ್ನು ಬಿಟ್ಟು ಬೇರೆ ಕಡೆಯೂ ಜೀವಿಗಳು ಇರಬಹುದೇ ಎಂಬ ಮಾನವನ ಕುತೂಹಲಕ್ಕೇ ಈಗ ಸಾವಿರಾರು ವರ್ಷಗಳ ಇತಿಹಾಸವಿದೆ. ಆಧುನಿಕ ಜಗತ್ತಿನಲ್ಲಿ 'ನಾಸಾ' ಮಾದರಿಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳು ಅಂತರಿಕ್ಷಕ್ಕೇ ಬೂದುಗಾಜು ತೊಡಿಸಿ ನಿರಂತರವಾಗಿ ಶೋಧಿಸುತ್ತಿವೆ. ಜೀವಶೋಧದ ಈ ಪ್ರಯತ್ನಕ್ಕೆ ಬೆನ್ನುತಟ್ಟುವಂತೆ ಈಗ ಹೊಸತೊಂದು ಶೋಧವಾಗಿದೆ. ಬಲುದೂರದ ಅಂತರಿಕ್ಷದಿಂದ ಮಾನವನ ಹೃದಯದ ಬಡಿತವನ್ನು ಹೋಲುವ ರೇಡಿಯೊ ಸಂದೇಶವೊಂದು ಭೂಮಿಯನ್ನು ತಲುಪಿದೆ!

ಹಾಲಿವುಡ್ ಸಿನೆಮಾಗಳಲ್ಲಿ ನೀವು ನೋಡಿರಬಹುದು. ರೊನಾಲ್ಡ್ ಎಮ್ರಿಚ್ ನಿರ್ದೇಶನದ 'ದಿ ಇನ್‌ಡಿಪೆಂಡೆನ್ಸ್ ಡೇ' ಸಿನಿಮಾದಲ್ಲೂ ಇದೇ ಮಾದರಿಯ ಅಪರಿಚಿತ ರೇಡಿಯೊ ಸಂದೇಶವೊಂದು ಭೂಮಿಯನ್ನು ತಲುಪಿರುತ್ತದೆ. ಅದು ಅನ್ಯಗ್ರಹಜೀವಿಗಳು ಕಳುಹಿಸಿದ್ದ ಸಂದೇಶ. ಅದನ್ನು ಹಿಂಬಾಲಿಸಿ ಬಳಿಕ ಅನ್ಯಗ್ರಹಜೀವಿಗಳೂ ಭೂಮಿಗೆ ದಾಳಿ ಇಡುತ್ತವೆ. ಆದರೆ, ಅದು ಕೇವಲ ಸಿನಿಮಾ. ವಾಸ್ತವದಲ್ಲಿ ಲಕ್ಷಾಂತರ ಜ್ಯೋತಿರ್ವರ್ಷಗಳನ್ನು ದಾಟಿ ಭೂಮಿಗೆ ಅಗ್ಯಗ್ರಹ ಜೀವಿಯೊಂದು ಬರುವುದಕ್ಕೆ ಸಾಕಷ್ಟು ಇತಿಮಿತಿಗಳಿರುತ್ತವೆ. ಅದೂ ಅಲ್ಲದೇ, ಅನ್ಯಗ್ರಹಜೀವಿಗಳು ಇರುವುದೇ ಈವರೆಗೂ ಸಾಬೀತಾಗಿಲ್ಲದೇ ಇರುವುದು ಈ ಬಗೆಯ ಕಲ್ಪನೆಗಳಿಗೆಲ್ಲಾ ಕೇವಲ ಸಿನಿಮೀಯ ರೂಪವನ್ನು ಮಾತ್ರ ನೀಡಿವೆ.

ಜೊತೆಗೆ, ಇದು ಮೊದಲನೇ ಬಾರಿ ಸಿಕ್ಕಿರುವ ರೇಡಿಯೋ ಸಂದೇಶವೇನಲ್ಲ. ಈ ಹಿಂದೆಯೂ ರೇಡಿಯೊ ಸಂದೇಶಗಳು ನಮಗೆ ದೊರೆತಿವೆ. ರೇಡಿಯೊ ಸಂದೇಶಗಳೆಂದರೆ ಅವನ್ನು ಬುದ್ಧಿಮತ್ತೆ ಇರುವ ಜೀವಿಗಳೇ ಸೃಷ್ಟಿಸಬೇಕು ಎಂದೇನಿಲ್ಲ. ಬಲುದೂರದ ಗ್ಯಾಲಕ್ಸಿ(ನಕ್ಷತ್ರಪುಂಜ)ಗಳಲ್ಲಿ ಇರುವ 'ನ್ಯೂಟ್ರಾನ್ ಸ್ಟಾರ್'ಗಳಿಂದ ಈ ಬಗೆಯ ರೇಡಿಯೊ ಸಂದೇಶಗಳು ಹೊರಹೊಮ್ಮುತ್ತವೆ. ಇವನ್ನು ರೇಡಿಯೊ ಪಲ್ಸಾರ್ ಹಾಗೂ ಮ್ಯಾಗ್ನೆಟಾರ್ ಎಂದು ಕರೆಯಲಾಗುತ್ತದೆ. ಅತಿ ದೊಡ್ಡ ಗಾತ್ರವನ್ನು ಹೊಂದಿರುವ ನಕ್ಷತ್ರಗಳಲ್ಲಿನ ಜಲಜನಕವೆಲ್ಲಾ ಮುಗಿದ ಮೇಲೆ ಆ ನಕ್ಷತ್ರದ ಆಯಸ್ಸು ಬಹುತೇಕ ಮುಗಿದಂತೆಯೇ. ಆಗ ಅದರ ಗುರುತ್ವಬಲ ಹೆಚ್ಚಾಗಿ ಅದರ ತಿರುಳು ತನಗೆ ತಾನೇ ಕುಸಿಯಲು ಆರಂಭವಾಗುತ್ತದೆ. ಅದರ ಗಾತ್ರ ಕುಗ್ಗುತ್ತಾ ಸಾಂದ್ರತೆ ಹೆಚ್ಚಲು ಶುರುವಾಗುತ್ತದೆ. ಆ ಹಂತದ ನಕ್ಷತ್ರವನ್ನು 'ನ್ಯೂಟ್ರಾನ್ ಸ್ಟಾರ್' ಎನ್ನಲಾಗುತ್ತದೆ. ಈ 'ನ್ಯೂಟ್ರಾನ್ ಸ್ಟಾರ್'ಗಳ ಪರಿಭ್ರಮಣೆಯ ವೇಗವೂ ಹೆಚ್ಚು. ಈ ನಕ್ಷತ್ರದ ಅಧಿಕ ಸಾಂದ್ರತೆ ಹಾಗೂ ಪರಿಭ್ರಮಣೆಯ ಫಲವಾಗಿ ಅತಿ ಪ್ರಬಲವಾದ ರೇಡಿಯೊ ಸಂದೇಶಗಳು ಹೊರಹೊಮ್ಮುತ್ತವೆ. ಅದೇ ಈಗ ನಮಗೆ ಸಿಕ್ಕಿರುವ ರೇಡಿಯೊ ಸಂದೇಶ.




ಇದುವರೆಗೂ ಇಂತಹ ಅನೇಕ ರೇಡಿಯೊ ಸಂದೇಶಗಳು ನಮಗೆ ಸಿಕ್ಕಿವೆ. ಆದರೆ, ಈಗ ಸಿಕ್ಕಿರುವುದು ಕೊಂಚ ವಿಶೇಷವಾಗಿದೆ. ಹಾಗಾಗಿಯೇ, ಇದು ಸಂಚಲನ ಮೂಡಿಸಿದೆ. ಅಮೆರಿಕದ ಮಷಾಸುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ವಿಶ್ವದ ಹಲವು ಪ್ರಮುಖ ಬಾಹ್ಯಾಕಾಶ ವಿಜ್ಞಾನಿಗಳ ಸೇರಿ ಈ ಸಂಶೋಧನೆಯನ್ನು ನಡೆಸಿದ್ದಾರೆ. ಈ ಬಗೆಯ ರೇಡಿಯೊ ಸಂದೇಶಗಳನ್ನು 'ಫಾಸ್ಟ್ ರೇಡಿಯೊ ಬರ್ಸ್ಟ್' (ಎಫ್‌ಆರ್‌ಬಿ) ಎನ್ನುತ್ತಾರೆ. ಈವರೆಗೆ ಸಿಕ್ಕಿರುವ ರೇಡಿಯೊ ಸಂದೇಶಗಳಿಗಿಂತ ಇದು ಬಹುಪಾಲು ಒಂದು ಸಾವಿರ ಪಟ್ಟು ಹೆಚ್ಚು ಬಲಶಾಲಿಯಾಗಿದೆ. 0.2 ಸೆಕೆಂಡ್‌ಗಳ ಅಂತರದಲ್ಲಿ ಈ ರೇಡಿಯೊ ಸಂದೇಶ ಪ್ರಸಾರವಾಗುತ್ತಿದ್ದು, ಮಾನವನ ಹೃದಯದ ಬಡಿತವನ್ನೇ ಹೋಲುವಂತಿರುವುದು ಕುತೂಹಲ ಕೆರಳಿಸಲು ಕಾರಣವಾಗಿದೆ.



ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೊ)ಯನ್ನೂ ಸೇರಿದಂತೆ ಅನೇಕ ರೇಡಿಯೊ ದೂರದರ್ಶಕಗಳು ಕಾರ್ಯನಿರ್ವಹಿಸುತ್ತಿವೆ. ಅಮೆರಿಕದ 'ನಾಸಾ' ಅಂತರಿಕ್ಷದಲ್ಲೇ ಹಲವು ಕೃತಕ ಉಪಗ್ರಹಗಳು ಹಾಗೂ ದೂರದರ್ಶಕಗಳನ್ನು ಪ್ರತಿಷ್ಠಾಪಿಸಿದೆ. ಭೂಮಿಗೆ ಅತಿ ಸನಿಹವಾಗಿರುವ ನಕ್ಷತ್ರಪುಂಜ 'ಆಂಡ್ರಾಮಿಡಾ'. ಅದು ಭೂಮಿಯಿಂದ 2.537 ಮಿಲಿಯನ್ ಜ್ಯೋತಿವರ್ಷ ದೂರದಲ್ಲಿದೆ. ಆದರೆ, ಈಗ ಸಿಕ್ಕಿರುವ ಈ ರೇಡಿಯೊ ಸಂದೇಶ ಹಲವು ಬಿಲಿಯನ್ ಜ್ಯೋತಿರ್ವರ್ಷ ದೂರದಲ್ಲಿರುವ ನ್ಯೂಟ್ರಾನ್ ಅಥವಾ ಮಾಗ್ನೆಟಾರ್‌ನಿಂದ ಬಂದಿರುವಂಥದ್ದು. ರೇಡಿಯೊ ಸಂದೇಶವೊಂದು ಅಷ್ಟು ದೂರದಿಂದ ಭೂಮಿಯನ್ನು ತಲುಪಬೇಕಾದರೆ ಹಾಗೂ ಅದು ಅಷ್ಟು ಪ್ರಬಲವಾಗಿರಬೇಕು ಎಂದಾದರೆ ಅದು ಬಹುದೈತ್ಯ ನಕ್ಷತ್ರವೊಂದರಿಂದಲೇ ಹೊಮ್ಮಿರಬೇಕು. ಅಥವಾ ಬುದ್ಧಿಮತ್ತೆ ಇರುವ, ತಾಂತ್ರಿಕವಾಗಿ ಬಲು ಸುಧಾರಿಸಿರುವ ಜೀವಿಗಳು ಆ ರೇಡಿಯೋ ಸಂದೇಶವನ್ನು ಸೃಷ್ಟಿಸಿ ಕಳುಹಿಸಿರಬಹುದು ಎನ್ನುವುದು ವಿಜ್ಞಾನಿಗಳ ವಾದ.

'ನಾವು ಹೇಗೆ ಅನ್ಯಗ್ರಹಜೀವಿಗಳ ಶೋಧದಲ್ಲಿ ಉತ್ಸುಕರಾಗಿದ್ದೇವೆಯೋ; ಅಂತೆಯೇ ಅನ್ಯಗ್ರಹಜೀವಿಗಳು ಅದೇ ಪ್ರಯತ್ನದಲ್ಲಿರಬಹುದು. ಅದರ ಫಲವಾಗಿ ಈ ಬಗೆಯ ಸಂದೇಶವೊಂದು ನಮಗೆ ತಲುಪಿರಬಹುದು. ಮಾನವನ ಹೃದಯದ ಬಡಿತವನ್ನು ಹೋಲುವುದು ಕಾಕತಾಳೀಯವೂ ಆಗಿರಬಹುದು ಅಥವಾ ಉದ್ದೇಶಪೂರ್ವಕವೂ ಆಗಿರಬಹುದು. ಆದರೆ, ಸಾಧ್ಯತೆಯನ್ನು ಅಲ್ಲಗಳೆದು ಜೀವಶೋಧ ನಿಲ್ಲಿಸಲಾಗದು. ಈ ನಿಟ್ಟಿನಲ್ಲಿ ಇದು ಬಹುದೊಡ್ಡ ಸುಳಿವು' ಎಂದು ಅಮೆರಿಕದ ಬಾಹ್ಯಾಕಾಶ ವಿಜ್ಞಾನಿ ನೀಲ್ ಡಿಗ್ರಾಸ್ ಟೈಸನ್ ಪ್ರತಿಕ್ರಿಯಿಸಿದ್ದಾರೆ.

ಈ ಸಂಶೋಧನೆಯು ಹಲವು ಹೊಸ ಸಂಶೋಧನೆಗಳಿಗೆ ದಾರಿ ಮಾಡಿಕೊಡಬಲ್ಲದು. ನಕ್ಷತ್ರಗಳವರೆಗಿನ ಈವರೆಗಿನ ಅಧ್ಯಯನಗಳು ಏರುಪೇರಾಗಬಹುದು. ರೇಡಿಯೊ ಸಂದೇಶದ ಕೂಲಂಕಷವಾಗಿ ಅಧ್ಯಯನ ಈಗಾಗಲೇ ನಡೆದಿದೆ. ಅದರಿಂದ ಹೊಸ ಸುಳಿವುಗಳೂ ಸಿಗಬಹುದು. ಜ್ಞಾನದ ಪರಿಧಿ ವಿಸ್ತರಿಸಲು ಇದು ಮಾರ್ಗಸೂಚಿಯೂ ಆಗಬಹುದು.



ಚಿಲಿಯಲ್ಲಿರುವ ಅಲ್ಮಾ ದೂರದರ್ಶಕ

ಇ- ವಾಹನ ಚಾರ್ಜಿಂಗ್‌ನಲ್ಲೂ ವೇಗ

ಶರತ್ ಹೆಗ್ಡೆ

> ವಿದ್ಯುತ್ ವಾಹನಗಳೇನೋ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಆದರೆ ಚಾರ್ಜಿಂಗ್ ತೆಗೆದುಕೊಳ್ಳುವ ಸಮಯವೇ ಸಮಸ್ಯೆಯಾಗಿದೆ

ಮೊಬೈಲ್‌ಗೆ ಫಾಸ್ಟ್ ಚಾರ್ಜರ್‌ಗಳು ಬಂದಿವೆಯಲ್ಲಾ... ಅದೇ ವೇಗದಲ್ಲಿ ವಾಹನಗಳ ಬ್ಯಾಟರಿಯೂ ಚಾರ್ಜ್ ಆದರೆ...? ವಾವ್! ಅಂತಹ ಸೌಲಭ್ಯವೂ ಬಂದಿದೆ.

ವಿದ್ಯುತ್ ವಾಹನಗಳೇನೋ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಆದರೆ ಖರೀದಿಗೆ ಬರುವವರಲ್ಲಿ ಕಂಡು ಬರುವ ತಕ್ಷಣದ ಆತಂಕವೆಂದರೆ ಬ್ಯಾಟರಿ ಚಾರ್ಜಿಂಗ್ ಅವಧಿ. ಸ್ಕೂಟರ್‌ನಿಂದ ಹಿಡಿದು ಕಾರು, ಬಸ್‌ವರೆಗೂ ಇ-ವಾಹನಗಳು ಒಮ್ಮೆ ತಮ್ಮ ವಿದ್ಯುತ್ ಕೋಶಗಳ ಭರ್ತಿಗೆ ತೆಗೆದುಕೊಳ್ಳುವ ಸರಾಸರಿ ಸಮಯ 6ರಿಂದ 8 ಗಂಟೆ. ವಾಹನಗಳ ಜೊತೆ ಕೊಡುವ ಚಾರ್ಜರ್‌ಗಳೂ ಇದೇ ಇತಿಮಿತಿಯನ್ನು ಹೊಂದಿವೆ.

ಬೆಸ್ಕಾಂನ ಚಾರ್ಜಿಂಗ್ ಕೇಂದ್ರಗಳಲ್ಲೂ ಫಾಸ್ಟ್ ಚಾರ್ಜಿಂಗ್ ವ್ಯವಸ್ಥೆ ಇದೆಯಾದರೂ ವಾಹನವನ್ನು ಚಾರ್ಜಿಂಗ್ ಕೇಂದ್ರಗಳಲ್ಲೇ ನಿಲ್ಲಿಸಬೇಕು. ಹಾಗಿದ್ದೂ ಪೂರ್ಣ ಭರ್ತಿಗೆ ಸ್ವಲ್ಪ ಹೆಚ್ಚೇ ಅನ್ನುವಷ್ಟು ಸಮಯ ತೆಗೆದುಕೊಳ್ಳುತ್ತದೆ.

ಒಂದೆಡೆ ವಾಹನ ಉತ್ಪಾದನೆಯಲ್ಲಿ (ಅದರಲ್ಲೂ ದ್ವಿಚಕ್ರ ವಾಹನಗಳು) ತೀವ್ರ ಸ್ಪರ್ಧೆ ಇದೆ. ಇದುವರೆಗೆ ಹೆಸರೇ ಕೇಳಿರದ ಹೊಸ ಕಂಪನಿಗಳು ಸ್ಟಾರ್ಟ್ ಅಪ್ ಹೆಸರಿನಲ್ಲಿ ತಲೆಯೆತ್ತಿ, ತಮ್ಮ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿವೆ. ಆದರೆ, ಈ ಎಲ್ಲ ವಾಹನಗಳ ಚಾರ್ಜಿಂಗ್‌ಗೆ ತಗಲುವ ದೀರ್ಘ ಅವಧಿಯ ಸಮಸ್ಯೆಯನ್ನೇ ಮುಂದಿಟ್ಟುಕೊಂಡು ಬಂದಿರುವುದೇ ಫಾಸ್ಟ್ ಚಾರ್ಜರ್‌ಗಳು.

ಇತ್ತೀಚೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಇ-ವಾಹನ ಪ್ರದರ್ಶನದಲ್ಲಿ ಕುತೂಹಲದ ಕಣ್ಣು ನೆಟ್ಟಿದ್ದು ಫಾಸ್ಟ್ ಚಾರ್ಜರ್‌ಗಳತ್ತ.

ಲಂಡನ್‌ನ ಮ್ಯಾಗ್ನಿರ್ಝಾನ್ ಗ್ರೀನ್ ಎನರ್ಜಿ ಕಂಪನಿಯು ಅರ್ಧಗಂಟೆಯಲ್ಲಿ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ಬ್ಯಾಟರಿ ಚಾರ್ಜ್ ಮಾಡುವ, ಒಂದು ಗಂಟೆಯ ಒಳಗೆ ಕಾರು ಬ್ಯಾಟರಿ ಭರ್ತಿ ಮಾಡುವ, 70ರಿಂದ 75 ನಿಮಿಷಗಳ ಒಳಗೆ ಟ್ರಕ್ ಅಥವಾ ಬಸ್ ಬ್ಯಾಟರಿ ಭರ್ತಿ ಮಾಡುವ ಚಾರ್ಜರ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಬೆಂಗಳೂರಿನಲ್ಲಿಯೂ ಈ ಚಾರ್ಜರ್‌ಗಳು ಲಭ್ಯ ಇವೆ.

9 ಮಾದರಿಯ ಚಾರ್ಜರ್‌ಗಳನ್ನು ಈ ಕಂಪನಿ ಸಿದ್ಧಪಡಿಸಿದೆ. 20 ಕಿಲೋವ್ಯಾಟ್‌ನಿಂದ 180 ಕಿಲೋವ್ಯಾಟ್‌ವರೆಗಿನ ಸಾಮರ್ಥ್ಯದ, ಎಸಿ ಹಾಗೂ ಡಿಸಿ ಚಾರ್ಜರ್‌ಗಳು ಇಲ್ಲಿವೆ. ಮನೆ, ಅಪಾರ್ಟ್‌ಮೆಂಟ್, ಪಾರ್ಕಿಂಗ್ ಪ್ರದೇಶ, ಪೆಟ್ರೋಲ್ ಬಂಕ್, ಹೋಟೆಲ್, ಡಾಬಾಗಳಲ್ಲಿ ಅಳವಡಿಸಿ ಫಾಸ್ಟ್ ಚಾರ್ಜಿಂಗ್ ಸೌಲಭ್ಯ ಕೊಡುವ ಮೂಲಕ ವಾಹನಮಾಲೀಕರ ಸಮಯ ಉಳಿಸಬಹುದು. ಸ್ವಂತ ಉದ್ಯೋಗವಾಗಿಯೂ ಮಾಡಿಕೊಳ್ಳಬಹುದು ಎನ್ನುತ್ತಾರೆ, ಕಂಪನಿಯ ತಾಂತ್ರಿಕ- ವಾಣಿಜ್ಯ ವ್ಯವಸ್ಥಾಪಕ ಜಾಕೋಬ್ ಲಿಯೋನ್ಸ್.


ಇನ್ನು ಭಾರತೀಯ ಕಂಪನಿಗಳೂ ಫಾಸ್ಟ್ ಚಾರ್ಜರ್‌ಗಳತ್ತ ಕಣ್ಣಿಟ್ಟಿವೆ. ಹರಿಯಾಣದ ಇ-ಫಿಲ್ ಎಲೆಕ್ಟ್ರಿಕ್ ಕಂಪನಿಯು ಸಿಂಗಲ್ ಫೇಸ್‌ನಲ್ಲಿ ಸಾಮಾನ್ಯ, ವೇಗ ಮತ್ತು ಅತಿವೇಗವಾಗಿ ಚಾರ್ಜ್ ಮಾಡುವ ಚಾರ್ಜರ್‌ಗಳನ್ನು ಹೊರತಂದಿದೆ. 3.5 ಕಿಲೋವ್ಯಾಟ್‌ನಿಂದ 7 ಕಿಲೋವ್ಯಾಟ್‌ವರೆಗಿನ ಸಾಮರ್ಥ್ಯದ ಚಾರ್ಜರ್‌ಗಳು ಈ ವಿಭಾಗದಲ್ಲಿವೆ. ಇನ್ನು ತ್ರಿಫೇಸ್‌ಗಳಲ್ಲಿ ಕೆಲಸ ಮಾಡುವ ಸಾಮಾನ್ಯ ಚಾರ್ಜರ್ ಮತ್ತು ಅತಿವೇಗದ ಚಾರ್ಜರ್‌ಗಳನ್ನು ಹೊರತಂದಿದೆ. ಇವುಗಳ ಸಾಮರ್ಥ್ಯ 15 ಕಿಲೋ ವ್ಯಾಟ್‌ನಿಂದ 30 ಕಿಲೋವ್ಯಾಟ್‌ವರೆಗಿದೆ. ಚಾರ್ಜರ್‌ಗಳ ಭಾರವೂ ಕಡಿಮೆಯಿದೆ.

ಎಲೆಕ್ಟ್ರಿವಾ ಕಂಪನಿಯು ಇದೇ ಕ್ಷೇತ್ರದಲ್ಲಿದ್ದು, ಚಾರ್ಜರ್ ಕೇಂದ್ರಗಳ ಫ್ರಾಂಚೈಸಿ ನೀಡುತ್ತಿದೆ. ಚಾರ್ಜಿಂಗ್ ಕೇಂದ್ರಗಳಿಗೆ ಸೌರ ಫಲಕ ಅಳವಡಿಸಿ ಸೌರಶಕ್ತಿಯ ಮೂಲಕ ಚಾರ್ಜರ್‌ಗಳು ಕೆಲಸ ಮಾಡುವಂತೆ ನೆರವಾಗುತ್ತಿದೆ.

ಇವು ಕೇವಲ ಬೆರಳೆಣಿಕೆಯ ನೋಟಗಳು. ಹತ್ತಾರು ಕಂಪನಿಗಳು, ವಾಹನ ತಯಾರಕರು, ಸಂಶೋಧಕರೂ ಈ ಕ್ಷೇತ್ರದಲ್ಲಿ ತೊಡಗಿ ಹೊಸ ಚಾರ್ಜರ್‌ಗಳನ್ನು ಬಿಡುಗಡೆ ಮಾಡುತ್ತಲೇ ಇದ್ದಾರೆ. ಬ್ಯಾಟರಿ ವಿನಿಮಯ ಕೇಂದ್ರಗಳೂ (ಸ್ವಾಪಿಂಗ್ ಸೆಂಟರ್) ತಲೆ ಎತ್ತಿವೆ. ಚಾರ್ಜರ್‌ಗಳ ಬೆಲೆ ಸ್ವಲ್ಪ ಇಳಿದರೆ ಮನೆ ಮನೆಯಲ್ಲೂ ಅಳವಡಿಕೆಗೆ ಬೇಡಿಕೆ ಬರಬಹುದು.



ವಿದ್ಯುತ್ ವಾಹನ ಚಾರ್ಜ್ ಮಾಡುವ ಮ್ಯಾಗ್ನಿರ್ಝಾನ್ ಕಂಪನಿಯ ಫಾಸ್ಟ್ ಚಾರ್ಜರ್



ಚಾರ್ಜಿಂಗ್ ಬೇಗ ಆದರೆ ವಾಹನ ಮಾಲೀಕರ ಸಮಯ ಉಳಿಯುತ್ತದೆ

ನಮ್ಮ ದೇಹದ ಪ್ರತಿಯೊಂದು ಚಲನೆಯೊಂದಿಗೆ ನಮ್ಮ ಚರ್ಮ ಹೇಗೆ ಚಲಿಸುತ್ತಾ ಎಲ್ಲವನ್ನೂ ಗ್ರಹಿಸುತ್ತದೋ ಅದೇ ರೀತಿ ಗ್ರಹಿಸುವ ಸಶಕ್ತ ಸಾಧನವೇ ಈ ಸ್ಮಾರ್ಟ್ ಬ್ಯಾಂಡೇಜು.

ಆರೋಗ್ಯ ಪರೀಕ್ಷೆಗೆ ಬಂದಿದೆ ಸ್ಮಾರ್ಟ್ ಬ್ಯಾಂಡೇಜ್

ಅಮೃತೇಶ್ವರಿ ಬಿ.

ನಮ್ಮ ಯೋಚನೆಗಳು, ಭಾವನೆಗಳು, ಚಲನವಲನಗಳು, ಹಸಿವು, ನೋವು - ಹೀಗೆ ದೇಹದಲ್ಲಿ ನಡೆಯುವ ಎಲ್ಲ ಕ್ರಿಯೆಗಳನ್ನೂ ನಿಯಂತ್ರಿಸುವ ಮಿದುಳಿನ ಬಗ್ಗೆ ಪ್ರತಿಯೊಬ್ಬರಿಗೂ ಗೊತ್ತಿದೆ. ಈ 5G ಯುಗದಲ್ಲಿ ಸ್ಮಾರ್ಟ್ ವಾಚಿನ ಬಗ್ಗೆ ಯಾರಿಗೆ ಗೊತ್ತಿಲ್ಲ ಹೇಳಿ! ಇನ್ನು ಬ್ಯಾಂಡೇಜು? ನಾವೆಲ್ಲರೂ ಒಂದಲ್ಲ ಒಂದು ಸಾರಿ ಎಲ್ಲಿಯಾರೂ ಬಿದ್ದೋ ಕೊಯ್ದುಕೊಂಡೋ ಅಥವಾ ಅಪಘಾತಗಳಿಂದಲೋ ಬ್ಯಾಂಡೇಜು ಹಾಕಿಸಿಕೊಂಡಿಯೇ ಇರುತ್ತೇವೆ. ಅರೇ! ಮಿದುಳು, ಸ್ಮಾರ್ಟ್ ವಾಚು ಮತ್ತು ಬ್ಯಾಂಡೇಜು – ಇವುಗಳಿಗೆ ಎಲ್ಲಿಂದ ಹೇಗೆ ಸಂಬಂಧ ಎಂದು ಯೋಚಿಸುತ್ತಿದ್ದೀರಾ? ಇದೋ ಈ ಮೂರಕ್ಕೂ ಸಂಬಂಧವಿರುವುದು ಹೀಗೆ. ಚಿಕಾಗೋ ವಿಶ್ವವಿದ್ಯಾನಿಲಯದ ಪ್ರಿಟ್ಸ್ಕ (Pritzker) ಸ್ಕೂಲ್ ಆಫ್ ಮಾಲಿಕ್ಯುಲಾರ್ ಇಂಜಿನಿಯರಿಂಗ್‌ನ ಸಂಶೋಧಕರು ಬಾಗುವ, ಹಿಗ್ಗಿಸಬಹುದಾದ, ಕಂಪ್ಯೂಟರಿನಂತೆಯೂ, ನಮ್ಮ ಮಿದುಳಿನ ಹಾಗೆಯೂ ಕೆಲಸ ಮಾಡುವ ಚಿಪ್ ಒಂದನ್ನು ರೂಪಿಸಿದ್ದಾರೆ. ಆದರೆ ಅದರ ವಿನ್ಯಾಸ ಕಂಪ್ಯೂಟರ್ ಅಥವಾ ಸ್ಮಾರ್ಟ್ ವಾಚಿನಂತಾಗಲೀ ಅಥವಾ ಮಿದುಳಿನಂತಾಗಲೀ ಇಲ್ಲ. ಸ್ಮಾರ್ಟ್ ವಾಚಿನಂತೆಯೇ 'ಸ್ಮಾರ್ಟ್ ಬ್ಯಾಂಡೇಜು' ಅಷ್ಟೇ.



ಸ್ಮಾರ್ಟ್ ವಾಚುಗಳು ಅಥವಾ ಫೋನುಗಳು ನಮ್ಮ ದೇಹದಿಂದ ಕೊಂಚವಾದರೂ ಅಂತರದಲ್ಲಿರುತ್ತದೆ. ಆದ್ದರಿಂದ ಅವು ದಾಖಲಿಸುವ ಮಾಹಿತಿಗಳು ಅಷ್ಟೇನೂ ನಿಖರವಾಗಿಲ್ಲದಿರಬಹುದು. ಈ ಸಂಪರ್ಕ ದೋಷವನ್ನು ಸರಿಪಡಿಸಿ ನಮ್ಮ ದೇಹವನ್ನು ಅತ್ಯಂತ ಹತ್ತಿರದಿಂದ ನಿಖರವಾಗಿ ವೀಕ್ಷಿಸುವಂತಹ ಸಾಧನವನ್ನು ರೂಪಿಸುವ ಯೋಜನೆ ವಾಂಗ್ ಮತ್ತು ತಂಡದವರದಾಗಿತ್ತು. ಅದರ ಫಲವೇ ನಮ್ಮ ದೇಹದ ಪ್ರತಿಯೊಂದು ಚಲನೆಯೊಂದಿಗೆ ನಮ್ಮ ಚರ್ಮ ಹೇಗೆ ಚಲಿಸುತ್ತಾ ಎಲ್ಲವನ್ನೂ ಗ್ರಹಿಸುತ್ತದೋ ಅದೇ ರೀತಿ ಗ್ರಹಿಸುವ ಸಶಕ್ತ ಸಾಧನವೇ ಈ ಸ್ಮಾರ್ಟ್ ಬ್ಯಾಂಡೇಜು.

ನಮ್ಮ ಹೃದಯದ ಬಡಿತ, ರಕ್ತದೊತ್ತಡ, ನಮ್ಮ ರಕ್ತದಲ್ಲಿ ಎಷ್ಟು ಪ್ರಮಾಣದ ಆಮ್ಲಜನಕವಿದೆ, ಒಂದು ದಿನದಲ್ಲಿ ಎಷ್ಟು ಹೆಜ್ಜೆ ನಡೆದಿದ್ದೀವಿ – ಎಂಬೆಲ್ಲ ಮಾಹಿತಿಯನ್ನೂ ಸ್ಮಾರ್ಟ್ ವಾಚುಗಳು ಮತ್ತು ಸ್ಮಾರ್ಟ್ ಫೋನುಗಳು ಹೇಳುತ್ತವೆ. ಅದರಿಂದ ನಮ್ಮ ದೈಹಿಕ ಸದೃಢತೆ ಎಷ್ಟಿದೆ ಎಂಬ ಬಗ್ಗೆ ನಾವೇ ತಿಳಿದುಕೊಳ್ಳಬಹುದು. ಆದರೀಗ ಸ್ಮಾರ್ಟ್ ಬ್ಯಾಂಡೇಜುಗಳು ಆಸ್ಪತ್ರೆಯಲ್ಲಿರುವ ದೊಡ್ಡ ದೊಡ್ಡ ಯಂತ್ರಗಳು ಮಾಡುವ ಹಾಗೆ ನಮ್ಮ ದೇಹದ ಆರೋಗ್ಯ ತಪಾಸಣೆಯನ್ನೂ ಮಾಡುತ್ತವಂತೆ. ರಕ್ತದಲ್ಲಿರುವ ಸಕ್ಕರೆ ಹಾಗೂ ಆಮ್ಲಜನಕದ ಪ್ರಮಾಣ, ಚಯಾಪಚಯ ಕ್ರಿಯೆಯ ಮೂಲಕ ರಕ್ತಕ್ಕೆ ಸೇರುವ ಆಹಾರ ಅಥವಾ ಔಷಧೀಯ ಅಂಶಗಳನ್ನು ಕೂಡ ತಿಳಿಸುತ್ತವಂತೆ. ಸ್ಮಾರ್ಟ್ ವಾಚು ಹೊರಲಾರದಷ್ಟು ಭಾರವಿಲ್ಲದಿದ್ದರೂ ಮಲಗುವಾಗ ವಿಶ್ರಮಿಸುವಾಗ ತೆಗೆದಿಡಬೇಕೆನ್ನಿಸುತ್ತದೆ. ಆದರೆ ಸ್ಮಾರ್ಟ್ ಬ್ಯಾಂಡೇಜು ನಮ್ಮ ಚರ್ಮದಷ್ಟೇ ತೆಳುವಾಗಿರುವುದರಿಂದ ಧರಿಸಿಕೊಳ್ಳುವುದೂ ಸುಲಭ ಹಾಗೂ ನಮಗೆ ಏನನ್ನೋ ಹೊತ್ತಿರುವಂತೆಯೂ ಭಾಸವಾಗುವುದಿಲ್ಲ. ಎಷ್ಟು ಹೊತ್ತು ಬೇಕಾದರೂ ಧರಿಸಿಕೊಂಡರೂ ಆರಾಮಾಗಿರಬಹುದು. ನಮಗೆ ಅರಿವೇ ಇಲ್ಲದಂತೆ ಇವು ನಮ್ಮ ಆರೋಗ್ಯ ತಪಾಸಣಾ ಕಾರ್ಯದಲ್ಲಿ ತೊಡಗಿಕೊಂಡು ಕ್ಷಣಕ್ಷಣವೂ ಮಾಹಿತಿಯನ್ನು ದಾಖಲು ಮಾಡುತ್ತಿರುತ್ತವೆ.

ನಮ್ಮ ಮಿದುಳು ಹೇಗೆ ನಮ್ಮ ದೇಹಾರೋಗ್ಯದಲ್ಲಾಗುವ ವ್ಯತ್ಯಾಸಗಳನ್ನು ಏನಾದರೊಂದು ಲಕ್ಷಣಗಳ ಮುಖಾಂತರ ಸೂಚನೆ ಕೊಡುತ್ತದೋ, ಅಂತೆಯೇ ಇವೂ ಕಾರ್ಯ ನಿರ್ವಹಿಸಬೇಕು. ಹಾಗೆ ಆಗಬೇಕೆಂದರೆ ಆ ಸಾಧನವು ಸುಲಭವಾಗಿ ಬಾಗಬೇಕು, ಹಿಗ್ಗಬೇಕು. ಹೀಗೆ ಹಿಗ್ಗುವ, ಬಾಗುವಂತಹ ಪಾಲಿಮರ್ ವಸ್ತುಗಳು ಈ ಸಾಧನಗಳಿಗೆ ಸೂಕ್ತ ಎಂದು ವಾಂಗ್ ಮತ್ತು ತಂಡದವರು ಯೋಚಿಸಿದರು. ತಮ್ಮ ಯೋಚನೆಯಂತೆ ಪಾಲಿಮರ್ ಬಳಸಿ ಈ ಸಾಧನವನ್ನು ವಿನ್ಯಾಸ ಮಾಡಿ ಕೃತಕ ಬುದ್ಧಿಮತ್ತೆಯನ್ನು ಕಲಿಸಿ ಆರೋಗ್ಯ ತಪಾಸಣೆ ಮಾಡುತ್ತದೆಯೇ ಎಂದು ಪರೀಕ್ಷಿಸಿದ್ದಾರೆ. ಆಶ್ಚರ್ಯವೆಂಬಂತೆ, ಬ್ಯಾಂಡೇಜು ಕೇವಲ ಯಂತ್ರದಂತೆ ಕೆಲಸ ಮಾಡದೇ, ಮನುಷ್ಯನ ಒಂದು ಜೀವಂತ ಮಿದುಳಿನಂತೆ ಸಮಗ್ರವಾಗಿ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಿತಂತೆ. ಇದನ್ನು ವಾಂಗ್ ಮತ್ತು ತಂಡದವರು 'ನ್ಯೂರೋಮಾರ್ಫಿಕ್ ಕಂಪ್ಯೂಟಿಂಗ್ ಚಿಪ್' ಎಂದು ಕರೆದಿದ್ದಾರೆ.

ಈ ಚಿಪ್ ಹೇಗೆ ಕೆಲಸ ಮಾಡುತ್ತದೆ ಎಂದು ಪರೀಕ್ಷಿಸಲು ಮನುಷ್ಯಹೃದಯದ ಎಲೆಕ್ಟ್ರೋಕಾರ್ಡಿಯೋಗ್ರಾಂನ ದತ್ತಾಂಶವನ್ನು ವಿಶ್ಲೇಷಣೆ ಮಾಡಿ ನೋಡಿದ್ದಾರೆ. ಅವರು ಈ ಚಿಪ್‌ಗೆ ಎಲೆಕ್ಟ್ರೋಕಾರ್ಡಿಯೋಗ್ರಾಂನ ದತ್ತಾಂಶವನ್ನು ಆರೋಗ್ಯಕರವಾದದ್ದು ಹಾಗೂ ಅಸಹಜವಾದುದ್ದೆಂದು ಗುರುತಿಸುವುದನ್ನು ಕಲಿಸಿ, ನಂತರ ಹೊಸ ಎಲೆಕ್ಟ್ರೋಕಾರ್ಡಿಯೋಗ್ರಾಂನ ಮೇಲೆ ಪ್ರಯೋಗಿಸಿದ್ದಾರೆ. ಬ್ಯಾಂಡೇಜು ಬಾಗಿದ್ದಾಗಲೂ, ಉದ್ದುದ್ದ ಹಿಗ್ಗಿಸಿದಾಗಲೂ ಹೃದಯದ ಬಡಿತವನ್ನು ನಿಖರವಾಗಿ ವಿಶ್ಲೇಷಿಸಿತ್ತಂತೆ. ಕಾಯಿಲೆ ಎಂಥದ್ದು, ಎಷ್ಟು ತೀವ್ರವಾಗಿದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸುವ ಸಾಮರ್ಥ್ಯವನ್ನು ಪರೀಕ್ಷಿಸಲು ಇನ್ನಷ್ಟು ಸಂಶೋಧನೆಗಳು ಆಗಬೇಕಿದೆ. ಆದರೆ ಸದ್ಯದಲ್ಲಿ ಈ ಬ್ಯಾಂಡೇಜಿನಂತಹ ಚಿಪ್‌ಗಳು, ರೋಗಿಗಳಿಗೆ ಅಪಾಯ ಸಂಭವಿಸಬಹುದು ಎನ್ನುವುದನ್ನು ಅಂದಾಜಿಸಿ ಚಿಕಿತ್ಸೆಗೆ ಮುಂಜಾಗ್ರತೆ ತೆಗೆದುಕೊಳ್ಳುವಂತೆ ಎಚ್ಚರಿಸಬಲ್ಲವು ಎಂಬುದು ವಿಜ್ಞಾನಿಗಳ ಅಭಿಪ್ರಾಯ. ಇವರು ಟೈಪ್1 ಮಧುಮೇಹಿಗಳಿಗೆ ನೀಡುವ ಇನ್ಸುಲಿನ್ ಚಿಕಿತ್ಸೆಯ ಸಂದರ್ಭಗಳಲ್ಲಿ ಈಗಾಗಲೇ ಈ ಸಾಧನಗಳಿಂದ ಪಡೆದ ಮಾಹಿತಿಯನ್ನು ಪಡೆದು ಸಫಲರಾಗಿದ್ದಾರಂತೆ.



ಧರಿಸುವಂತಹ ತಂತ್ರಜ್ಞಾನಗಳು (Wearable Technology) ಮತ್ತು ಕೃತಕ ಬುದ್ಧಿಮತ್ತೆ ಹಾಗೂ ಯಂತ್ರಕಲಿಕೆಗಳ ಸಮಾಗಮದಿಂದ ಸಾಧ್ಯವಾಗಿರುವ ಈ ಸಶಕ್ತ ಸಾಧನವು ನಮ್ಮ ದೇಹದಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಆರೋಗ್ಯಸ್ಥಿತಿಯ ಮಾಹಿತಿಗಳನ್ನು ನಮಗೆ ಕೂತಲ್ಲಿಯೇ ತಿಳಿಸಬಲ್ಲುದೆಂದು ವಿಜ್ಞಾನಿ ಶಿಹೋಂಗ್ ವಾಂಗ್ ಹೇಳುತ್ತಾರೆ. ಇಂದು ಆರೋಗ್ಯ ತಪಾಸಣೆಗಾಗಿ ವೈದ್ಯರನ್ನು ನೋಡಲು ಮೊದಲೇ ಗೊತ್ತುಪಡಿಸಿಕೊಂಡೋ ಇಲ್ಲವೇ ನೇರವಾಗಿ ಆಸ್ಪತ್ರೆಗೇ ಹೋಗಿ, ಗಂಟೆಗಟ್ಟಲೆ ಸಾಲುಗಟ್ಟಿ ನಿಲ್ಲುವಂತಹ ಪರಿಸ್ಥಿತಿಯಿದೆ. ಆದರೆ ಯಾವ ಟೆಲಿಮೆಡಿಸಿನ್ನಿಗೂ ಕಡಿಮೆಯಿಲ್ಲದ ಇಂತಹ ತಂತ್ರಜ್ಞಾನಗಳ ಕೃಪೆಯಿಂದ ಭವಿಷ್ಯದಲ್ಲಿ ಕೂತಲ್ಲೇ ನಿಂತಲ್ಲೇ ನಿರಂತವಾಗಿ ನಮ್ಮ ಆರೋಗ್ಯ ತಪಾಸಣೆ ಯನ್ನು ನಾವೇ ಮಾಡಿಕೊಳ್ಳಬಹುದಂತೆ. ಅದುವೂ ರೋಗಲಕ್ಷಣಗಳು ಕಾಣಿಸಿಕೊಳ್ಳುವ ಮುಂಚೆಯೇ! ಈ ಕನಸನ್ನು ನಿಜವಾಗಿಸುವ, ಧರಿಸಿದ್ದರೂ ನಮ್ಮನ್ನು ಕಿಂಚಿತ್ತೂ ಬಾಧಿಸದ ಕಂಪ್ಯೂಟರ್ ಸಾಧನಗಳು ನಮ್ಮ ಬಳಕೆಗೆ ದೊರೆಯಲು ಕೇವಲ ಒಂದು ಹೆಜ್ಜೆಯಷ್ಟೇ ಬಾಕಿ ಎನ್ನುತ್ತಾರೆ, ವಾಂಗ್.

ಹಠಾತ್ತನೆ ಯಾರಾದರೂ ಅಸ್ವಸ್ಥರಾದಾಗ ರಕ್ತದೊತ್ತಡ ಎಷ್ಟಿದೆ ಎಂಬುದನ್ನು ಕ್ಷಣಮಾತ್ರದಲ್ಲಿ ನಿರಂತರವಾಗಿ ತಿಳಿಯಲು ಸಾಧ್ಯವಾದರೆ, ರಕ್ತದೊತ್ತಡವನ್ನು ಸರಿದೂಗಿಸಲು ಸೂಕ್ತ ಚಿಕಿತ್ಸೆಯನ್ನು ನೀಡುವುದು ಸುಲಭವಲ್ಲವೇ? ಇಂತಹ ತಂತ್ರಜ್ಞಾನಗಳು ಅಗ್ಗ ಹಾಗೂ ಸುಲಭವಾಗಿ ಬಳಸಬಹುದಾದರೆ ಎಲ್ಲರಿಗೂ ಎಷ್ಟು ಹಿತಕರ! ಹೀಗಾದಲ್ಲಿ ಇತ್ತೀಚೆಗೆ ಶಾಲೆಯಲ್ಲಿ ವಿದ್ಯಾರ್ಥಿನಿಯೊಬ್ಬಳು ಸಾವನ್ನಪ್ಪಿದ ಅಥವಾ ನಟ ಪುನೀತ್‌ಗೆ ಸಂಭವಿಸಿದಂತಹ ಎಷ್ಟೋ ಘಟನೆಗಳನ್ನು ತಡೆಯಬಹುದೇನೋ?

ಈ ಸಂಶೋಧನೆಯು ಮೊನ್ನೆ 'ಮ್ಯಾಟರ್' ಜರ್ನಲ್‌ನಲ್ಲಿ ವರದಿಯಾಗಿತ್ತು.





ವಿಜಯನಗರ ಜಿಲ್ಲೆಯ ತುಂಗಭದ್ರಾ ಜಲಾಶಯದಿಂದ ಮಂಗಳವಾರ ನದಿಗೆ ಒಂದೂವರೆ ಲಕ್ಷ ಕ್ಯುಸೆಕ್‌ಗೂ ಅಧಿಕ ನೀರು ಹರಿಸಿದ್ದರಿಂದ ಕಂಪ್ಲಿ–ಗಂಗಾವತಿ ಸೇತುವೆ ಮೇಲೆ ನೀರು ಹರಿಯುತ್ತಿದ್ದು, ಸಂಪರ್ಕ ಕಡಿತಗೊಂಡಿದೆ (ಎಡಚಿತ್ರ), ಹೊನ್ನಾಳಿಯಲ್ಲಿ ಬಾಲರಾಜ್ ಘಾಟ್‌ನ ಕೆಲ ಮನೆಗಳಿಗೆ ನೀರು ನುಗ್ಗಿದೆ

ಮಳೆ: ಹಲವೆಡೆ ಮನೆಗಳು ಕುಸಿತ • ಆನೆಗೊಂದಿ: ನವ ವೃಂದಾವನ ಗಡ್ಡೆ ಸಂಪರ್ಕ ಕಡಿತ

ಸಾವಿರಾರು ಎಕರೆ ಜಲಾವೃತ, ಅಪಾರ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಮಂಗಳವಾರ ಹಲವೆಡೆ ಮನೆಗಳ ಗೋಡೆಗಳು ಕುಸಿದು ಬಿದ್ದಿವೆ. ಸಾವಿರಾರು ಎಕರೆ ಜಲಾವೃತಗೊಂಡು, ಅಪಾರ ಹಾನಿಯಾಗಿದೆ.

ಗಂಗಾವತಿ–ಕಂಪ್ಲಿ ಸಂಪರ್ಕ ಕಲ್ಪಿಸುವ ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ.

‘ನೀರಿನ ಹರಿವು ಇಳಿಮುಖವಾಗುವವರೆಗೆ ಬೀದರ್, ಕಲಬುರಗಿ, ಮಂತ್ರಾಲಯ ಮತ್ತು ಹೈದರಾಬಾದ್ ಮಾರ್ಗದ ಬಸ್‌ಗಳು ಬುಕ್ಕಸಾಗರ ಸೇತುವೆ ಮಾರ್ಗದಿಂದ ಸಾಗಬೇಕು’ ಎಂದು ಸೂಚಿಸಲಾಗಿದೆ.

ನದಿಯ ಮಧ್ಯಭಾಗದಲ್ಲಿರುವ ಅಂಜನಾದ್ರಿ ಬೆಟ್ಟದ ಬಳಿ ಋಷಿಮುಖಿ ಪರ್ವತ, ಚಂದ್ರಮೌಳೇಶ್ವರ ದೇವಸ್ಥಾನ, ವಿರೂಪಾಪುರಗಡ್ಡೆಯಿಂದ ಹಂಪಿಗೆ ತೆರಳುವ ಮಾರ್ಗ, ಆನೆಗೊಂದಿ ಕೃಷ್ಣದೇವರಾಯ ಸಮಾಧಿ (64 ಸಾಲಿನ ಕಂಬಗಳ ದೇವಸ್ಥಾನ) ಸಂಪೂರ್ಣ ಜಲಾವೃತವಾಗಿವೆ.

ನದಿಪಾತ್ರದಲ್ಲಿರುವ ಭತ್ತ, ಕಬ್ಬು, ಬಾಳೆ ತೋಟಗಳು ಜಲಾವೃತವಾಗಿವೆ. ಹಲವು ಕಡೆ ಕಣಿವೆಗಳು ಕೊಚ್ಚಿ ಹೋಗಿವೆ.

ಕೊಡಗು ಜಿಲ್ಲೆಯಲ್ಲಿ ಮಳೆ ಕೊಂಚ ತಗ್ಗಿದ್ದರೂ, ಗಾಳಿಯ ಅಬ್ಬರ ಕಡಿಮೆಯಾಗಿಲ್ಲ.

ಮಾದಾಪುರ– ಮಡಿಕೇರಿ ರಸ್ತೆಯ ಇಗ್ಗೋಡ್ಲು ಬಳಿ ಮಣ್ಣು ಕುಸಿಯುತ್ತಿದೆ. ವಿರಾಜಪೇಟೆಯ ಚಿಕ್ಕಪೇಟೆ ಸಮೀಪ ಹಲವು ವಿದ್ಯುತ್ ಕಂಬಗಳು ಉರುಳಿ ತಾಲ್ಲೂಕಿನಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದೆ.

ಬಾಲಕಿಗಾಗಿ ಶೋಧ

ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ನಂದಿಕೂರು ಗ್ರಾಮದಲ್ಲಿ ಮನೆ ಕುಸಿದಿದೆ. ಕಾಲ್ತೋಡು ಗ್ರಾಮದ ಬಿಜಮಕ್ಕಿ ಬಳಿ ಸೋಮವಾರ ಕಾಲು ಸಂಕ ದಾಟುವಾಗ ಆಯ ತಪ್ಪಿ ಹಳ್ಳಕ್ಕೆ ಬಿದ್ದು ಕೊಚ್ಚಿ ಹೋಗಿರುವ ಬಾಲಕಿ ಸನ್ನಿಧಿಗಾಗಿ ತೀವ್ರ ಶೋಧ ನಡೆಯುತ್ತಿದೆ.

ಸೋಮವಾರಪೇಟೆ ತಾಲ್ಲೂಕಿನ ಚಿಕ್ಕತೋಳೂರು ಗ್ರಾಮದ ಕಾಡುಮನೆ ಸಮೀಪ ರಸ್ತೆಗೆ ಅಡ್ಡಲಾಗಿ ಮರ ಬಿದ್ದು, ಸಕಲೇಶಪುರಕ್ಕೆ ತೆರಳುವ ಮಾರ್ಗ ಬಂದ್ ಆಗಿದೆ. ಯಲಕನೂರು ಗ್ರಾಮದ ಪಾರ್ವತಿ ಅವರ ಮನೆ ಮೇಲೆ ಬೃಹತ್ ಗಾತ್ರದ ಮರ ಉರುಳಿ ಬಿದ್ದಿದೆ.

ಮಡಿಕೇರಿಯ ರೆಡ್‌ಕ್ರಾಸ್ ಶತಮಾನೋತ್ಸವ ಭವನದಲ್ಲಿರುವ ಕಾಳಜಿ ಕೇಂದ್ರದಲ್ಲಿ ಜಾದೂಗಾರ ವಿಕ್ರಂಶೆಟ್ಟಿ ಜಾದೂ ಪ್ರದರ್ಶಿಸಿ ಮಕ್ಕಳು ಹಾಗೂ ಹಿರಿಯರನ್ನು ರಂಜಿಸಿದರು.

ಚಿಕ್ಕಮಗಳೂರು ತಾಲ್ಲೂಕಿನ ಬೆರಣಗೊಡಿನಲ್ಲಿ ಗುಡ್ಡದ ಮಣ್ಣು ಕುಸಿದಿದೆ. ಈ ಪ್ರದೇಶದಲ್ಲಿನ ಕಾಫಿ, ಅಡಿಕೆ ಗಿಡಗಳು ಹಾನಿಯಾಗಿವೆ. ಆಲ್ದೂರು ಸಮೀಪದ ಹಳವಳ್ಳಿಯಲ್ಲಿ ಮನೆ ಕುಸಿದಿದೆ. ಕಳಸ ತಾಲ್ಲೂಕಿನ ಮುಂಡುಗದಮನೆ ಪ್ರದೇಶದಲ್ಲಿ ಕಾಲುಸಂಕ ಹಾಳಾಗಿದೆ.

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಹಲುವಾಗಲು-ಗರ್ಭಗುಡಿ ಸಂಪರ್ಕಿಸುವ ಸೇತುವೆ, ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲ್ಲೂಕಿನ ಕಂಪ್ಲಿ–ಗಂಗಾವತಿ, ಕಂಪ್ಲಿ–ಸಿರುಗುಪ್ಪ ಸೇತುವೆ ಮುಳುಗಿರುವುದರಿಂದ ಸಂಪರ್ಕ ಕಡಿದು ಹೋಗಿದೆ.

ಹರಪನಹಳ್ಳಿ, ಕಂಪ್ಲಿಯಲ್ಲಿ ಭತ್ತ, ಮೆಕ್ಕೆಜೋಳ, ಕಬ್ಬು, ಬಾಳೆ ಗದ್ದೆಗಳಿಗೆ ನೀರು ನುಗ್ಗಿದೆ. ಸಂಡೂರು ತಾಲ್ಲೂಕಿನ ಚೋರನೂರು ಗ್ರಾಮದಲ್ಲಿ ಮನೆ ಗೋಡೆ ಕುಸಿದು ಬಿದ್ದಿದೆ.

ತುಂಗಭದ್ರಾ ಜಲಾಶಯಕ್ಕೆ ಪ್ರತಿ ಗಂಟೆಗೆ 1.36 ಲಕ್ಷ ಕ್ಯುಸೆಕ್ ನೀರು ಹರಿದು ಬರುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿ ಮಳೆ ತುಸು ಬಿಡುವು ನೀಡಿದರೂ ಇಲ್ಲಿನ ಕಾಮತ್ ಗಲ್ಲಿಯಲ್ಲಿ ಮತ್ತೊಂದು ಮನೆ ಕುಸಿದಿದೆ. ಪಾಟೀಲ ಗಲ್ಲಿಯ 20 ಮನೆಗಳಿಗೆ ಸೋಮವಾರ ರಾತ್ರಿ ನುಗ್ಗಿದ ನೀರು ಮಂಗಳವಾರವೂ ಹಾಗೇ ಇತ್ತು. ಕಾಳಜಿ ಕೇಂದ್ರದಲ್ಲಿ 15 ಜನ ಆಶ್ರಯ ಪಡೆದಿದ್ದಾರೆ.

ಕೃಷ್ಣಾ ಹಾಗೂ ಅದರ ಉಪನದಿಗಳಲ್ಲಿ ನೀರಿನ ಹರಿವು ತಗ್ಗಿಲ್ಲ. ಇದರಿಂದ ಚಿಕ್ಕೋಡಿ, ನಿಪ್ಪಾಣಿ, ಮೂಡಲಗಿ, ಗೋಕಾಕ ತಾಲ್ಲೂಕಿನ ಆರು ಕಿರು ಸೇತುವೆಗಳು ಈಗಾಗಲೇ ಮುಳುಗಿವೆ.

ಗದಗ ಜಿಲ್ಲೆಯಲ್ಲಿ ಅತಿಯಾದ ಮಳೆಯಿಂದಾಗಿ ಈವರೆಗೆ ಒಟ್ಟು 93 ಸಾವಿರ ಹೆಕ್ಟೇರ್ ಕೃಷಿ ಬೆಳೆ ಹಾನಿಗೊಳಗಾಗಿದೆ.

‘ಕಂದಾಯ ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ಜಿಲ್ಲೆಯಲ್ಲಿ ಸಮೀಕ್ಷಾ ಕಾರ್ಯವನ್ನು ನಿಖರವಾಗಿ ಕೈಗೊಳ್ಳಬೇಕು. ಬೆಳೆ ಹಾನಿಯಿಂದ ತೊಂದರೆಗೆ ಒಳಗಾಗಿರುವ ಅರ್ಹ ರೈತರಿಗೆ ಸರ್ಕಾರದ ನಿಯಮಾನುಸಾರ ತುರ್ತಾಗಿ ಪರಿಹಾರ ತಲುಪಿಸಬೇಕು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ. ಪಾಟೀಲ ಸೂಚಿಸಿದ್ದಾರೆ.

ಶಿವಮೊಗ್ಗ ನಗರದಲ್ಲಿ ಐದು ಮನೆಗಳಿಗೆ ಹಾನಿಯಾಗಿದೆ. ಲಿಂಗನಮಕ್ಕಿ ಹೊರತುಪಡಿಸಿ ಜಿಲ್ಲೆಯ ಜಲಾಶಯಗಳು ಬಹುತೇಕ ಭರ್ತಿಯಾಗಿವೆ. ಭದ್ರಾವತಿ ಹಾಗೂ ಶಿಕಾರಿಪುರದ ಮೂರು ಕಡೆ ತೆರೆದಿರುವ ಕಾಳಜಿ ಕೇಂದ್ರದಲ್ಲಿ 316 ಸಂತ್ರಸ್ತರು ಆಶ್ರಯ ಪಡೆದಿದ್ದಾರೆ. ತುಂಗಭದ್ರಾ ನದಿ ಪಾತ್ರದಲ್ಲಿ ಪ್ರವಾಹಭೀತಿ ಎದುರಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	122.30	90,261	96,227
ಹಾರಂಗಿ	2,859	2,854.25	2,580	10,000
ಕಬಿನಿ	2284.00	2282.36	39,199	43,000
ಹೇಮಾವತಿ	2,922	2921.65	39,991	32,660
ಲಿಂಗನಮಕ್ಕಿ	1,819	1,806	77,911	2,604
ಸೂಪಾ (ಮೀ)	564	544.20	29,384	-
ಮಾಣಿ	594	586	8,240	-
ತುಂಗಭದ್ರಾ	1,633	1,632	1,36,915	1,58,921
ಮಲಪ್ರಭಾ	2079.5	2,072.40	13,523	294
ಘಟಪ್ರಭಾ	2175	2,165.167	24,806	162
ಭದ್ರಾ	186	183	51,265	51,265
ಆಲಮಟ್ಟಿ (ಮೀ)	519.6	519.27	89,722	1,25,000
ನಾರಾಯಣಪುರ (ಮೀ)	492.25	491.62	135,000	142,648

* ನೆಲಮಟ್ಟದಿಂದ

ಮಳೆ ಸೆಂ.ಮೀ ಗಳಲ್ಲಿ

ಶಿವಮೊಗ್ಗ	
ಚಕ್ರಾ	24.3
ಉಡುಪಿ	
ಕಾಲ್ತೋಡಿ (ಬೈಂದೂರು ತಾ.)	18.3
ಚಿಕ್ಕಮಗಳೂರು	
ಕೊಟ್ಟಿಗೆಹಾರ	19.3
ಹೊಸಕೆರೆ	14.9
ಕಮ್ಮರಡಿ	11.8
ಕೆರೆಕಟ್ಟೆಯಲ್ಲಿ	10.2
ಕೊಡಗು	
ಟಿ.ಶೆಟ್ಟಿಗೆರೆ	13
ಬಿ.ಶೆಟ್ಟಿಗೆರೆ	12

10 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಬೆಂಗಳೂರು: ಕರಾವಳಿಯ ಬಹುತೇಕ ಭಾಗಗಳಲ್ಲಿ ಹಾಗೂ ಒಳನಾಡಿನ ಅಲ್ಲಲ್ಲಿ ಮುಂದಿನ ಎರಡು ದಿನ ಗುಡುಗು ಸಹಿತ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಬೆಳಗಾವಿ, ಉತ್ತರ ಕನ್ನಡ, ಧಾರವಾಡ, ಹಾವೇರಿ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಬುಧವಾರ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ

ಕರಾವಳಿ ತೀರದಲ್ಲಿ ಬಿರುಗಾಳಿಯ ವೇಗವು ಗಂಟೆಗೆ 40 ರಿಂದ 50 ಕಿ.ಮೀ ಇರಲಿದ್ದು, 60 ಕಿ.ಮೀ ತನಕ ತಲುಪುವ ಸಾಧ್ಯತೆಯಿದೆ ಎಂದೂ ಹವಾಮಾನ ಇಲಾಖೆ ಸೂಚನೆ ನೀಡಿದೆ.

ಹಳ್ಳದಲ್ಲಿ ಕೊಚ್ಚಿಹೋಗುತ್ತಿದ್ದ ಚಾಲಕನ ರಕ್ಷಣೆ

ಚಿಕ್ಕಮಗಳೂರು: ಜಿಲ್ಲೆಯ ಸಖರಾಯಪಟ್ಟಣದಲ್ಲಿ ಹಳ್ಳದಲ್ಲಿ ಕೊಚ್ಚಿಹೋಗುತ್ತಿದ್ದ ಕಾರು ಮತ್ತು ಚಾಲಕನನ್ನು ಜೆಸಿಬಿ ಯಂತ್ರದ ಮೂಲಕ ರಕ್ಷಿಸಲಾಗಿದೆ.

ಹಳ್ಳ ತುಂಬಿ ಹರಿದು ಬ್ರಿಡ್ಜ್ ಬಳಿಯೂ ನೀರು ರಭಸದಿಂದ ಹರಿಯುತ್ತಿತ್ತು. ಸಖರಾಯ ಪಟ್ಟಣಕ್ಕೆ ಹೋಗಲು ಕಾರಿನಲ್ಲಿ ಪಿಳ್ಳೇನಹಳ್ಳಿಯ ಮಾರ್ಗವಾಗಿ ಬಂದ ಕೇತುಮಾರನಹಳ್ಳಿಯ ಗಿರೀಶ್ ಹರಿಯುತ್ತಿದ್ದ ನೀರಲ್ಲೆ ಕಾರು ಚಲಾಯಿಸಿದಾಗ ಸೆಳೆತಕ್ಕೆ ಸಿಕ್ಕಿ ಕಾರು ಮುಳುಗಲಾರಂಭಿಸಿತ್ತು. ಆಗ ಗಿರೀಶ್ ಮೊಬೈಲ್ ಫೋನಿನಿಂದ ತಮ್ಮ ಸ್ನೇಹಿತರಿಗೆ ಕರೆ ಮಾಡಿದರು. ಕೂಡಲೇ ಸ್ಥಳಕ್ಕೆ ಜೆಸಿಬಿ ಯಂತ್ರದೊಡನೆ ಬಂದ ಸ್ನೇಹಿತರು, ಜೆಸಿಬಿ ಯಂತ್ರದ ಸಹಾಯದಿಂದ ಕಾರನ್ನು ದಡಕ್ಕೆ ಎಳೆತಂದಿದ್ದಾರೆ.

ಆರೆಸ್ಸೆಸ್, ಬಜರಂಗದಳ, ವಿಶ್ವ ಹಿಂದೂ ಪರಿಷತ್ ಧೋರಣೆ ಕುರಿತು ಸಿದ್ದರಾಮಯ್ಯ ಪ್ರಶ್ನೆ

‘ರಾಷ್ಟ್ರಧ್ವಜ ವಿರೋಧಿಸುವವರಲ್ಲಿ ದೇಶಭಕ್ತಿ ಸಾಧ್ಯವೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರೆಸ್ಸೆಸ್, ಬಜರಂಗ ದಳ, ವಿಎಚ್‌ಪಿ ಸಂಘಟನೆಗಳು ಸಂಘ ಪರಿವಾರದ ಬೇರೆ ಬೇರೆ ಮುಖಗಳು. ರಾಷ್ಟ್ರಧ್ವಜವನ್ನು ವಿರೋಧಿಸುವ ಇವರಲ್ಲಿ ದೇಶಭಕ್ತಿ ಸಾಧ್ಯವೇ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಕ್ವಿಟ್ ಇಂಡಿಯಾ ಚಳವಳಿ ದಿನದ ಸ್ಮರಣೆಯಾಗಿ ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸಂಘ ಪರಿವಾರದವರು ಈಗ ಹರ್ ಘರ್ ತಿರಂಗಾ ಎಂಬ ನಾಟಕ ಆರಂಭಿಸಿದ್ದಾರೆ. ನಕಲಿ ದೇಶಪ್ರೇಮಿಗಳ ಬಾಯಿ ಮುಚ್ಚಿಸುವ ಕೆಲಸವನ್ನು ನಾವು ಮಾಡಬೇಕು’ ಎಂದು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

‘ಇತ್ತೀಚೆಗೆ ಇಬ್ಬರು ಯುವಕರು ಗಲಾಟೆ ಮಾಡಿದ ಬಳಿಕ ನಾಗಪುರದ ಆರೆಸ್ಸೆಸ್ ಕಚೇರಿ ಮೇಲೆ ತ್ರಿವರ್ಣ ಧ್ವಜ ಹಾರಿಸಲು ಅವರು ಆರಂಭಿಸಿದ್ದಾರೆ. ‘ದೇಶಕ್ಕಾಗಿ ಆರೆಸ್ಸೆಸ್‌ನ ಯಾರಾದರೂ ಪ್ರಾಣಾರ್ಪಣೆ ಮಾಡಿದ್ದಾರೆಯೇ? ದೇಶಭಕ್ತಿಯಿಂದ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದವರು ಕಾಂಗ್ರೆಸ್ಸಿನವರು. ಪ್ರಧಾನಿ ನರೇಂದ್ರ ಮೋದಿ ದೊಡ್ಡ ನಾಟಕಕಾರ’ ಎಂದು ಟೀಕಿಸಿದರು.

‘ಸ್ವಾತಂತ್ರ್ಯದ 75 ವರ್ಷದ ಹಿನ್ನೆಲೆಯಲ್ಲಿ ದೇಶದಾದ್ಯಂತ ಪಕ್ಷದಿಂದ ಪಾದಯಾತ್ರೆ ಏರ್ಪಡಿಸಲಾಗಿದೆ. ರಾಜ್ಯದಲ್ಲಿ ಇದೇ 15ರಂದು ಪಾದಯಾತ್ರೆ ನಡೆಯಲಿದೆ. ಕನಿಷ್ಠ 1 ಲಕ್ಷ ಜನ ಭಾಗವಹಿಸಲು ಅಗತ್ಯವಾದ ಸಿದ್ಧತೆ ಮಾಡಲಾಗುತ್ತಿದೆ. ರೈಲು ನಿಲ್ದಾಣದ ಬಳಿಯ ಸಂಗೊಳ್ಳಿ ರಾಯಣ್ಣ ವೃತ್ತದಿಂದ ನ್ಯಾಷನಲ್ ಕಾಲೇಜು ಮೈದಾನದವರೆಗೆ ಪಾದಯಾತ್ರೆ ನಡೆಯಲಿದೆ’ ಎಂದರು.

‘ನಮ್ಮ ನಾಯಕರು ನಮಗೆ ಸ್ವಾತಂತ್ರ್ಯ, ರಾಷ್ಟ್ರಧ್ವಜ, ರಾಷ್ಟ್ರಗೀತೆ, ಪ್ರಜಾಪ್ರಭುತ್ವ, ಸಂವಿಧಾನ ತಂದುಕೊಟ್ಟಿದ್ದರು. ಇದನ್ನು ಬದಲಿಸಲು ಬಿಜೆಪಿ ಸರ್ಕಾರ ಪ್ರಯತ್ನಿಸುತ್ತಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

‘ಬಿಜೆಪಿಯವರು ರಾಷ್ಟ್ರಧ್ವಜವನ್ನು ಮಾರಾಟಕ್ಕೆ ಇಟ್ಟು ಸ್ವಾತಂತ್ರ್ಯ ಹೋರಾಟಗಾರರಿಗೆ ಅಪಮಾನ ಮಾಡುತ್ತಿದ್ದಾರೆ. ನಾವು 1.5 ಲಕ್ಷ ರಾಷ್ಟ್ರಧ್ವಜ, ಟೋಪಿ, ಟಿ ಶರ್ಟ್‌ಗಳನ್ನು ಉಚಿತವಾಗಿ ನೀಡುತ್ತಿದ್ದೇವೆ’ ಎಂದು ಹೇಳಿದರು.



ಕ್ವಿಟ್ ಇಂಡಿಯಾ ಚಳವಳಿ ದಿನದ ಸ್ಮರಣೆಯಾಗಿ ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಹಾತ್ಮಾ ಗಾಂಧಿ ಅವರ ಭಾವಚಿತ್ರಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪುಷ್ಪ ನಮನ ಸಲ್ಲಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕ ಕೆ.ಜೆ. ಜಾರ್ಜ್ ಇದ್ದರು.

ಸೆ.7ರಿಂದ ‘ಭಾರತ ಒಗ್ಗೂಡಿಸಿ ಯಾತ್ರೆ’

ನವದೆಹಲಿ: ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ‘ಭಾರತ್ ಜೋಡೋ ಯಾತ್ರೆ’ಯನ್ನು (ಭಾರತ ಒಗ್ಗೂಡಿಸಿ ಯಾತ್ರೆ) ಸೆಪ್ಟೆಂಬರ್ 7ರಂದು ಪ್ರಾರಂಭಿಸಲು ಕಾಂಗ್ರೆಸ್ ಪಕ್ಷ ತೀರ್ಮಾನಿಸಿದೆ.

ರಾಜಸ್ಥಾನದ ಉದಯಪುರದಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಚಿಂತನ ಶಿಬಿರದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಯಾತ್ರೆ ನಡೆಸಲು ನಿರ್ಧರಿಸಲಾಗಿತ್ತು. ಅ. 2ರಂದು ಯಾತ್ರೆಗೆ ಚಾಲನೆ ನೀಡಲಾಗುವುದು ಎಂದು ಪ್ರಕಟಿಸಲಾಗಿತ್ತು. ಅದಕ್ಕೆ ಮೊದಲೇ ಪಾದಯಾತ್ರೆಗೆ ಚಾಲನೆ ನೀಡಬೇಕು ಎಂದು ಹಲವು ಮುಖಂಡರು ಒತ್ತಾಯಿಸಿದ್ದರು.

ಕರ್ನಾಟಕ ಸೇರಿ 12 ರಾಜ್ಯಗಳು ಹಾಗೂ ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ 150 ದಿನ 3,500 ಕಿ.ಮೀ. ಪಾದಯಾತ್ರೆ ನಡೆಯಲಿದೆ. ಕರ್ನಾಟಕದಲ್ಲಿ 511 ಕಿ.ಮೀ. ಯಾತ್ರೆಯನ್ನು 21 ದಿನಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದರು.

‘ಭಾರತದ ಇತಿಹಾಸದಲ್ಲೇ ಇದೊಂದು ಬಹುದೊಡ್ಡ ರಾಜಕೀಯ ಯಾತ್ರೆ ಆಗಲಿದೆ. ಕಾಂಗ್ರೆಸ್ ಮಟ್ಟಿಗೆ ಇದೊಂದು ದೊಡ್ಡ ಪ್ರಯೋಗ. ಕಾಂಗ್ರೆಸ್ ಪಕ್ಷದ ಮೊದಲ ಬಾರಿಗೆ ಬಹು ರಾಜ್ಯಗಳ ಯಾತ್ರೆ ನಡೆಸುತ್ತಿದೆ’ ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದರು.

ಜೆಜೆಎಂ ಮೊದಲ ಹಂತದ ಕಾಮಗಾರಿಗೆ ಸೆ.15ರ ಗಡುವು

ಬೆಂಗಳೂರು: ‘ಜಲಜೀವನ ಮಿಷನ್ (ಜೆಜೆಎಂ) ಯೋಜನೆಯ ಮೊದಲನೇ ಹಂತದಲ್ಲಿ ಕೈಗೆತ್ತಿಕೊಂಡಿರುವ ಎಲ್ಲ ಕಾಮಗಾರಿಗಳನ್ನು ಸೆಪ್ಟೆಂಬರ್ 15 ರೊಳಗೆ ಪೂರ್ಣಗೊಳಿಸಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನ ಕುರಿತು ವಿಡಿಯೊ ಕಾನ್ಫರೆನ್ಸ್ ಮೂಲಕ ಮಂಗಳವಾರ ಪ್ರಗತಿ ಪರಿಶೀಲಿಸಿದ ಅವರು, ‘ಜೆಜೆಎಂ ಅಡಿಯಲ್ಲಿ ಕೇವಲ ಕೊಳವೆಮಾರ್ಗ ಅಳವಡಿಸಿದರೆ ಸಾಲದು. ಪ್ರತಿಮನೆಗೂ ನೀರಿನ ಪೂರೈಕೆ ಆಗಬೇಕು. ವಾರದಲ್ಲಿ ಮೂರು ದಿನ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಬೇಕು’ ಎಂದರು.

ಆಗಸ್ಟ್ 8ರವರೆಗೆ 21.63 ಲಕ್ಷ ಮನೆಗಳಿಗೆ ನಲ್ಲಿ ಮೂಲಕ ನೀರಿನ ಸಂಪರ್ಕ ಕಲ್ಪಿಸುವ ಗುರಿ ಇತ್ತು. 21.81 ಲಕ್ಷ ಮನೆಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ಎರಡನೇ ಹಂತದ ಕಾಮಗಾರಿಗಳಿಗೆ ಈ ತಿಂಗಳ ಅಂತ್ಯದೊಳಗೆ ಚಾಲನೆ ನೀಡಬೇಕು ಎಂದು ಹೇಳಿದರು.

ಕೊಳಚೆ ನೀರು ನಿರ್ವಹಣೆ: ರಾಜ್ಯದ ಎಲ್ಲ ಗ್ರಾಮಗಳಲ್ಲೂ ಕೊಳಚೆ ನೀರು ನಿರ್ವಹಣೆಗೆ ಸ್ವಚ್ಛ ಭಾರತ ಯೋಜನೆಯಡಿ ಕಾಮಗಾರಿಗಳನ್ನು ತಕ್ಷಣವೇ ಆರಂಭಿಸಬೇಕು ಎಂದು ಸೂಚಿಸಿದರು.

‘28,000 ಹಳ್ಳಿಗಳಲ್ಲಿ ಕೊಳಚೆ ನೀರು ನಿರ್ವಹಣೆಗೆ ಕಾಮಗಾರಿ ಆರಂಭಿಸಿದ್ದು, 19,000 ಹಳ್ಳಿಗಳಿಗೆ ಸಂಬಂಧಿಸಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗಿದೆ’ ಎಂದು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಮಾಹಿತಿ ನೀಡಿದರು.

ಉದ್ಯೋಗ ಖಾತರಿ ಯೋಜನೆಯಡಿ 16 ಕೋಟಿ ಮಾನವ ದಿನಗಳ ಕೆಲಸ ಸೃಜನೆಗೆ ಎದುರಾಗಿ 16.38 ಕೋಟಿ ಮಾನವ ದಿನಗಳ ಕೆಲಸ ನಡೆದಿದೆ. ಕಳೆದ ವರ್ಷ ಆರಂಭಿಸಿದ್ದ 10 ಲಕ್ಷ ಕಾಮಗಾರಿಗಳನ್ನು ಸೆಪ್ಟೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಹಮ್ಮಿಕೊಂಡಿರುವ ಅಮೃತ ಗ್ರಾಮ ಪಂಚಾಯಿತಿ, ಅಮೃತ ಸರೋವರ ಮತ್ತಿತರ ಯೋಜನೆಗಳ ಕಾಮಗಾರಿಗಳನ್ನು ತ್ವರಿತವಾಗಿ ಆರಂಭಿಸಬೇಕು ಎಂದು ಹೇಳಿದರು.

ಅತಿವೃಷ್ಟಿಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಸ್ತಿಗಳು, ಗ್ರಾಮೀಣ ರಸ್ತೆ, ಸೇತುವೆಗಳಿಗೆ ಆಗಿರುವ ಹಾನಿ ಕುರಿತು ತುರ್ತಾಗಿ ವರದಿ ಪಡೆಯಬೇಕು. ದುರಸ್ತಿ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

‘ಈಗಿನ ಕಾಂಗ್ರೆಸ್‌ನಿಂದ ಸ್ವಾತಂತ್ರ್ಯದ ಮಾರಣಹೋಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಾಂಧೀಜಿ ನೇತೃತ್ವದ ಕಾಂಗ್ರೆಸ್ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿತ್ತು. ಈಗ ಕಾಂಗ್ರೆಸ್‌ನಿಂದ ಸ್ವಾತಂತ್ರ್ಯದ ಮಾರಣಹೋಮ ನಡೆಯುತ್ತಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

‘ಕಾಂಗ್ರೆಸ್ ನಡೆಸಿದ ಸ್ವಾತಂತ್ರ್ಯದ ಹೋರಾಟದ ಫಲವಾಗಿ ಕುಮಾರಸ್ವಾಮಿ ಮುಖ್ಯಮಂತ್ರಿ ಹುದ್ದೆಗೇರಿದರು’ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿ ಅವರು ಸರಣಿ ಟ್ವೀಟ್ ಮಾಡಿದ್ದಾರೆ.

‘1947ರ ಹಿಂದಿನ ಕಾಂಗ್ರೆಸ್ ಪಕ್ಷವೇ ಬೇರೆ, ಈಗಿನ ಕಾಂಗ್ರೆಸ್ ಬೇರೆ. ‘ರಾಷ್ಟ್ರಪಿತರು ತಂದುಕೊಟ್ಟ ಸ್ವಾತಂತ್ರ್ಯ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ನೀಡಿದ ಸಂವಿಧಾನದಿಂದ ಮುಖ್ಯಮಂತ್ರಿ ಆಗಿದ್ದೆ. ಇದರಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರ ಶೂನ್ಯ. ಪಂಡಿತ್ ನೆಹರೂ, ಲಾಲ್ ಬಹದ್ದೂರ್ ಶಾಸ್ತ್ರಿಯವರ ಕುರಿತು ನಾನು ಹಗುರವಾಗಿ ಮಾತನಾಡುವುದಿಲ್ಲ. ಆ ನಂತರ ಹಾದಿತಪ್ಪಿದ ಕಾಂಗ್ರೆಸ್ ಪಕ್ಷ ಹೇಗೆಲ್ಲಾ ಜನರ ಸ್ವಾತಂತ್ರ್ಯ ಹರಣ ಮಾಡಿತು ಎನ್ನುವ ಇತಿಹಾಸ ಓದಿದರೆ ಶಿವಕುಮಾರ್ ಅವರಿಗೆ ಸತ್ಯ ತಿಳಿಯಲಿದೆ’ ಎಂದರು.

‘ಕಾಂಗ್ರೆಸ್ ಕೋಳಿ ಕೂಗಿದರಷ್ಟೇ ದೇಶದಲ್ಲಿ ಬೆಳಕು ಹರಿಯುತ್ತದೆ ಎನ್ನುವ ಕಾಲ ಹೋಯಿತು. ಪಕ್ಷದಲ್ಲಿ ನಿಮ್ಮ ಸ್ವಾತಂತ್ರ್ಯ ಹರಣ ಮಾಡುತ್ತಿರುವವರ ಕಡೆ ಗಮನಹರಿಸಿ. ಈಗ ನಡೆಸುತ್ತಿರುವ ಸ್ವಾತಂತ್ರ್ಯದ ನಡಿಗೆ ಯಾರ ಸ್ವಾತಂತ್ರ್ಯಕ್ಕೆ ಎಂದು ತಿಳಿಸಿ’ ಎಂದಿದ್ದಾರೆ.

‘ಬಿಸಿಎಂ ಹಾಸ್ಟೆಲ್‌ಗಳಲ್ಲಿ ಶೇ 25ರಷ್ಟು ಹೆಚ್ಚುವರಿ ಸ್ಥಾನ’

ಹರಪನಹಳ್ಳಿ: ‘ಬಿಸಿಎಂ ಹಾಸ್ಟೆಲ್‌ಗಳಲ್ಲಿ ಹೆಚ್ಚುವರಿ ಶೇ 25ರಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವ ಕುರಿತು ಎರಡು ದಿನದಲ್ಲಿ ಆದೇಶ ಹೊರಡಿಸಲಾಗುವುದು’ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘1.25 ಲಕ್ಷ ವಿದ್ಯಾರ್ಥಿಗಳು ‘ವಿದ್ಯಾಸಿರಿ’ ಯೋಜನೆ ಲಾಭ ಪಡೆಯುತ್ತಿದ್ದಾರೆ. ಆ ಪೈಕಿ ಸ್ಥಳಾವಕಾಶ ಲಭ್ಯವಿರುವ ಕಡೆಗೆ 21 ಸಾವಿರ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳಲ್ಲಿ ಪ್ರವೇಶ ಕೊಡಲಾಗುವುದು’ ಎಂದು ತಿಳಿಸಿದರು.

ಕನಕದಾಸರ ಹೆಸರಿನಲ್ಲಿ 50 ಹಾಸ್ಟೆಲ್, ಡಾ.ಬಿ.ಆರ್.ಅಂಬೇಡ್ಕರ್ ಹೆಸರಿನಲ್ಲಿ 100 ಹಾಸ್ಟೆಲ್, ದೀನ ದಯಾಳ್ ಉಪಾಧ್ಯಾಯ ಹೆಸರಿನಲ್ಲಿ ಬೆಳಗಾವಿ, ಧಾರವಾಡ, ಶಿವಮೊಗ್ಗ, ಮೈಸೂರು ಮತ್ತು ಕಲಬುರಗಿಯಲ್ಲಿ ತಲಾ ಒಂದು ಸಾವಿರ ವಿದ್ಯಾರ್ಥಿಗಳಿಗೆ ‘ಸಾಮರ್ಥ್ಯ’ ವಿದ್ಯಾರ್ಥಿ ನಿಲಯ ಆರಂಭಿಸಲಾಗುವುದು ಎಂದು ವಿವರಿಸಿದರು.

‘ಹಾಸ್ಟೆಲ್ ಪ್ರವೇಶಕ್ಕಾಗಿ ಆಯ್ಕೆಗೆ ಕೌನ್ಸೆಲಿಂಗ್ ಮಾಡಲಾಗಿದೆ. ಇದರಿಂದ ಯಾವುದೇ ಸಮಸ್ಯೆ ಉಂಟಾಗಿಲ್ಲ’ ಎಂದರು.

ಬಿಹಾರ ರಾಜಕಾರಣ: 9 ವರ್ಷಗಳಲ್ಲಿ ಮೂರು ಬಾರಿ ಮೈತ್ರಿ ನಿಲುವು ಬದಲಿಸಿದ ಜೆಡಿಯು ಮುಖ್ಯಸ್ಥ

ನಿಷ್ಠೆ ಬದಲಾವಣೆಯ ನಿಷ್ಣಾತ ನಿತೀಶ್


ನಿತೀಶ್ ಕುಮಾರ್

ಕೋಲ್ಕತ್ತ (ಪಿಟಿಐ): ಮೈತ್ರಿ ಬದಲಾವಣೆಯಲ್ಲಿ ತಾವೊಬ್ಬ ನಿಷ್ಣಾತ ಎಂಬುದನ್ನು ನಿತೀಶ್ ಕುಮಾರ್ ಅವರು ಮತ್ತೆ ಮತ್ತೆ ಸಾಬೀತುಪಡಿಸಿದ್ದಾರೆ.

ಈಗಿನ ಬೆಳವಣಿಗೆಯು, 2017ರ ವಿದ್ಯಮಾನದ ಪುನರಾವರ್ತನೆ. ಆಗ ಎನ್‌ಡಿಎ ಸೇರ್ಪಡೆಯಾಗಲು ಆರ್‌ಜೆಡಿ ನೇತೃತ್ವದ 'ಮಹಾಘಟಬಂಧನ್'ನಿಂದ ನಿತೀಶ್ ಹೊರಬಂದಿದ್ದರು. ಮಹಾರಾಷ್ಟ್ರದಲ್ಲಿ ಶಿವಸೇನಾ–ಕಾಂಗ್ರೆಸ್–ಎನ್‌ಸಿಪಿ ನೇತೃತ್ವದ ಸರ್ಕಾರವನ್ನು ಕಿತ್ತೊಗೆದು ಬಿಜೆಪಿ ಹಾಗೂ ಶಿವಸೇನಾ ಬಂಡಾಯ ಶಾಸಕರು ಸರ್ಕಾರ ರಚನೆ ಮಾಡಿದ ವಿದ್ಯಮಾನಕ್ಕೆ ಬಿಹಾರದ ಇಂದಿನ ಬೆಳವಣಿಗೆಯು ವ್ಯತಿರಿಕ್ತ. ಅಲ್ಲಿ ಬಿಜೆಪಿ ಅಧಿಕಾರಕ್ಕೇರಿದರೆ, ಇಲ್ಲಿ ಅಧಿಕಾರ ಕಳೆದುಕೊಂಡಿದೆ.

'ಮಹಾರಾಷ್ಟ್ರ ವಿದ್ಯಮಾನವು ನಾಣ್ಯದ ಒಂದು ಬದಿಯಾದರೆ, ಬಿಹಾರದ್ದು ಅದರ ಮತ್ತೊಂದು ಬದಿ' ಎಂದು ರಾಜಕೀಯ ವಿಶ್ಲೇಷಕ ಹಾಗೂ ಮೌಲಾನಾ ಆಜಾದ್ ಇನ್‌ಸ್ಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್‌ನ ಮಾಜಿ ಪ್ರಾಧ್ಯಾಪಕ ರಣಬೀರ್ ಸಮಾದ್ದರ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಭಿನ್ನ ಸಿದ್ಧಾಂತದ ಪಕ್ಷಗಳ ಜತೆ ಮೈತ್ರಿ ಮಾಡಿಕೊಂಡು, ಪದೇ ಪದೇ ನಿಲುವು ಬದಲಿಸುವ ಈ ಯತ್ನಗಳು ನಿತೀಶ್ ಕುಮಾರ್ ಅವರ ವರ್ಚಸ್ಸನ್ನು ಕುಂದಿಸಬಹುದು. ಆದರೆ, ಅಸಾಧ್ಯವನ್ನು ಸಾಧ್ಯವಾಗಿಸುವ ನಿತೀಶ್ ಅವರ ರಾಜಕೀಯ ಸಾಮರ್ಥ್ಯವನ್ನು ಇವು ಕುಂದಿಸುವುದಿಲ್ಲ ಎಂದು ಅವರು ವಿಶ್ಲೇಷಿಸಿದ್ದಾರೆ.

'ಹೊಸ ಸರ್ಕಾರ ಸ್ಥಾಪಿಸುವ ಮೂಲಕ ಈಗಿನ ವಿದ್ಯಮಾನವನ್ನು ನಿಭಾಯಿಸುವಲ್ಲಿ ನಿತೀಶ್ ಅವರು ಯಶಸ್ವಿಯಾಗಬಹುದು. ಆದರೆ 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಹಾರದ 40 ಲೋಕಸಭಾ ಸ್ಥಾನಗಳನ್ನು ಗೆಲ್ಲುವುದು ಬಿಜೆಪಿಗೆ ಅಗ್ನಿಪರೀಕ್ಷೆಯಾಗಲಿದೆ' ಎಂದು ಸಿಪಿಐಎಂಎಲ್‌ನ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಅಭಿಪ್ರಾಯಪಟ್ಟಿದ್ದಾರೆ.

71 ವರ್ಷದ ನಿತೀಶ್ ಕುಮಾರ್ ಅವರು ಬಿಹಾರದಲ್ಲಿ 8ನೇ ಬಾರಿಗೆ ಮುಖ್ಯಮಂತ್ರಿ ಹುದ್ದೆಗೆ ಏರುವ ಸಿದ್ಧತೆಯಲ್ಲಿದ್ದಾರೆ. ಎಲೆಕ್ಟ್ರಿಕಲ್ ಎಂಜಿನಿಯರ್ ಆಗಿ ಬಿಹಾರದ ವಿದ್ಯುತ್ ಮಂಡಳಿಯಲ್ಲಿ ವೃತ್ತಿ ಆರಂಭಿಸಿದ್ದ ನಿತೀಶ್, ಸಮಾಜವಾದಿ ನಾಯಕ ರಾಮ ಮನೋಹರ ಲೋಹಿಯಾ ಅವರ ಪ್ರಭಾವಕ್ಕೊಳಗಾಗಿ ರಾಜಕೀಯಕ್ಕೆ ಬಂದರು. 1970ರಲ್ಲಿ ಜಯಪ್ರಕಾಶ್ ನಾರಾಯಣ್ ಅವರ ಚಳವಳಿಯಲ್ಲಿ ಭಾಗಿಯಾದರು.

ಸೋಷಲಿಸ್ಟ್ ಪಕ್ಷ ಹಲವು ಬಾರಿ ವಿಭಜನೆ ಹಾಗೂ ವಿಲೀನಗಳ ಬಳಿಕ ನಿತೀಶ್ ಅವರು ಜೆಡಿಯು ಕಟ್ಟಿದರು. 2000ರ ಮಾರ್ಚ್‌ನಲ್ಲಿ ಲಾಲು ಪ್ರಸಾದ್ ನೇತೃತ್ವದ ಆರ್‌ಜೆಡಿ ಸರ್ಕಾರವನ್ನು ಉರುಳಿಸಲು ಜೆಡಿಯು–ಬಿಜೆಪಿ ಪರಿಶ್ರಮಪಟ್ಟವು. ಇದರಲ್ಲಿ ಯಶಸ್ವಿಯೂ ಆಗಿ, ಮೊದಲ ಬಾರಿಗೆ ನಿತೀಶ್ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಆದರೆ, ಎನ್‌ಡಿಎ ಬಳಿ ನಿಗದಿತ ಬಹುಮತ ಇಲ್ಲದ ಕಾರಣ, ಈ ಸರ್ಕಾರ ಅಲ್ಪಾಯುವಾಯಿತು. ಆರ್‌ಜೆಡಿಗೆ ಮತ್ತೆ ದಾರಿಯಾಯಿತು.

ಕೇಂದ್ರದಲ್ಲಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರವನ್ನು ಸೇರಿದ ನಿತೀಶ್ ಕುಮಾರ್ ಅವರು ರೈಲ್ವೆ ಸಚಿವರಾಗಿ ಉತ್ತಮ ಆಡಳಿತಗಾರ ಎಂದು ಹೆಸರು ಮಾಡಿದರು. ರೈಲು ಟಿಕೆಟ್ ನೋಂದಣಿಯನ್ನು ಕಂಪ್ಯೂಟರೀಕರಣಗೊಳಿಸಿದರು. ಇಂತಹ ಹಲವು ಕಾರ್ಯಕ್ರಮಗಳು ನಿತೀಶ್ ಅವಧಿಯಲ್ಲಿ ಜಾರಿಯಾದವು.

ಹಿಂದುಳಿದ ಕುರ್ಮಿ ಸಮುದಾಯಕ್ಕೆ ಸೇರಿದ ನಿತೀಶ್ ಅವರು 2005ರಲ್ಲಿ ಮುಖ್ಯಮಂತ್ರಿ ಗದ್ದುಗೆಗೆ ಮತ್ತೆ ಏರಿದರು. ಈ ಬಾರಿ ಅವರ ಬಳಿ ಅರ್ಹ ಸಂಖ್ಯಾಬಲ ಇತ್ತು. ಉತ್ತಮ ಆಡಳಿತಗಾರ ಎಂಬ ಹೆಸರಿಗೆ ತಕ್ಕಂತೆ ಅವರು ಹಿಂದುಳಿದ ರಾಜ್ಯ ಎಂಬ ಹಣೆಪಟ್ಟಿ ಹೊಂದಿದ್ದ ಬಿಹಾರದ ಕಾನೂನು ಮತ್ತು ಸುವ್ಯವಸ್ಥೆ, ಮೂಲಸೌಕರ್ಯ ಹಾಗೂ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಿದರು.

ಮೂರು ಬಾರಿ ಎನ್‌ಡಿಎ ಮುಖ್ಯಮಂತ್ರಿಯಾಗಿದ್ದ ನಿತೀಶ್ ಅವರು ಬಿಜೆಪಿಯನ್ನು ತೊರೆದು, 2015ರಲ್ಲಿ ತಮ್ಮ ಪ್ರತಿಸ್ಪರ್ಧಿ ಪಕ್ಷವಾದ ಲಾಲು ಪ್ರಸಾದ್ ನೇತೃತ್ವದ ಆರ್‌ಜೆಡಿ ಹಾಗೂ ಕಾಂಗ್ರೆಸ್ ಜೊತೆಗೆ ಮೈತ್ರಿ ಮಾಡಿಕೊಂಡು ಮುಖ್ಯಮಂತ್ರಿಯಾಗಿ ಮತ್ತೆ ಅಧಿಕಾರಕ್ಕೆ ಬಂದರು. ಆದರೆ ಈ ಮೈತ್ರಿಕೂಟ 2017ರಲ್ಲಿ ಕೊನೆಗೊಂಡಿತು. ಆಗ ಮತ್ತೆ ಎನ್‌ಡಿಎಯತ್ತ ಮುಖಮಾಡಿದ ನಿತೀಶ್, 'ಮಹಾಘಟಬಂಧನ್' ಅನ್ನು ಕೈಬಿಟ್ಟರು. ಈ ವಿದ್ಯಮಾನ ಈಗ ಮತ್ತೆ ತಿರುವುಮುರುವಾಗಿದೆ.

'ನಿತೀಶ್ ಅವರ ಇಂದಿನ ನಿರ್ಧಾರವು 'ರಾಜಕೀಯದ ಒಕ್ಕೂಟಕರಣ'ದ (ಪ್ರಾದೇಶಿಕ ಪಕ್ಷಗಳು ರಾಜ್ಯಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದು) ಹೊಸ ಅಧ್ಯಾಯದ ಆರಂಭವಾದರೆ, ಮಹಾರಾಷ್ಟ್ರದಲ್ಲಿ ಸ್ಥಳೀಯ ಪಕ್ಷದೊಂದಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿಯದ್ದು ರಾಜಕಾರಣದ ಕೇಂದ್ರೀಕರಣ' ಎಂದು ಸಮಾದ್ದರ್ ಅಭಿಪ್ರಾಯಪಟ್ಟಿದ್ದಾರೆ.

'ಬಿಹಾರದ ಜನತೆಗೆ ಬಗೆದ ದ್ರೋಹ'

ನಿತೀಶ್ ಕುಮಾರ್ ಅವರು ತಮ್ಮ ಜತೆಗಿನ ಮೈತ್ರಿಕೂಟವನ್ನು ತೊರೆಯುವ ಮೂಲಕ ಬಿಹಾರದ ಜನತೆಗೆ ದ್ರೋಹ ಬಗೆದಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಬಿಜೆಪಿ ನೇತೃತ್ವದ ಮೈತ್ರಿಕೂಟವನ್ನು ತೊರೆಯುವುದಾಗಿ ನಿತೀಶ್ ಕುಮಾರ್ ಅವರು ಘೋಷಿಸಿದ ಬೆನ್ನಲ್ಲೇ ಬಿಹಾರ ಬಿಜೆಪಿ ಘಟಕದ ಅಧ್ಯಕ್ಷ ಸಂಜಯ್ ಜೈಸ್ವಾಲ್ ಮಾಧ್ಯಮಗೋಷ್ಠಿ ನಡೆಸಿದರು.

'2020ರ ವಿಧಾನಸಭಾ ಚುನಾವಣೆಯನ್ನು ನಾವು ಮತ್ತು ಜೆಡಿಯು ಒಟ್ಟಾಗಿ ಎದುರಿಸಿದ್ದೆವು. ನಾವು ಮೈತ್ರಿಧರ್ಮಕ್ಕೆ ಬದ್ಧವಾಗಿದ್ದೆವು. ಕಡಿಮೆ ಸ್ಥಾನಗಳಲ್ಲಿ ಗೆದ್ದಿದ್ದರೂ ಮುಖ್ಯಮಂತ್ರಿ ಹುದ್ದೆಯನ್ನು ನಿತೀಶ್ ಅವರಿಗೇ ಬಿಟ್ಟುಕೊಟ್ಟೆವು. ಇಂದಿನ ಬೆಳವಣಿಗೆಯು, ಬಿಹಾರದ ಜನತೆಗೆ ಬಗೆದ ದ್ರೋಹವೇ ಆಗಿದೆ' ಎಂದು ಅವರು ಹೇಳಿದ್ದಾರೆ.

'ನಿತೀಶ್ ಅವರ ಈ ದ್ರೋಹವನ್ನು ಬಿಹಾರದ ಜನತೆ ಎಂದಿಗೂ ಮರೆಯುವುದಿಲ್ಲ' ಎಂದು ಅವರು ಹೇಳಿದ್ದಾರೆ.

ರಾಜ್ಯದಲ್ಲಿನ ಬೆಳವಣಿಗೆ ಬಗ್ಗೆ ಚರ್ಚಿಸಲು ಬಿಜೆಪಿಯ ಹಲವು ನಾಯಕರು ಮಂಗಳವಾರ ಪಟ್ನಾಕ್ಕೆ ಬಂದಿದ್ದಾರೆ.

ನಾಯಕರು ಹೇಳಿದ್ದೇನು?

ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ವಿರುದ್ಧ ಪ್ರತಿಪಕ್ಷಗಳು ಒಟ್ಟಾಗಿ ಹೋರಾಡಬೇಕು ಎನ್ನುವ ಆಗ್ರಹಕ್ಕೆ, ಜೆಡಿಯು ನಿರ್ಧಾರವು ಮರುಚಾಲನೆ ನೀಡಿದೆ
ಆರ್.ಎಸ್.ಭಾರತಿ, ಡಿಎಂಕೆ ಸಂಘಟನಾ ಕಾರ್ಯದರ್ಶಿ

ಬ್ರಿಟಿಷರ ವಿರುದ್ಧ 'ಭಾರತ ಬಿಟ್ಟು ತೊಲಗಿ' ಘೋಷಣೆ ಕೂಗಲಾಗಿದ್ದ ದಿನವೇ ಬಿಹಾರದಲ್ಲಿ 'ಬಿಜೆಪಿ ಓಡಿಸಿ' ಎನ್ನಲಾಗಿದೆ. ಇದೊಂದು ಉತ್ತಮ ಬೆಳವಣಿಗೆ
ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ


ಬಿಜೆಪಿಯ ಸರ್ವಾಧಿಕಾರದಲ್ಲಿ ಮಿತ್ರಪಕ್ಷಗಳಿಗೆ ಜಾಗವೇ ಇಲ್ಲ. ಮೊದಲು ಅಕಾಲಿ ದಳ, ನಂತರ ಶಿವಸೇನಾ, ಈಗ ಜೆಡಿಯು. ಬಿಜೆಪಿ ಮತ್ತು ಎಐಎಡಿಎಂಕೆ ನಡುವಣ ಬಿರುಕೂ ದೊಡ್ಡದಾಗುತ್ತಿದೆ
ಡಿ.ರಾಜಾ, ಸಿಪಿಐ ಪ್ರಧಾನ ಕಾರ್ಯದರ್ಶಿ

ಪಟ್ಟಭದ್ರ ಬಿಜೆಪಿಗಿಂತ ತೇಜಸ್ವಿ ಯಾದವ್ ಅವರಂತಹ ಯುವಕರ ಕೈಗೆ ಬಿಹಾರದ ಭವಿಷ್ಯವನ್ನು ನೀಡುವುದು ಉತ್ತಮ ಎಂಬುದನ್ನು ನಿತೀಶ್ ಅವರ ಯುಟರ್ನ್ ಸಾಬೀತುಮಾಡಿದೆ
ವಿವೇಕ್ ಟಂಖಾ, ಕಾಂಗ್ರೆಸ್ ಸಂಸದ

ಮೋದಿ ಮತ್ತು ಶಾ ಅವರು ಮುಂಗಾರು ಅಧಿವೇಶನವನ್ನು ನಾಲ್ಕು ದಿನ ಮೊದಲೇ ಮುಗಿಸಿ ಓಡಲು ಬಿಹಾರ ರಾಜಕಾರಣ ಕಾರಣ
ಡೆರೆಕ್ ಒಬ್ರಿಯಾನ್, ಟಿಎಂಸಿ ಮುಖಂಡ

ನಿತೀಶ್ ಅವರು ಬಿಹಾರದ ಜನರಿಗೆ ಮತ್ತೆ ವಂಚನೆ ಮಾಡಿದ್ದಾರೆ. ಒಮ್ಮೆ ಒಬ್ಬರ ಜತೆ, ಮತ್ತೊಮ್ಮೆ ಇನ್ನೊಬ್ಬರ ಜತೆ ಹೋಗುವುದು ಎಷ್ಟು ಸರಿ?
ಚಿರಾಗ್ ಪಾಸ್ವಾನ್, ಎಲ್‌ಜೆಪಿ (ರಾಮ್‌ವಿಲಾಸ್) ಮುಖಂಡ

ನಿತೀಶ್ ಅವರು ಈ ದೇಶದಲ್ಲಿರುವ ಅತ್ಯಂತ ಅನುಭವಿ ಮುಖ್ಯಮಂತ್ರಿ. ಅವರು ಅತ್ಯಂತ ದಿಟ್ಟವಾದ ನಿರ್ಧಾರ ಕೈಗೊಂಡಿದ್ದಾರೆ
ತೇಜಸ್ವಿ ಯಾದವ್, ಆರ್‌ಜೆಡಿ ನಾಯಕ



ಮತ್ತೆ ಎನ್‌ಡಿಎ ತೊರೆದ ನಿತೀಶ್

ಒಂದನೇ ಪುಟದಿಂದ...

ಎನ್‌ಡಿಎಯನ್ನು ಜೆಡಿಯು ತೊರೆಯಲಿದೆ ಎಂಬ ವರದಿಗಳು ಸೋಮವಾರವೇ ಹರಿದಾಡಿತ್ತು. ಜೆಡಿಯು ಶಾಸಕರು ಮತ್ತು ಸಂಸದರ ಸಭೆಯನ್ನು ನಿತೀಶ್ ಅವರು ಮಂಗಳವಾರ ನಡೆಸಿದರು. 'ಬಿಜೆಪಿ ಬೆನ್ನಿಗೆ ಚೂರಿ ಹಾಕಿದೆ' ಎಂದು ಈ ಸಭೆಯಲ್ಲಿ ನಿತೀಶ್ ಹೇಳಿದ್ದರು. ಬಳಿಕ, ಅವರು ರಾಜಭವನಕ್ಕೆ ಹೋಗಿ ರಾಜೀನಾಮೆ ನೀಡಿದ್ದಾರೆ. ರಾಜಭವನದಿಂದ ಹಿಂದಿರುಗಿದ ಬಳಿಕ ಅವರು ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ಅವರ ಮನೆಗೆ ಹೋದರು. ಮಹಾಮೈತ್ರಿಕೂಟದ ಘಟಕ ಪಕ್ಷಗಳಾದ ಆರ್‌ಜೆಡಿ, ಕಾಂಗ್ರೆಸ್ ಮತ್ತು ಎಡ ಪಕ್ಷಗಳ ಮುಖಂಡರು ಅಲ್ಲಿಯೇ ಇದ್ದರು.

ರಾಬ್ಡಿ ಮನೆಯಲ್ಲಿ ಸುಮಾರು ಅರ್ಧ ತಾಸು ಸಮಾಲೋಚನೆ ನಡೆಯಿತು. ಬಳಿಕ, ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ಜತೆಗೆ ಅವರು ರಾಜಭವನಕ್ಕೆ ಹೋದರು. ನಿತೀಶ್ ಅವರಿಗೆ ಬೆಂಬಲ ನೀಡುವ ಪತ್ರವನ್ನು ತೇಜಸ್ವಿ ಒಯ್ದಿದ್ದರು. ಮಾಜಿ ಮುಖ್ಯಮಂತ್ರಿ ಮತ್ತು ಹಿಂದುಸ್ಥಾನ್ ಅವಾಮ್ ಮೋರ್ಚಾದ (ಎಚ್‌ಎಎಂ) ಮುಖ್ಯಸ್ಥ ಜಿತನ್ ರಾಮ್ ಮಾಂಝಿ ಅವರೂ ಜತೆಗಿದ್ದರು. ನಿತೀಶ್ ಅವರಿಗೆ ಎಚ್‌ಎಎಂ ಬೇಷರತ್ ಬೆಂಬಲ ಘೋಷಿಸಿದೆ.

ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ಜತೆ ನಿತೀಶ್ ಕುಮಾರ್ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ ಬಳಿಕ ದೂರವಾಣಿ ಮೂಲಕ ಮಾತನಾಡಿದ್ದಾರೆ.

ಉಪ ಮುಖ್ಯಮಂತ್ರಿ ತಾರ್‌ಕಿಶೋರ್ ಪ್ರಸಾದ್ ಅವರ ಮನೆಯಲ್ಲಿ ಬಿಜೆಪಿ ಮುಖಂಡರು ಸಭೆ ನಡೆಸಿದ್ದಾರೆ. ಬಿಜೆಪಿಯ ಸಚಿವರು, ಮುಖಂಡರು ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಂಜಯ ಜೈಸ್ವಾಲ್ ಅವರು ಸಭೆಯಲ್ಲಿ ಇದ್ದರು.

ಬಿಜೆಪಿಗೆ ಹಿನ್ನಡೆಯಲ್ಲೂ ಪಕ್ಷ ವಿಸ್ತರಣೆ ಆಶಾಕಿರಣ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಅಧಿಕಾರ ನಷ್ಟವಾಗಿರುವುದು ಬಿಜೆಪಿಗೆ ಹಿನ್ನಡೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಲೆಕ್ಕಾಚಾರವೂ ಏರುಪೇರಾಗುವಂತೆ ಇದು ಮಾಡಿದೆ. ಆದರೆ, ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯವನ್ನು ಮುರಿದು ಸ್ವತಂತ್ರವಾಗಿ ಬೆಳೆಯಲು ಇದೊಂದು ಅವಕಾಶ ಎಂದು ಬಿಜೆಪಿ ನಾಯಕರು ಭಾವಿಸಿದ್ದಾರೆ. ಉತ್ತರ ಪ್ರದೇಶದಲ್ಲಿ ಪ್ರಾದೇಶಿಕ ಪಕ್ಷಗಳನ್ನು ಹಿಂದಿಕ್ಕಿರುವ ಬಿಜೆಪಿ, ಸತತ ಎರಡು ಬಾರಿ ಅಧಿಕಾರಕ್ಕೆ ಬಂದಿದೆ.

ಬಿಜೆಪಿಯ ಹಲವು ಮುಖಂಡರಿಗೆ ಜೆಡಿಯು ಜೊತೆಗಿನ ಮೈತ್ರಿ ಮುಂದುವರಿಯಬೇಕು ಎಂಬ ಬಯಕೆ ಇರಲಿಲ್ಲ. ಆದರೆ, ಜೆಡಿಯು ಪಕ್ಷವು ಎನ್‌ಡಿಎಯಲ್ಲಿ ಇದ್ದರೆ 2024ರ ಲೋಕಸಭಾ ಚುನಾವಣೆಯಲ್ಲಿ ಲಾಭವಾಗಬಹುದು ಎಂಬುದು ಬಿಜೆಪಿಯ ಕೇಂದ್ರ ನಾಯಕರ ಯೋಚನೆಯಾಗಿತ್ತು. ಬಿಹಾರದಲ್ಲಿ 40 ಲೋಕಸಭಾ ಕ್ಷೇತ್ರಗಳಿವೆ. 2019ರ ಲೋಕಸಭಾ ಚುನಾವಣೆಯಲ್ಲಿ 39 ಕ್ಷೇತ್ರಗಳು ಎನ್‌ಡಿಎ ಪಾಲಾಗಿದ್ದವು. ಆರ್‌ಜೆಡಿ–ಜೆಡಿಯು–ಕಾಂಗ್ರೆಸ್–ಎಡಪಕ್ಷಗಳ ಪ್ರಬಲ ಮಹಾಮೈತ್ರಿಕೂಟವನ್ನು ಬಿಜೆಪಿ 2024ರ ಲೋಕಸಭಾ ಚುನಾವಣೆಯಲ್ಲಿ ಎದುರಿಸಬೇಕಾಗಬಹುದು. ಜೆಡಿಯು ಜತೆಗಿನ ಮೈತ್ರಿ ಮುರಿದಿರುವ ಕಾರಣ ಬಿಹಾರದಲ್ಲಿ ಬಿಜೆಪಿಯನ್ನು ಗಟ್ಟಿಗೊಳಿಸಲು ಅವಕಾಶ ಸೃಷ್ಟಿಯಾಗಿದೆ ಎಂದು ಸಿಎಸ್‌ಡಿಎಸ್ ನಿರ್ದೇಶಕ ಸಂಜಯ ಕುಮಾರ್ ಹೇಳಿದ್ದಾರೆ.

'ಮಿತ್ರ ಪಕ್ಷಗಳು ಬಿಜೆಪಿ ಜತೆಗೆ ಆರಾಮವಾಗಿ ಇಲ್ಲ ಎಂಬುದರ ಸ್ಪಷ್ಟ ಸುಳಿವು ಇದು. ಆಡಳಿತಾರೂಢ ಮೈತ್ರಿಕೂಟದಿಂದ ಒಂದೊಂದೇ ಪಕ್ಷಗಳು ಹೊರ ಹೋಗುತ್ತಿವೆ' ಎಂದು ಅವರು ಹೇಳಿದ್ದಾರೆ.

'ಬಿಹಾರದಲ್ಲಿ ಬಿಜೆಪಿಯ ವಿಸ್ತರಣೆಗೆ ಈಗ ಅವಕಾಶ ಸಿಕ್ಕಿದೆ. ಆದರೆ, 2024ರಲ್ಲಿ ಬಿಜೆಪಿಗೆ ಎಷ್ಟು ಯಶಸ್ಸು ದೊರೆಯಬಹುದು ಎಂಬುದನ್ನು ಹೇಳಲಾಗದು' ಎಂದಿದ್ದಾರೆ.

'ಜನತಾ ಪರಿವಾರ ಉತ್ತಮ ಪರ್ಯಾಯ'



ಬೆಂಗಳೂರು: ಜನತಾ ಪರಿವಾರವನ್ನು ಒಗ್ಗೂಡಿಸಲು ಯುವ ಪೀಳಿಗೆ ನಿರ್ಧರಿಸಿದರೆ ಅದು ದೇಶಕ್ಕೆ ಉತ್ತಮ ಪರ್ಯಾಯ ಶಕ್ತಿಯಾಗಲಿದೆ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದ್ದಾರೆ.

ಬಿಹಾರದಲ್ಲಿ ಮಹಾ ಘಟಬಂಧನ ಸರ್ಕಾರ ಅಸ್ತಿತ್ವಕ್ಕೆ ಬರುತ್ತಿರುವ ಕುರಿತು ಮಂಗಳವಾರ ಟ್ವೀಟ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಬಿಹಾರದ ಬೆಳವಣಿಗೆಗಳನ್ನು ಗಮನಿಸುತ್ತಿದ್ದೇನೆ. ಜನತಾ ಪರಿವಾರ ಒಂದೇ ಸೂರಿನಡಿ ಇದ್ದ ದಿನಗಳನ್ನು ನೆನಪಿಸಿಕೊಳ್ಳುವಂತೆ ಆಯಿತು' ಎಂದಿದ್ದಾರೆ.

'ಜನತಾಪರಿವಾರ ಒಟ್ಟಿಗೆ ಇದ್ದ ಕಾಲದಲ್ಲಿ ದೇಶಕ್ಕೆ ಮೂವರು ಪ್ರಧಾನಿಗಳನ್ನು ನೀಡಿತ್ತು. ನಾನೀಗ ಇಳಿ ವಯಸ್ಸಿನಲ್ಲಿದ್ದೇನೆ. ಯುವ ಪೀಳಿಗೆ ತೀರ್ಮಾನಿಸಿದರೆ ಮತ್ತೆ ಪರ್ಯಾಯ ಶಕ್ತಿ ಆಗಲು ಸಾಧ್ಯವಿದೆ' ಎಂದು ಹೇಳಿದ್ದಾರೆ.

ಕ್ವಿಟ್ ಇಂಡಿಯಾ ಚಳವಳಿ ಸ್ಮರಣೆ

ಕಾಂಗ್ರೆಸ್ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ನಡೆಯುತ್ತಿದ್ದಾಗ, ಆರ್‌ಎಸ್‌ಎಸ್ ಅದನ್ನು ಬಹಿಷ್ಕರಿಸಿದ್ದು ಮಾತ್ರವಲ್ಲ ಬ್ರಿಟಿಷರಿಗೆ ಸಹಕಾರ ನೀಡಿತ್ತು

ಸ್ವಾತಂತ್ರ್ಯ ರಕ್ಷಿಸಿ: ಸೋನಿಯಾ

ನವದೆಹಲಿ (ಪಿಟಿಐ): ನಮ್ಮೆಲ್ಲಾ ಶಕ್ತಿಯಿಂದ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಬೇಕು ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಮಂಗಳವಾರ ಜನರಿಗೆ ಕರೆ ನೀಡಿದ್ದಾರೆ.

ಕ್ವಿಟ್ ಇಂಡಿಯಾ ಚಳವಳಿಯ ಸ್ಮರಣಾರ್ಥ ಸಂದೇಶ ನೀಡಿರುವ ಅವರು, 'ಈ ಐತಿಹಾಸಿಕ ದಿನದಂದು ಲಕ್ಷಾಂತರ ಮಂದಿ ಕಾಂಗ್ರೆಸ್ ಕಾರ್ಯಕರ್ತರನ್ನು ಬಡಿದು ಜೈಲಿಗಟ್ಟಿದಾಗ, ಅರುಣಾ ಅಸಫ್ ಅಲಿ ಅವರು ರಾಷ್ಟ್ರಧ್ವಜವನ್ನು ಹಾರಿಸಿದ್ದರು. ಅವರ ಧೈರ್ಯವು ಸ್ವಾತಂತ್ರ್ಯಾನ್ವೇಷಣೆಯ ಸಂಕೇತವಾಗಿದೆ' ಎಂದಿದ್ದಾರೆ.


ಸೋನಿಯಾ ಗಾಂಧಿ

'ಮಹಾತ್ಮ ಗಾಂಧಿ ಅವರ ನೇತೃತ್ವದಲ್ಲಿ ನಡೆದಿರುವ ಕ್ವಿಟ್ ಇಂಡಿಯಾ ಚಳವಳಿಯನ್ನು ಸ್ಮರಿಸುವಾಗ ನಾವು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಲಕ್ಷಾಂತರ ಮಂದಿಯನ್ನು ಮತ್ತು ಮಹಿಳೆಯರನ್ನು ಮರೆಯಬಾರದು' ಎಂದಿದ್ದಾರೆ.

'80 ವರ್ಷಗಳ ಹಿಂದೆ ಮಹಾತ್ಮ ಗಾಂಧಿ ಅವರು ಈ ದಿನದಂದು ಕ್ವಿಟ್ ಇಂಡಿಯಾ ಚಳವಳಿ ಆರಂಭಿಸಿದಾಗ ಆರ್‌ಎಸ್‌ಎಸ್ ಏನು ಮಾಡುತ್ತಿತ್ತು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

ಬಿಜೆಪಿ, ಶಿವಸೇನಾ ಗುಂಪಿನಿಂದ ತಲಾ 9 ಮಂದಿ ಸೇರ್ಪಡೆ, ಮಹಿಳೆಯರಿಗೆ ಪ್ರಾತಿನಿಧ್ಯ ಇಲ್ಲ

ಶಿಂದೆ ಸಂಪುಟಕ್ಕೆ 18 ಶಾಸಕರ ಸೇರ್ಪಡೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ 41 ದಿನಗಳ ಬಳಿಕ ಏಕನಾಥ ಶಿಂದೆ ಅವರು ತಮ್ಮ ಸಂಪುಟಕ್ಕೆ 18 ಶಾಸಕರನ್ನು ಮಂಗಳವಾರ ಸೇರಿಸಿಕೊಂಡಿದ್ದಾರೆ. ಬಿಜೆಪಿ ಮತ್ತು ಶಿವಸೇನಾ ಗುಂಪಿನ ತಲಾ 9 ಶಾಸಕರು ಸಚಿವರಾಗಿ ಪ್ರಮಾಣ ವಚನ ಪಡೆದುಕೊಂಡಿದ್ದಾರೆ. ಆದರೆ ಇವರಲ್ಲಿ ಮಹಿಳೆಯರು ಯಾರೂ ಇಲ್ಲ. ಈ ಬಗ್ಗೆ ರಾಜಕಾರಣಿಗಳು ಮತ್ತು ಮಹಿಳಾ ಹಕ್ಕುಗಳ ಕಾರ್ಯಕರ್ತರಿಂದ ಟೀಕೆ ವ್ಯಕ್ತವಾಗಿದೆ.

ಒಬ್ಬರು ವಿಧಾನ ಪರಿಷತ್ ಸದಸ್ಯೆಯೂ ಸೇರಿ ಬಿಜೆಪಿ 12 ಶಾಸಕಿಯರನ್ನು ಹೊಂದಿದೆ. ಶಿಂದೆ ಗುಂಪಿನಲ್ಲಿ ಇಬ್ಬರು ಶಾಸಕಿಯರಿದ್ದಾರೆ. ಒಬ್ಬರು ಪಕ್ಷೇತರ ಶಾಸಕಿ ಇದ್ದಾರೆ. ವಿಧಾನ ಪರಿಷತ್‌ನ ಮೂವರು ಸದಸ್ಯರು ಸೇರಿ ಮಹಾರಾಷ್ಟ್ರದ ಶಾಸಕಿಯರ ಸಂಖ್ಯೆ 28.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಕಾಂತ ಪಾಟೀಲ್ ಅವರೂ ಸಚಿವ ಸ್ಥಾನ ಪಡೆದವರಲ್ಲಿ ಸೇರಿದ್ದಾರೆ. ಈಗ, ಮಹಾರಾಷ್ಟ್ರ ಸಚಿವ ಸಂಪುಟದ ಬಲ 20ಕ್ಕೆ ಏರಿಕೆಯಾಗಿದೆ. ಒಟ್ಟು 43 ಸಚಿವರನ್ನು ಹೊಂದಲು ಅಲ್ಲಿ ಅವಕಾಶ ಇದೆ. ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ರಾಜಭವನದಲ್ಲಿ ಪ್ರಮಾಣ ವಚನ ಬೋಧಿಸಿದರು.

ಮುಖ್ಯಮಂತ್ರಿಯಾಗಿ ಶಿಂದೆ ಮತ್ತು ಉಪ ಮುಖ್ಯಮಂತ್ರಿಯಾಗಿ ದೇವೇಂದ್ರ ಫಡಣವೀಸ್ ಅವರು ಜೂನ್ 30ರಂದು ಪ್ರಮಾಣ ವಚನ ಪಡೆದುಕೊಂಡಿದ್ದರು.

ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ರಾಧಾಕೃಷ್ಣ ವಿಖೆ ಪಾಟೀಲ್, ಸುಧೀರ್ ಮುಂಗಟಿವಾರ್, ಚಂದ್ರಕಾಂತ್ ಪಾಟೀಲ್, ವಿಜಯ ಕುಮಾರ್ ಗವಿತ್, ಗಿರೀಶ್ ಮಹಾಜನ್, ಸುರೇಶ್ ಖಾಡೆ, ರವೀಂದ್ರ ಚವಾಣ್, ಅತುಲ್ ಸಾವೆ ಮತ್ತು ಮಂಗಲಪ್ರಭಾತ್ ಲೋಧಾ ಅವರು ಬಿಜೆಪಿಯವರು. ಶಿಂದೆ ಗುಂಪಿನಿಂದ ಗುಲಾಬ್‌ರಾವ್ ಪಾಟೀಲ್, ದಾದಾ ಭುಸೆ, ಸಂಜಯ ರಾಥೋಡ್, ಸಂದೀಪನ್ ಭುಮ್ರೆ, ಉದಯ ಸಾಮಂತ್, ತಾನಾಜಿ ಸಾವಂತ್, ಅಬ್ದುಲ್ ಸತ್ತಾರ್, ದೀಪಕ್ ಕೇಸರ್ಕರ್ ಮತ್ತು ಶಂಭುರಾಜ್ ದೇಸಾಯಿ ಸಚಿವ ಸ್ಥಾನ ಪಡೆದಿದ್ದಾರೆ.

ಮಂಗಳವಾರ ಪ್ರಮಾಣ ವಚನ ಪಡೆದುಕೊಂಡವರಲ್ಲಿ ರಾಜ್ಯ ಖಾತೆಯ ಸಚಿವರು ಯಾರೂ ಇಲ್ಲ. ಸಂಪುಟದ ಮತ್ತೊಂದು ವಿಸ್ತರಣೆ ಸದ್ಯವೇ ನಡೆಯಲಿದೆ ಎಂದು ಶಿಂದೆ ಆಪ್ತರು ಹೇಳಿದ್ದಾರೆ.

ಮುಂಬೈನ ಶಾಸಕ ಲೋಧಾ ಅವರಿಗೆ ಬಿಜೆಪಿ ಅವಕಾಶ ಕೊಟ್ಟಿದೆ. ಆದರೆ, ಶಿಂದೆ ಗುಂಪಿನಲ್ಲಿರುವ ಮುಂಬೈಯ ಶಾಸಕರಿಗೆ ಈ ಬಾರಿ ಅವಕಾಶ ಸಿಕ್ಕಿಲ್ಲ. ಮುಂಬೈ ಮಹಾನಗರ ಪಾಲಿಕೆಗೆ ಈ ವರ್ಷವೇ ಚುನಾವಣೆ ನಡೆಯಲಿದೆ. ಹಾಗಾಗಿ, ಮುಂಬೈನ ಕೆಲವು ಶಾಸಕರು ಮುಂದಿನ ವಿಸ್ತರಣೆಯಲ್ಲಿ ಸ್ಥಾನ ಪಡೆಯುವ ಸಾಧ್ಯತೆ ಇದೆ.

ಶಿವಸೇನಾ ಗುಂಪು ಮತ್ತು ಬಿಜೆಪಿಯ ಹಲವು ಹಿರಿಯ ಮುಖಂಡರಿಗೆ ಸಚಿವ ಸಂಪುಟದಲ್ಲಿ ಸ್ಥಾನ ಸಿಕ್ಕಿಲ್ಲ ಎಂಬ ಅಸಮಾಧನ ಉಂಟಾಗಿದೆ.

ಈ ಹಿಂದೆ ಅಧಿಕಾರದಲ್ಲಿ ಇದ್ದ ಉದ್ಧವ್ ಠಾಕ್ರೆ ನೇತೃತದ ಸರ್ಕಾರದಲ್ಲಿ ಸಂಜಯ ರಾಥೋಡ್ ಅವರು ಸಚಿವರಾಗಿದ್ದರು. ಆದರೆ, ಮಹಿಳೆಯೊಬ್ಬರ ಆತ್ಮಹತ್ಯೆಗೆ ಇವರು ಕಾರಣರಾಗಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಹಾಗಾಗಿ, ಅವರು ರಾಜೀನಾಮೆ ನೀಡಿದ್ದರು. ಈಗ, ಬಿಜೆಪಿ ಉಪಾಧ್ಯಕ್ಷೆ ಚಿತ್ರಾ ವಾಘ್ ಅವರು ರಾಥೋಡ್ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಂಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ರಾಥೋಡ್ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಂಡಿರುವುದು ದುರದೃಷ್ಟಕರ. ರಾಥೋಡ್ ವಿರುದ್ಧ ಹೋರಾಟ ಮುಂದುವರಿಸುತ್ತೇನೆ ಎಂದು ಚಿತ್ರಾ ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ವಿಧಾನ ಪರಿಷತ್ ಸದಸ್ಯರಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ
- ಸರ್ಕಾರ ಬೆಂಬಲಿಸಿರುವ ಸಣ್ಣ ಪಕ್ಷಗಳಿಗೆ ಅವಕಾಶ ಕೊಟ್ಟಿಲ್ಲ

ಒಬ್ಬ ಮಹಿಳೆಗೂ ಸಚಿವ ಸಂಪುಟದಲ್ಲಿ ಅವಕಾಶ ನೀಡಲಾಗಿಲ್ಲ. ಮಹಿಳೆಯರ ಬಗ್ಗೆ ಅವರಿಗೆ ಗೌರವ ಇಲ್ಲ ಎಂಬುದನ್ನು ಇದು ತೋರಿಸುತ್ತದೆ
ಸುಪ್ರಿಯಾ ಸುಳೆ, ಎನ್‌ಸಿಪಿ ನಾಯಕಿ

ನಮ್ಮದು ಎಲ್ಲರನ್ನೂ ಒಳಗೊಂಡ ಸರ್ಕಾರ. ಎಲ್ಲರಿಗೂ ಶೀಘ್ರದಲ್ಲಿಯೇ ಅಗತ್ಯ ಪ್ರಾತಿನಿಧ್ಯ ದೊರೆಯಲಿದೆ
ಏಕನಾಥ ಶಿಂದೆ
ಮಹಾರಾಷ್ಟ್ರ ಮುಖ್ಯಮಂತ್ರಿ

ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬಹುದಾದ ಒಬ್ಬ ಮಹಿಳೆಯೂ ಅವರಿಗೆ ಸಿಕ್ಕಿಲ್ಲ ಎಂಬುದು ನನ್ನನ್ನು ಅಚ್ಚರಿಯಲ್ಲಿ ಕೆಡವಿದೆ
ಕಿರಣ್ ಮೊಘೆ, ಸಾಮಾಜಿಕ ಕಾರ್ಯಕರ್ತೆ

ಮಹದಾಯಿ: ಗೋವಾ ಕಾಂಗ್ರೆಸ್ ದೂರು

ಪಣಜಿ (ಪಿಟಿಐ): ಕರ್ನಾಟಕವು ಮಹದಾಯಿ ನದಿಗೆ ಅಣೆಕಟ್ಟೆಗಳನ್ನು ನಿರ್ಮಿಸಲು ಯೋಜನೆ ರೂಪಿಸಿದ್ದು, ಇದು ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆಯಾಗಲಿದೆ. ಹೀಗಾಗಿ ಈ ವಿಷಯದಲ್ಲಿ ಕೂಡಲೇ ಮಧ್ಯಪ್ರವೇಶಿಸಬೇಕು ಎಂದು ಕಾಂಗ್ರೆಸ್‌ನ ಗೋವಾ ಘಟಕ ರಾಜ್ಯಪಾಲರಿಗೆ ಮಂಗಳವಾರ ಮನವಿ ಮಾಡಿದೆ.

ರಾಜ್ಯಪಾಲ ಶ್ರೀಧರನ್ ಪಿಳ್ಳೈ ಅವರನ್ನು ಭೇಟಿ ಮಾಡಿದ ಪಕ್ಷದ ಗೋವಾ ಘಟಕದ ಅಧ್ಯಕ್ಷ ಅಮಿತ್ ಪಾಟ್ಕರ್ ನೇತೃತ್ವದ ನಿಯೋಗ, ಕರ್ನಾಟಕದಲ್ಲಿ ಉದ್ದೇಶಿತ ಅಣೆಕಟ್ಟುಗಳ ನಿರ್ಮಾಣ ಸ್ಥಳಗಳಿಗೆ ಭೇಟಿ ನೀಡುವಂತೆ ಒತ್ತಾಯಿಸಿತು.

'ರಾಜ್ಯದ ಹಿತಾಸಕ್ತಿ ಕಾಪಾಡುವಲ್ಲಿ ಗೋವಾ ಸರ್ಕಾರ ವಿಫಲವಾಗಿದೆ ಎಂಬ ರಾಜ್ಯದ ಜನತೆಯ ಆತಂಕವನ್ನು ರಾಜ್ಯಪಾಲರಿಗೆ ವಿವರಿಸಿದ್ದೇವೆ' ಎಂದು ಪಾಟ್ಕರ್ ಹೇಳಿದರು.

ಮಹಿಳೆ ಮೇಲೆ ಹಲ್ಲೆ: ತಲೆಮರೆಸಿಕೊಂಡಿದ್ದ ಆರೋಪಿ

ಶ್ರೀಕಾಂತ್ ತ್ಯಾಗಿ ಬಂಧನ


ನೊಯ್ಡಾ ಮೂಲದ ರಾಜಕಾರಣಿ ಶ್ರೀಕಾಂತ್ ತ್ಯಾಗಿ ಬಂಧಿಸಿದ ಗೌತಮ ಬುದ್ಧ ನಗರ ಪೊಲೀಸ್ ಆಯುಕ್ತ ಅಲೋಕ್ ಸಿಂಗ್ ಮಾಧ್ಯಮದವರ ಜತೆ ಮಾತನಾಡಿದರು –ಪಿಟಿಐ ಚಿತ್ರ

ನೊಯ್ಡಾ (ಪಿಟಿಐ): ಇಲ್ಲಿನ ಹೌಸಿಂಗ್ ಸೊಸೈಟಿಯೊಂದರಲ್ಲಿ ಅಕ್ರಮವಾಗಿ ಕಟ್ಟಡ ಕಾಮಗಾರಿ ನಡೆಸಿದ್ದನ್ನು ಪ್ರಶ್ನಿಸಿದ್ದ ಮಹಿಳೆ ಮೇಲೆ ಹಲ್ಲೆ ನಡೆಸಿ ತಲೆಮರೆಸಿಕೊಂಡಿದ್ದ ರಾಜಕಾರಣಿ ಶ್ರೀಕಾಂತ್ ತ್ಯಾಗಿ ಅವರನ್ನು ಮಂಗಳವಾರ ಮೀರತ್‌ನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತ್ಯಾಗಿ ಅವರು ಮಹಿಳೆಯನ್ನು ನಿಂದಿಸಿ ಹಲ್ಲೆ ಮಾಡಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು. ಈ ಘಟನೆ ಬಳಿಕ ಶುಕ್ರವಾರ ಸಂಜೆಯಿಂದ ತ್ಯಾಗಿ ತಲೆಮರೆಸಿಕೊಂಡಿದ್ದರು. ತ್ಯಾಗಿ ಬಂಧನಕ್ಕೆ ನೊಯ್ಡಾ ಪೊಲೀಸರು ₹ 25 ಸಾವಿರ ನಗದು ಬಹುಮಾನ ಘೋಷಿಸಿದ್ದರು.

ತ್ಯಾಗಿ ಅವರಿಗೆ ಉತ್ತರಪ್ರದೇಶ ಪೊಲೀಸರು ರಕ್ಷಣೆ ನೀಡಿದ್ದಾರೆ ಎನ್ನುವ ವಿವಾದಕ್ಕೆ ಸಂಬಂಧಿಸಿದಂತೆ 2020ರ ಫೆಬ್ರುವರಿಯ ಬಳಿಕ ಅವರಿಗೆ ಅಂಥ ಯಾವುದೇ ಭದ್ರತೆಯನ್ನು ಒದಗಿಸಲಾಗಿಲ್ಲ ಎಂದು ಅಲ್ಲಿನ ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಪ್ರಶಾಂತ ಕುಮಾರ್ ಲಖನೌದಲ್ಲಿ ತಿಳಿಸಿದ್ದಾರೆ.

ತ್ಯಾಗಿ ಜತೆಗೆ ಅವರ ಮೂವರು ಸಹಚರರನ್ನೂ ಬಂಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತ್ಯಾಗಿ ಅವರ ಪತ್ನಿಯನ್ನು ಮಂಗಳವಾರ ಬೆಳಿಗ್ಗೆ ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಶರಣಾಗತಿಯ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ತ್ಯಾಗಿ ಸೋಮವಾರ ಗೌತಮ್ ಬುದ್ಧ ನಗರದ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದರು. ಈ ಮನವಿಯ ವಿಚಾರಣೆಯು ಆ.10ಕ್ಕೆ ನಿಗದಿಯಾಗಿದೆ.

ತ್ಯಾಗಿ ತಾನು ಬಿಜೆಪಿಯ ಕಿಸಾನ್ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ, ಯುವ ಸಮಿತಿಯ ರಾಷ್ಟ್ರೀಯ ಸಹ ಸಂಯೋಜಕ ಎಂದು ಹೇಳಿಕೊಂಡಿದ್ದರು. ಆದರೆ, ತ್ಯಾಗಿ ಅವರೊಂದಿಗೆ ಯಾವುದೇ ಸಂಬಂಧ ಇರುವುದನ್ನು ಬಿಜೆಪಿ ನಿರಾಕರಿಸಿದೆ.

ಮಹಿಳೆಯ ಮೇಲಿನ ಹಲ್ಲೆಯ ಪ್ರಕರಣ ಕುರಿತು ಬಿಜೆಪಿಯ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಹಲವು ಹಿರಿಯ ನಾಯಕರ ವಿರುದ್ಧ ವಿರೋಧ ಪಕ್ಷಗಳು ತೀವ್ರ ವಾಗ್ದಾಳಿ ನಡೆಸಿದ್ದವು.

ನೊಯ್ಡಾದ ಸೆಕ್ಟರ್–93 'ಬಿ' ನಲ್ಲಿರುವ ಗ್ರ್ಯಾಂಡ್ ಓಮ್ಯಾಕ್ಸ್ ಸೊಸೈಟಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿಕೊಂಡು ತ್ಯಾಗಿ ನಿರ್ಮಿಸಿದ್ದ ಅಕ್ರಮ ಕಟ್ಟಡಗಳನ್ನು ಬುಲ್ಡೋಜರ್ ಬಳಸಿ ಪೊಲೀಸರು ಸೋಮವಾರ ಬೆಳಿಗ್ಗೆ ನೆಲಸಮ ಮಾಡಿದ್ದರು.

ಹೊಸ ಪಠ್ಯಕ್ರಮ: ಶಿಕ್ಷಣ ಸಚಿವಾಲಯದಿಂದ ಸಭೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಡಿ (ಎನ್‌ಸಿಎಫ್) ನೂತನ ಪಠ್ಯಕ್ರಮ ಹಾಗೂ ಶೈಕ್ಷಣಿಕ ವಿಷಯಗಳ ಪುನರ್ ರಚನೆಗೆ ಸಂಬಂಧಿಸಿ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಶಿಕ್ಷಣ ಸಚಿವಾಲಯವು ಮಂಗಳವಾರ ಅಂತರಸಚಿವಾಲಯ ಸಭೆ ನಡೆಸಿತು.

ಎನ್‌ಸಿಇಆರ್‌ಟಿ, ಚುನಾವಣಾ ಆಯೋಗ, ಐಸಿಎಆರ್, ಡಿಆರ್‌ಡಿಒ, ವಿವಿಧ ಸಚಿವಾಲಯಗಳಡಿ ಕಾರ್ಯನಿರ್ವಹಿಸುವ ಸಂಸ್ಥೆಗಳ ಹಿರಿಯ ಅಧಿಕಾರಿಗಳು ಹಾಗೂ ಸಚಿವಾಲಯಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದ ಈ ಸಭೆಯಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ಹೊಸ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವ ಕುರಿತು ಚರ್ಚಿಸಲಾಯಿತು ಎಂದು ಮೂಲಗಳು ಹೇಳಿವೆ.

'ವಿದ್ಯಾರ್ಥಿಗಳ ಕಲಿಕಾ ಹಂತಗಳು ಹಾಗೂ ಅವರ ಆಸಕ್ತಿಗೆ ತಕ್ಕಂತೆ ಪಠ್ಯಕ್ರಮವನ್ನು ರೂಪಿಸುವಲ್ಲಿ ವಿವಿಧ ಸಚಿವಾಲಯಗಳು ಹಾಗೂ ಸಂಸ್ಥೆಗಳು ಯಾವ ರೀತಿ ನೆರವು ನೀಡಬಹುದು ಎಂಬ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು'.

'ತೀವ್ರವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಕ್ಷೇತ್ರ, ನಾವೀನ್ಯತೆ, ಹವಾಮಾನ ಬದಲಾವಣೆ, ಭವಿಷ್ಯದಲ್ಲಿ ಅಗತ್ಯವೆನಿಸುವ ಕೌಶಲಗಳ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು'.

'ಹೊಸ ಪಠ್ಯಕ್ರಮಕ್ಕೆ ಸಂಬಂಧಿಸಿದ ಸಲಹೆ–ಸೂಚನೆಗಳನ್ನು ಎಲ್ಲ ಸಚಿವಾಲಯಗಳು ಎನ್‌ಸಿಇಆರ್‌ಟಿ ಹಾಗೂ ರಾಷ್ಟ್ರೀಯ ಸಂಚಾಲಕ ಸಮಿತಿಗೆ ಶೀಘ್ರವೇ ಕಳುಹಿಸಿಕೊಡಬೇಕು. ವೆಬ್–ಆ್ಯಪ್ ಮೂಲಕ ಜನರಿಂದಲೂ ಸಲಹೆ–ಸೂಚನೆಗಳನ್ನು ಆಹ್ವಾನಿಸುತ್ತಿದ್ದು, ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ಸಚಿವಾಲಯಗಳಿಗೆ ಮನವಿ ಮಾಡಲಾಯಿತು' ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಸಿ.ಎಂ ಯೋಗಿಗೆ ಜೀವ ಬೆದರಿಕೆ

ಲಖನೌ (ಪಿಟಿಐ): ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಹತ್ಯೆ ಮಾಡುವುದಾಗಿ ಉತ್ತರ ಪ್ರದೇಶ ಪೊಲೀಸ್ ಸಹಾಯವಾಣಿ ವಾಟ್ಸ್‌ಆ್ಯಪ್‌ಗೆ ಬೆದರಿಕೆ ಸಂದೇಶ ಬಂದಿದ್ದು, ಸುಶಾಂತ್ ಗಾಲ್ಫ್ ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸ್ ಇಲಾಖೆಯ '112' ಸಹಾಯವಾಣಿಯ ವಾಟ್ಸ್‌ಆ್ಯಪ್‌ಗೆ ಶಾಹಿದ್ ಎಂಬ ವ್ಯಕ್ತಿಯಿಂದ ಸಂದೇಶ ಬಂದಿದೆ. ಬಾಂಬ್ ಹಾಕಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದು, ಆರೋಪಿ ಪತ್ತೆಗೆ ತಂಡ ರಚಿಸಲಾಗಿದೆ ಎಂದಿದ್ದಾರೆ.

18 ವರ್ಷ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್

ಕೋರ್ಬೆವ್ಯಾಕ್ಸ್ ನೀಡಲು ಕೇಂದ್ರ ಚಿಂತನೆ



ನವದೆಹಲಿ (ಪಿಟಿಐ): '18 ವರ್ಷ ಮೇಲ್ಪಟ್ಟವರ ಪೈಕಿ ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್ ಲಸಿಕೆಯ ಎರಡು ಡೋಸ್‌ಗಳನ್ನೂ ಪಡೆದುಕೊಂಡಿರುವವರಿಗೆ ಮುನ್ನೆಚ್ಚರಿಕೆ ಡೋಸ್ ಆಗಿ ಕೋರ್ಬೆವ್ಯಾಕ್ಸ್ ನೀಡಲು ಚಿಂತಿಸಲಾಗಿದ್ದು, ಕೇಂದ್ರ ಆರೋಗ್ಯ ಸಚಿವಾಲಯವು ಶೀಘ್ರವೇ ಇದಕ್ಕೆ ಅನುಮತಿ ನೀಡುವ ಸಾಧ್ಯತೆ ಇದೆ' ಎಂದು ಮೂಲಗಳು ಮಂಗಳವಾರ ತಿಳಿಸಿವೆ.

'ಕೋವಿಡ್–19 ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯು (ಎನ್‌ಟಿಎಜಿಐ) ಕೋರ್ಬೆವ್ಯಾಕ್ಸ್ ಲಸಿಕೆಯನ್ನು ಮುನ್ನೆಚ್ಚರಿಕೆ ಡೋಸ್ ಆಗಿ ನೀಡಲು ಶಿಫಾರಸು ಮಾಡಿದ್ದು, ಇದರ ಆಧಾರದಲ್ಲಿ ಆರೋಗ್ಯ ಸಚಿವಾಲಯ ಅನುಮತಿ ನೀಡುವ ಸಾಧ್ಯತೆ ಇದೆ' ಎಂದು ಮೂಲಗಳು ಹೇಳಿವೆ.

'ಕೋವ್ಯಾಕ್ಸಿನ್, ಕೋವಿಶೀಲ್ಡ್ ಪಡೆದಿದ್ದವರಿಗೆ ಪ್ರಾಯೋಗಿಕವಾಗಿ ಕೋರ್ಬೆವ್ಯಾಕ್ಸ್ ನೀಡಿದ್ದಾಗ ಅವರ ದೇಹದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಪ್ರತಿಕಾಯಗಳು ವೃದ್ಧಿಯಾಗಿದ್ದನ್ನು ಕೋವಿಡ್–19 ಕಾರ್ಯಪಡೆ ಗಮನಿಸಿತ್ತು. ಈ ಲಸಿಕೆಯನ್ನು ಮುನ್ನೆಚ್ಚರಿಕೆ ಡೋಸ್ ಆಗಿ ನೀಡಲು ಭಾರತೀಯ ಔಷಧ ನಿಯಂತ್ರಣ ಮಹಾನಿರ್ದೇಶನಾಲಯ (ಡಿಸಿಜಿಐ) ಜೂನ್ 4ರಂದೇ ಒಪ್ಪಿಗೆ ನೀಡಿತ್ತು' ಎಂದೂ ಮೂಲಗಳು ಮಾಹಿತಿ ನೀಡಿವೆ.

ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ನಿಬಂಧನೆ ಸಡಿಲಿಸಲು ಚಿಂತನೆ

ನವದೆಹಲಿ (ಪಿಟಿಐ): ಭಾರತಕ್ಕೆ ಬರುವ ಮೊದಲು ಅಂತರರಾಷ್ಟ್ರೀಯ ಪ್ರಯಾಣಿಕರು ತಮ್ಮ ಕೋವಿಡ್ ಲಸಿಕೆ ಪ್ರಮಾಣಪತ್ರ ಅಥವಾ ಆರ್‌ಟಿ-ಪಿಸಿಆರ್ ನೆಗೆಟಿವ್ ವರದಿಯ ಪ್ರತಿಯನ್ನು ಏರ್ ಸುವಿಧಾ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕಾದ ನಿಬಂಧನೆಯನ್ನು ತೆಗೆದುಹಾಕಲು ಸರ್ಕಾರ ಚಿಂತಿಸುತ್ತಿದೆ.

ಆದರೆ, ಆನ್‌ಲೈನ್ ಪೋರ್ಟಲ್‌ನಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಸ್ವಯಂ ಘೋಷಣೆ ಅರ್ಜಿಯನ್ನು ಭರ್ತಿ ಮಾಡುವ ಆದೇಶವು ಮುಂದುವರಿಯುತ್ತದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಭರ್ತಿ ಮಾಡಲು ಹಾಗೂ ಪ್ರಮಾಣಪತ್ರಗಳ ಪ್ರತಿಗಳನ್ನು ಅಪ್‌ಲೋಡ್ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ ಪ್ರಯಾಣಿಕರು ದೂರು ನೀಡಿದ್ದಾರೆ. ನಿಬಂಧನೆಯನ್ನು ತೆಗೆದುಹಾಕುವುದರಿಂದ ಅವರಿಗೆ ಅನುಕೂಲವಾಗಬಹುದು ಎಂದೂ ಮೂಲಗಳು ತಿಳಿಸಿವೆ.

ಸಿ.ಎಂ ಸ್ಥಾನ: ಕಾಂಗ್ರೆಸ್–ಬಿಜೆಪಿ ವಾಕ್ಸಮರ

‘3ನೇ ಸಿಎಂ’ ಸೀಟು ಹತ್ತುವ ಕಾಲ ಕರ್ನಾಟಕದಲ್ಲಿ ಸನ್ನಿಹಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಮಿತ್ ಶಾ ರಾಜ್ಯಕ್ಕೆ ಬಂದು ಹೋದ ನಂತರ ಬಿಜೆಪಿಯಲ್ಲಿ ಮೋಡ ಕವಿದ ವಾತಾವರಣವಿದೆ. ಶೇ 40ರಷ್ಟು ಕಮಿಷನ್ ಸರ್ಕಾರದಲ್ಲಿ ‘3ನೇ ಸಿಎಂ’ ಸೀಟು ಹತ್ತುವ ಕಾಲ ಸನ್ನಿಹಿತವಾಗಿದೆ. ಬೊಮ್ಮಾಯಿ ಅವರ ಗೊಂಬೆಯಾಟ ಮುಗಿಯುವ ಹಂತಕ್ಕೆ ಬಂದಿದೆ’ ಎಂದು ರಾಜ್ಯ ಕಾಂಗ್ರೆಸ್ ಘಟಕ ಭವಿಷ್ಯ ನುಡಿದಿದೆ.

ರಾಜ್ಯಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ ನೀಡಿ ಮರಳಿದ ಬೆನ್ನಲ್ಲೇ ಮುಖ್ಯಮಂತ್ರಿ ಬದಲಾಗಲಿದ್ದಾರೆ ಎಂಬ ವದಂತಿಗೆ ರೆಕ್ಕೆಪುಕ್ಕ ಬಂದಿದೆ. ಅದರ ನಡುವೆಯೇ ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, ‘ಅಮಿತ್ ಶಾ ಅವರ ಭೇಟಿ ಬಗ್ಗೆ ಸರ್ಕಾರದ ಯಾವೊಬ್ಬ ಸಚಿವರು ಮಾತಾಡದಿರುವುದು, ಸಂಭ್ರಮವಿಲ್ಲದಿರುವುದೇ ಇದಕ್ಕೆ ನಿದರ್ಶನ’ ಎಂದು ಲೇವಡಿ ಮಾಡಿದೆ.

‘ಬೊಮ್ಮಾಯಿಯವರೇ, ಸಿಎಂ ಹುದ್ದೆಗೆ ‘ಕತ್ತಿ ವರಸೆ’ ಶುರುವಾಗಿದೆ ಎಂದರೆ ನೀವು ಕುರ್ಚಿಯಿಂದ ಇಳಿಯಲು ದಿನಗಳನ್ನಲ್ಲ, ಗಂಟೆಗಳನ್ನು ಎಣಿಸುತ್ತಿದ್ದೀರಿ ಎನಿಸುತ್ತಿದೆ. ಬೊಮ್ಮಾಯಿಯವರೇ, ಸಿಎಂ ಬದಲಾವಣೆ ಎಂಬ ಬೆಳವಣಿಗೆಗೆ ಕಾರಣವೇನು. ನಿಮ್ಮ ಆಡಳಿತ ವೈಫಲ್ಯವೇ ಅಥವಾ ನಾಯಕರ ನಡುವಿನ ಕಾದಾಟವೇ ಅಥವಾ ಯಡಿಯೂರಪ್ಪನವರ ಕೋಪವೇ’ ಎಂದು ಪ್ರಶ್ನಿಸಿದೆ.

‘ದಂಧೆಕೋರರು ಆಡಿಸುವ ಬೊಂಬೆಯೇ’

‘ಸಿಎಂ ಬೊಮ್ಮಾಯಿ ಅವರೇ, ಬಿಜೆಪಿಯ ನಕಲಿ ನೋಟ್ ದಂಧೆಕೋರರೊಂದಿಗೆ ನಿಮ್ಮದೇನು ಸಂಬಂಧ. ಸಮಾಜಘಾತುಕರು, ಬಿಟ್ ಕಾಯಿನ್ ದಂಧೆಕೋರರು, ಶೇ 40ರಷ್ಟು ಕಮಿಷನ್ ಗಿರಾಕಿಗಳು, ನೇಮಕಾತಿ ಅಕ್ರಮ ನಡೆಸುವವರು, ನಕಲಿ ನೋಟ್ ದಂಧೆಕೋರರು ಆಡಿಸಿದಂತೆ ಆಡುವ ಬೊಂಬೆ ಮುಖ್ಯಮಂತ್ರಿ ಮಾತ್ರವೇ. ಸಿಎಂ ಕುರ್ಚಿ ಉಳಿಸಿಕೊಳ್ಳಲು ಈ ಎಲ್ಲ ಬಗೆಯ ಭ್ರಷ್ಟರಿಗೆ ಬೆಂಬಲವಾಗಿ ನಿಂತಿದ್ದೀರಾ’ ಎಂದು ವ್ಯಂಗ್ಯವಾಗಿ ಕೇಳಿದೆ.

‘ಎಷ್ಟು ಪ್ರಯತ್ನಿಸಿದರೂ ಜನತಾ ಪರಿವಾರಿಯಾಗಿದ್ದ ಬೊಮ್ಮಾಯಿ ಅವರನ್ನು ಕೇಶವ ಕೃಪಾದವರು ‘ಸಂಘ ಪರಿವಾರಿ’ಯಾಗಿ ಸ್ವೀಕರಿಸಲು ಒಪ್ಪಲೇ ಇಲ್ಲ. ಆಡಿಸಿ ನೋಡು ಎಂದು ಗೊಂಬೆಯಂತಿದ್ದ ಬೊಮ್ಮಾಯಿಯವರನ್ನು ಬೀಳಿಸಿ ನೋಡಲು ಹೊರಟಿದೆ ಬಿಜೆಪಿ ಹೈಕಮಾಂಡ್. ಈ ಬದಲಾವಣೆ ಸರ್ಕಾರದ ವೈಫಲ್ಯಕ್ಕೋ ಅಥವಾ 3 ಸಿಎಂ ಎಂಬ ಸಂಪ್ರದಾಯಕ್ಕೋ’ ಎಂಬ ಬಗ್ಗೆ ಬಿಜೆಪಿಯವರೇ ಉತ್ತರಿಸಬೇಕು’ ಎಂದೂ ಆಗ್ರಹಿಸಿದೆ.

‘ಸಿಎಂ ಹುದ್ದೆಗೆ ಬೀದಿ ಕಚ್ಚಾಟ ‘ಕೈ’ ಸಂಸ್ಕೃತಿ’

ಬೆಂಗಳೂರು: ‘ಖಾಲಿ ಇಲ್ಲದ ಮುಖ್ಯಮಂತ್ರಿ ಹುದ್ದೆಗಾಗಿ ಪ್ರತಿ ದಿನ ಹಾದಿ– ಬೀದಿಯಲ್ಲಿ ಕಚ್ಚಾಡುವುದು ಕಾಂಗ್ರೆಸ್ ನಾಯಕರ ಸಂಸ್ಕೃತಿ. ಈಗ ಈಗ ಆ ಪಕ್ಷದ ನಾಯಕರಿಗೆ ಬುದ್ಧಿ ಭ್ರಮಣೆಯಾಗಿದ್ದು, ತಿರುಕನ ಕನಸು ಕಾಣುತ್ತಿದ್ದಾರೆ’ ಎಂದು ಕಂದಾಯ ಸಚಿವ ಆರ್.ಅಶೋಕ ಕಿಡಿಕಾರಿದ್ದಾರೆ.

‘ಕಾಂಗ್ರೆಸ್ಸಿನವರು ಮೂರನೇ ಸಿಎಂ ಎಂದು ಟ್ವೀಟ್ ಮಾಡಿರುವುದು ಹಾಸ್ಯಾಸ್ಪದ’ ಎಂದು ತಿರುಗೇಟು ನೀಡಿರುವ ಅವರು, ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲೇ ಮುಂದಿನ ಚುನಾವಣೆ ಎದುರಿಸುತ್ತೇವೆ ಎಂದಿದ್ದಾರೆ.

‘ಅಮಿತ್ ಶಾ ಅವರು ಬಂದಾಗ ಎಲ್ಲ ಸಭೆಗಳಲ್ಲೂ ಹಾಜರಿದ್ದೆ. ಮುಖ್ಯಮಂತ್ರಿ ಅಥವಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಬಗ್ಗೆ ಚರ್ಚೆಯೇ ನಡೆದಿಲ್ಲ’ ಎಂದೂ ಹೇಳಿದ್ದಾರೆ.

ಪೂರ್ಣಾವಧಿಗೆ ಬೊಮ್ಮಾಯಿ: ನಳಿನ್

ಮಂಗಳೂರು: ‘ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿ ಯಾವುದೇ ಚರ್ಚೆ ನಡೆದಿಲ್ಲ. ಬೊಮ್ಮಾಯಿ ಅವರು ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ಮುಂಬರುವ ಚುನಾವಣೆಯನ್ನು ಬಿ.ಎಸ್. ಯಡಿಯೂರಪ್ಪ ಅವರ ಮಾರ್ಗದರ್ಶನದಲ್ಲಿ, ಬೊಮ್ಮಾಯಿ ಅವರ ನೇತೃತ್ವದಲ್ಲಿ ಎದುರಿಸಲಿದ್ದೇವೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಬೊಮ್ಮಾಯಿ ಪದಚ್ಯುತಿ ಕುರಿತು ಕಾಂಗ್ರೆಸ್ ಟ್ವೀಟ್ ಮಾಡಿರುವುದಕ್ಕೆ ಇಲ್ಲಿ ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ಗೊಂದಲ ಸೃಷ್ಟಿಸುವ ಕಾಂಗ್ರೆಸ್ ಆಟ ನಡೆಯದು. ಕಾಂಗ್ರೆಸ್ ಮೊದಲು ತನ್ನಲೊಳಗಿನ ಗೊಂದಲ ಬಗೆಹರಿಸಿ ಒಟ್ಟಾಗಿ ಚುನಾವಣೆ ಎದುರಿಸಲಿ. ಅವರ ಸ್ಥಿತಿ ಏನು ಎಂಬುದು ಮುಂದಿನ ಚುನಾವಣಾ ಫಲಿತಾಂಶದಲ್ಲಿ ಗೊತ್ತಾಗಲಿದೆ’ ಎಂದರು.

ಕಾಂಗ್ರೆಸ್‌ಗೆ ಇತರರ ಮನೆ ಕೆಡಿಸುವ ಚಿಂತೆ :ಸುನಿಲ್

‘ಕಾಂಗ್ರೆಸ್ ಪಕ್ಷದ ಮನೆಯೇ ಕೆಟ್ಟು ಹೋಗಿದೆ. ಅಲ್ಲಿರುವವರಿಗೆ ಸದಾ ಕಾಲ ಬೇರೆಯವರ ಮನೆ ಕೆಡಿಸುವ ಚಿಂತೆ’ ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ಟೀಕಿಸಿದ್ದಾರೆ.

‘ಬಿಜೆಪಿ ಸರ್ಕಾರದ ಸಾಧನೆಗಳ ಕುರಿತು ಮಾತನಾಡಲು ಕಾಂಗ್ರೆಸ್‌ಗೆ ಸಾಧ್ಯವಾಗುತ್ತಿಲ್ಲ. ಬಿಜೆಪಿಯ ಮನೆಯನ್ನು ಕೆಡಿಸುವುದು ಹೇಗೆ ಎಂಬ ಚಿಂತೆಯಲ್ಲಿ ಆ ಪಕ್ಷ ಇದೆ. ಅದಕ್ಕಾಗಿ ಕೇವಲ ಊಹಾಪೋಹಗಳ ಮೇಲೆ ರಾಜಕಾರಣ ಮಾಡುತ್ತಿದೆ’ ಎಂದು ಟೀಕಿಸಿದ್ದಾರೆ.

ಬೊಮ್ಮಾಯಿ ನೇತೃತ್ವದಲ್ಲೇ ಚುನಾವಣೆ ಎದುರಿಸುತ್ತೇವೆ ಎಂದು ನಮ್ಮ ಪಕ್ಷದ ಹೈಕಮಾಂಡ್ ಹೇಳಿದೆ. ಕಾಂಗ್ರೆಸ್ ನಾಯಕರಿಗೆ ತಾಕತ್ತಿದ್ದರೆ ಯಾರ ನೇತೃತ್ವದಲ್ಲಿ ಚುನಾವಣೆಗೆ ಹೋಗುತ್ತಾರೆ ಎನ್ನುವುದನ್ನು ಹೇಳಲಿ’ ಎಂದು ಸವಾಲು ಹಾಕಿದ್ದಾರೆ.

‘ಬದಲಿಸುವ ಚಾಳಿ ಕಾಂಗ್ರೆಸ್‌ದು’

ಮುಖ್ಯಮಂತ್ರಿಯನ್ನು ಪದೇ ಪದೇ ತಮ್ಮಿಷ್ಟಕ್ಕೆ ತಕ್ಕಂತೆ ಬದಲಿಸುವ ಚಾಳಿ ಇರುವುದು ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಹೇಳಿದ್ದಾರೆ.

ಬೊಮ್ಮಾಯಿ ಜನಪರ ಆಡಳಿತವನ್ನು ನೀಡಿದ್ದಾರೆ. ಮುಂದೆಯೂ ಸುಭದ್ರ ಸರ್ಕಾರ ನೀಡುವುದರಲ್ಲಿ ಯಾವುದೇ ಸಂದೇಹವಿಲ್ಲ. ಬೊಮ್ಮಾಯಿ ಅವರ ಸಾಧನೆ ಕಾಂಗ್ರೆಸ್‌ಗೆ ಅಜೀರ್ಣವಾಗಿದೆ ಎಂದಿದ್ದಾರೆ.

‘ಕಾಂಗ್ರೆಸ್‌ಗೆ ಶರ್ಟ್ ಬದಲಾಯಿಸಿದಂತೆ’

‘ದೇವರಾಜಅರಸು ಇನ್ನೂ ಅಧಿಕಾರದಲ್ಲಿರುವಾಗಲೇ ಗುಂಡೂರಾವ್ ಅವರನ್ನು ದೆಹಲಿಗೆ ಕರೆಸಿಕೊಂಡು ನೀವೇ ಸಿ.ಎಂ ಎಂದು ಇಂದಿರಾಗಾಂಧಿ ಹೇಳಿದ್ದರು. ಶರ್ಟ್ ಬದಲಿಸಿದಷ್ಟೇ ವೇಗವಾಗಿ ವಿರೇಂದ್ರಪಾಟೀಲ ಅವರನ್ನು ಸಿಎಂ ಸ್ಥಾನದಿಂದ ಇಳಿಸಿದ್ದು ರಾಜೀವ್ ಗಾಂಧಿ’ ಎಂದು ಸಚಿವ ಡಾ.ಕೆ.ಸುಧಾಕರ್ ಟ್ವೀಟ್ ಮಾಡಿದ್ದಾರೆ.



ಅಲೆಮಾರಿ, ವೇಷಧಾರಿ

ಕೊಪ್ಪಳ ಜಿಲ್ಲೆಯ ಕುದುರಿಮೋತಿಯಲ್ಲಿ ಮಂಗಳವಾರ ನಡೆದ ಅಲೆಮಾರಿ ಬೇಡ, ಬುಡ್ಗ, ಜಂಗಮರ ರಾಜ್ಯಮಟ್ಟದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಸಮಾಜದ ಕಲಾವಿದರು –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

‘ಜಾತಿ ಪ್ರಮಾಣಪತ್ರ: ವಾರದೊಳಗೆ ಸಭೆ’

ಕೊಪ್ಪಳ: ‘ವೀರಶೈವ ಲಿಂಗಾಯತ ಜಂಗಮರಿಗೆ ‘ಬೇಡ ಜಂಗಮ’ ಜಾತಿ ಪ್ರಮಾಣಪತ್ರ ನೀಡುತ್ತಿರುವ ಬಗ್ಗೆ ಅಲೆಮಾರಿ ಸಮುದಾಯ ದವರ ಆಕ್ಷೇಪಕುರಿತು ವಾರದಲ್ಲಿ ಸಭೆ ನಡೆಸಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಕುಕನೂರು ತಾಲ್ಲೂಕಿನ ಕುದುರಿಮೋತಿಯಲ್ಲಿ ಮಂಗಳವಾರ ಅಲೆಮಾರಿ ಬೇಡ, ಬುಡ್ಗ, ಜಂಗಮರ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ‘ನಿಮ್ಮ ಸ್ಥಿತಿಗತಿ ಖುದ್ದು ನೋಡಿರುವೆ. ಸಮಾಜದ ಪ್ರಮುಖರ ಸಭೆ ನಡೆಸಿ ಸಮಸ್ಯೆ ಪರಿಹರಿಸಲಾಗುವುದು’ ಎಂದರು.

ರಾಜ್ಯ ಬೇಡ, ಬುಡ್ಗ ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಣ್ಣಮಾರೆಪ್ಪ ಮಾತನಾಡಿ, ‘ಲಿಂಗಾಯತ ಜಂಗಮರು ನೀಡಿದ ಭಿಕ್ಷೆ ತಿಂದು, ನಾವು ಬದುಕಿದ್ದೇವೆ. ನಮ್ಮ ಅನ್ನ ಕಿತ್ತುಕೊಳ್ಳಲು ಬೇರೆಯವರಿಗೆ ಅವಕಾಶ ಕೊಡಬಾರದು’ ಎಂದರು.

ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು, ‘ಅಲೆಮಾರಿಗಳ ಅನ್ನಕ್ಕೆ ವಕೀಲ ಬಿ.ಡಿ.ಹಿರೇಮಠ ಕೈ ಹಾಕಿದ್ದಾರೆ. ಅವರು ತಿನ್ನುವ ಮಾಂಸಾಹಾರ ತಿಂದು ತೋರಿಸಲಿ. ಹುಸಿ ಹಕ್ಕು ಕೇಳುವುದು ಬಸವಣ್ಣನವರಿಗೆ ಮಾಡುವ ಅವಮಾನ’ ಎಂದರು.

ಸಂಕ್ಷಿಪ್ತ ಸುದ್ದಿ

ನಟ ದರ್ಶನ್ ವಿರುದ್ಧ ಎನ್‌ಸಿಆರ್

ಬೆಂಗಳೂರು: ಚಿತ್ರ ನಿರ್ಮಾಪಕ ಭರತ್ ವಿಷ್ಣುಕಾಂತ್ ಅವರಿಗೆ ಜೀವ ಬೆದರಿಕೆಯೊಡ್ಡಿದ ಆರೋಪದಡಿ ನಟ ದರ್ಶನ್ ವಿರುದ್ಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಎನ್‌ಸಿಆರ್ ದಾಖಲಾಗಿದೆ.

‘ಒಂದೂವರೆ ವರ್ಷದ ಹಿಂದೆ ನಡೆದಿರುವ ಮೊಬೈಲ್ ಸಂಭಾಷಣೆ ಆಧರಿಸಿ ಭರತ್ ಆಗಸ್ಟ್ 5 ರಂದು ದೂರು ನೀಡಿದ್ದಾರೆ. ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಂಡು ಸ್ವೀಕೃತಿ ನೀಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಭರತ್ ಅವರು ‘ಭಗವಾನ್ ಶ್ರೀ ಕೃಷ್ಣ ಪರಮಾತ್ಮ’ ಹೆಸರಿನ ಸಿನಿಮಾಗೆ ಸಂಬಂಧಿಸಿದ ಬೆದರಿಕೆ ಒಡ್ಡಿದ್ದರು ಎನ್ನಲಾಗಿದೆ. ಭರತ್, ಒಂದೂವರೆ ವರ್ಷದ ಬಳಿಕ ದೂರು ನೀಡಿದ್ದು ಏಕೆ ಎಂಬ ಪ್ರಶ್ನೆ ಮೂಡಿದೆ’ ಎಂದೂ ತಿಳಿಸಿವೆ.

ರಾಯರ ಆರಾಧನೆ

ರಾಯಚೂರು: ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿ 351ನೇ ಆರಾಧನಾ ಮಹೋತ್ಸವ ಆ.10 ರಿಂದ ಆರಂಭವಾಗಲಿದೆ. 12 ರಂದು ಪೂರ್ವಾರಾಧನೆ, 13ರಂದು ಮಧ್ಯಾರಾಧನೆ, 14 ರಂದು ಉತ್ತಾರಾರಾಧನೆ ಜೊತೆಗೆ ಮಹಾರಥೋತ್ಸವ ನೆರವೇರಲಿದೆ.

ಮಂತ್ರಾಲಯದಲ್ಲಿ ₹ 4 ಕೋಟಿ ವೆಚ್ಚದ ಕರ್ನಾಟಕದ ಯಾತ್ರಿ ನಿವಾಸ ಎರಡನೇ ಘಟಕವನ್ನು ಮಂಗಳವಾರ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಉದ್ಘಾಟಿಸಿದರು.

ಪ್ರವೀಣ್ ಹತ್ಯೆ: ಮತ್ತೊಬ್ಬ ಬಂಧನ

ಸುಳ್ಯ (ದಕ್ಷಿಣ ಕನ್ನಡ): ಬಿಜೆಪಿ ಯುವ ಮೋರ್ಚಾದ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಸುಳ್ಯ ಜಟ್ಟಿಪಳ್ಳದ ಅಬ್ದುಲ್ ಕಬೀರ್ ಸಿ.ಎ.(33) ಎಂಬಾತನನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಈ ಮೂಲಕ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಏಳಕ್ಕೆ ಏರಿದೆ. ಬಂಧಿತರೆಲ್ಲರೂ ಕೃತ್ಯಕ್ಕೆ ಸಂಚು ರೂಪಿಸಲು ನೆರವಾದವರು. ಆದರೆ, ಕೃತ್ಯದಲ್ಲಿ ನೇರವಾಗಿ ಭಾಗಿಯಾದ ಆರೋಪಿಗಳ ಬಂಧನ ಇನ್ನೂ ಸಾಧ್ಯವಾಗಿಲ್ಲ ಎಂದು ತಿಳಿಸಿವೆ.

ಕ್ಷುಲ್ಲಕ ಕಾರಣಕ್ಕೆ ಚಾಕು ಇರಿತ

ಗದಗ: ತಾಲ್ಲೂಕಿನ ಮಲ್ಲಸಮುದ್ರ ಗ್ರಾಮದಲ್ಲಿ ಮಂಗಳವಾರ ಮೊಹರಂ ಮೆರವಣಿಗೆಯಲ್ಲಿ ಕ್ಷುಲ್ಲಕ ಕಾರಣಕ್ಕೆ ಇಬ್ಬರಿಗೆ ಚಾಕುವಿನಿಂದ ಇರಿಯಲಾಗಿದೆ.

ತೌಸಿಫ್ ಹೊಸಮನಿ (23) ಮತ್ತು ಮುಸ್ತಾಕ್ ಹೊಸಮನಿ (24) ಇರಿತಕ್ಕೆ ಒಳಗಾಗಿದ್ದಾರೆ.

‘ಮೊಹರಂ ಮೆರವಣಿಗೆ ಸಂದರ್ಭದಲ್ಲಿ ಕಾಲು ತುಳಿದ ಎಂಬ ಕಾರಣಕ್ಕೆ ಈ ಘಟನೆ ನಡೆದಿದೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಶಿವಪ್ರಕಾಶ್ ದೇವರಾಜು ತಿಳಿಸಿದ್ದಾರೆ.

‘ಮೆರವಣಿಗೆ ವೇಳೆ ತೌಸಿಫ್ ಅಲಿಯಾಸ್ ದಾದಾಪೀರ್ ಎಂಬುವರು ಯಲ್ಲಪ್ಪನ ಕಾಲು ತುಳಿದಿದ್ದಾರೆ. ಇದಕ್ಕೆ ಜಗಳ ಆರಂಭಗೊಂಡಿದ್ದು, ಅತಿರೇಕಕ್ಕೆ ಹೋಗಿ ಚಾಕು ಇರಿತ ಆಗಿದೆ. ಈ ಸಂಬಂಧ ಸೋಮು ಗುಡಿ ಮತ್ತು ಯಲ್ಲಪ್ಪ ಅವರನ್ನು ವಶಕ್ಕೆ ಪಡೆಯಲಾಗಿದೆ. ಸೋಮು ಶ್ರೀರಾಮ ಸೇನೆ ಕಾರ್ಯಕರ್ತ ಎನ್ನಲಾಗಿದೆ’ ಎಂದು ಡಿವೈಎಸ್‌ಪಿ ಶಿವಾನಂದ ಪವಾಡ ಶೆಟ್ಟರ ತಿಳಿಸಿದ್ದಾರೆ. ಜಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ತೌಸಿಫ್ ಸ್ಥಿತಿ ಗಂಭೀರವಾಗಿದೆ ಎಂದು ಹೇಳಿದ್ದಾರೆ.

ಉಡುಪಿಯ ಉದ್ಯಮಿ ಭಾಸ್ಕರ್ ಶೆಟ್ಟಿ ಕೊಲೆ ಪ್ರಕರಣ

ಹೈಕೋರ್ಟ್ ಅಭಿಪ್ರಾಯ ತೆಗೆದು ಹಾಕಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾಮೀನು ಅರ್ಜಿಯ ವಿಚಾರಣೆಯ ವೇಳೆ ಯಾವುದೇ ಹೈಕೋರ್ಟ್ ಪ್ರಕರಣದ ಸಾಕ್ಷಿಗಳ ಕುರಿತು ಚರ್ಚೆ ನಡೆಸುವುದು ಅಥವಾ ಶಿಕ್ಷೆಯನ್ನು ಅಮಾನತಿನಲ್ಲಿ ಇಡುವ ಆದೇಶ ಹೊರಡಿಸುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಇದೇ ವೇಳೆ, ಉಡುಪಿಯ ಉದ್ಯಮಿ ಭಾಸ್ಕರ್ ಶೆಟ್ಟಿ ಕೊಲೆ ಪ್ರಕರಣದಲ್ಲಿ ಅಪರಾಧಿ ಪತ್ನಿಗೆ ಜಾಮೀನು ನೀಡುವ ಸಂದರ್ಭದಲ್ಲಿ ಕರ್ನಾಟಕ ಹೈಕೋರ್ಟ್ ನ್ಯಾಯಪೀಠ ನೀಡಿರುವ ಅಭಿಪ್ರಾಯಗಳನ್ನು ತೆಗೆದು ಹಾಕುವಂತೆ ಸುಪ್ರೀಂಕೋರ್ಟ್ ಸೂಚಿಸಿದೆ.

ಹತ್ಯೆಗೀಡಾದ ಭಾಸ್ಕರ್ ಶೆಟ್ಟಿ ತಾಯಿ ಗುಲಾಬಿ ಶೆಟ್ಟಿ ಪರವಾಗಿ ವಕೀಲ ಸಂಜಯ್ ಎಂ. ನುಲಿ ಮಂಡಿಸಿದ ವಾದವನ್ನು ಮಾನ್ಯ ಮಾಡಿದ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಪಿ.ಎಸ್.ನರಸಿಂಹ ಅವರನ್ನು ಒಳಗೊಂಡ ಪೀಠ ಈ ನಿರ್ದೇಶನ ನೀಡಿದೆ.

ಜಾಮೀನು ಅರ್ಜಿಯ ವಿಚಾರಣೆಯ ವೇಳೆಗೆ ಹೈಕೋರ್ಟ್, ಮೃತರ ವಿಲ್‌ನ ಸಿಂಧುತ್ವದ ಬಗ್ಗೆ ವಿಚಾರಣೆ ನಡೆಸಿತ್ತು. ಜಾಮೀನು ಅರ್ಜಿಗೆ ಸಂಬಂಧಿಸಿದ ಸಂಬಂಧವಿಲ್ಲದ ವಿಚಾರಗಳನ್ನು ವಿಚಾರಣೆ ವೇಳೆ ಪ್ರಸ್ತಾಪಿಸಲಾಗಿದೆ ಎಂದು ಅರ್ಜಿದಾರರ ವಕೀಲರು ಗಮನ ಸೆಳೆದರು. ಅವರ ವಾದವನ್ನು ಸಮ್ಮತಿಸಿದ ಸುಪ್ರೀಂಕೋರ್ಟ್, ಹೈಕೋರ್ಟ್ ತನ್ನ ವ್ಯಾಪ್ತಿ ಮೀರಿ ಪ್ರಕರಣದ ವಿಚಾರಣೆ ನಡೆಸಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿತು. ಜತೆಗೆ, ಮೇಲ್ಮನವಿಯ ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಹೈಕೋರ್ಟ್‌ಗೆ ಸೂಚಿಸಿದೆ.

ಅಪರಾಧಿ ರಾಜೇಶ್ವರಿ ಶೆಟ್ಟಿ ಹಾಗೂ ಇನ್ನೊಬ್ಬ ಅಪರಾಧಿಯ ಪರವಾಗಿ ಹಿರಿಯ ವಕೀಲ ವಿಕಾಸ್ ವಾದ ಮಂಡಿಸಿದರು.

2016ರ ಜು.28ರಂದು ಮಧ್ಯಾಹ್ನ 3 ಗಂಟೆಗೆ ಇಂದ್ರಾಳಿಯ ಮನೆಯಲ್ಲಿ ಭಾಸ್ಕರ್ ಶೆಟ್ಟಿ ಅವರ ಕೊಲೆಯಾಗಿತ್ತು. ಬಳಿಕ ಮೃತದೇಹವನ್ನು ನಂದಳಿಕೆಯಲ್ಲಿರುವ ನಿರಂಜನ ಭಟ್ ಮನೆಯಲ್ಲಿನ ಹೋಮ ಕುಂಡದಲ್ಲಿ ಹಾಕಿ ಸುಟ್ಟಿದ್ದರು. ಸಾಕ್ಷ್ಯನಾಶ ಮಾಡಲು ಅವಶೇಷಗಳನ್ನು ನಂದಳಿಕೆ ಬಳಿಯ ನೀರಿಗೆ ಹಾಕಲಾಗಿತ್ತು.

ಜು.31ರಂದು ಭಾಸ್ಕರ್ ಶೆಟ್ಟಿ ತಾಯಿ, ತನ್ನ ಮಗ ನಾಪತ್ತೆಯಾಗಿರುವುದಾಗಿ ಮಣಿಪಾಲ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪ್ರಕರಣದ ತನಿಖೆಗೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದರು. ಬಳಿಕ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ಉಡುಪಿಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಮೂವರು ಆರೋಪಿಗಳಿಗೆ 2021ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಿತ್ತು. ಭಾಸ್ಕರ್ ಶೆಟ್ಟಿ ಅವರ ಪತ್ನಿ ರಾಜೇಶ್ವರಿ ಶೆಟ್ಟಿ, ಪುತ್ರ ನವನೀತ್, ಜ್ಯೋತಿಷಿ ನಿರಂಜನ್ ಭಟ್ ಶಿಕ್ಷೆಗೆ ಒಳಗಾದ ಅಪರಾಧಿಗಳು. ಇದನ್ನು ಪ್ರಶ್ನಿಸಿ ಅಪರಾಧಿಗಳು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

‘ದಲಿತರಿಗೆ ಪ್ರತ್ಯೇಕ ಸಿ.ಎಂ ಸ್ಥಾನ ಇಲ್ಲ’

ಆನೇಕಲ್: ‘ರಾಜ್ಯದಲ್ಲಿ ಆರೂವರೆ ಕೋಟಿ ಜನರಿದ್ದಾರೆ. ಯಾರೇ ಸಿ.ಎಂ ಆದರೂ ಇಷ್ಟು ಜನರಿಗಾಗಿಯೇ ಆಗಬೇಕು. ಹಾಗಾಗಿ, ದಲಿತರಿಗೆ ಪ್ರತ್ಯೇಕ ಮುಖ್ಯಮಂತ್ರಿ ಸ್ಥಾನ ಇಲ್ಲ’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ತಾಲ್ಲೂಕಿನ ಸರ್ಜಾಪುರದಲ್ಲಿ ಮಂಗಳವಾರ ಸ್ವಾಭಿಮಾನಿ ಮಾದಿಗ ಮಹಾಸಭಾದ ಆನೇಕಲ್ ಘಟಕದಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬದಲಾವಣೆ ಕೇವಲ ಊಹಾಪೋಹ. ಇದಕ್ಕೆ ಮಹತ್ವ ನೀಡುವ ಅವಶ್ಯಕತೆಯಿಲ್ಲ ಎಂದರು.



❦ ಸುಭಾಷಿತ ❦

ವ್ಯಕ್ತಿಯ ಮಾಗುವಿಕೆಯೇ ಸಂಸ್ಕೃತಿ.
–ಕೆ.ಎಸ್.ನಿಸಾರ್ ಅಹಮದ್

ಕ್ರೀಡಾಕ್ಷೇತ್ರಕ್ಕೆ ನವಚೈತನ್ಯ ತುಂಬಿದ ಕಾಮನ್‌ವೆಲ್ತ್ ಕೂಟದ ಸಾಧನೆ

ಭಾರತವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂಭ್ರಮದಲ್ಲಿದೆ. ಇದೇ ಸಂದರ್ಭದಲ್ಲಿ, ಇಂಗ್ಲೆಂಡ್‌ನ ನೆಲದಲ್ಲಿ ಭಾರತದ ಕ್ರೀಡಾಪಟುಗಳು ತ್ರಿವರ್ಣಧ್ವಜವು ಹೆಮ್ಮೆಯಿಂದ ನಲಿದಾಡುವಂತೆ ಮಾಡಿದರು. ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಒಟ್ಟು 61 ಪದಕಗಳನ್ನು ಗೆದ್ದು ಅಮೋಘ ಸಾಧನೆ ಮಾಡಿದರು. ಕೂಟದಲ್ಲಿ 215 ಕ್ರೀಡಾಪಟುಗಳು 16 ಕ್ರೀಡಾ ವಿಭಾಗಗಳಲ್ಲಿ ಸ್ಪರ್ಧಿಸಿದರು. ಈ ಪೈಕಿ 12 ವಿಭಾಗಗಳಲ್ಲಿ ಪದಕಗಳು ಒಲಿದವು. ಭಾರತ 4ನೇ ಸ್ಥಾನ ಪಡೆದಿದೆ. ಈ ಸಾಧನೆ ಸಣ್ಣದಲ್ಲ. ಅದರಲ್ಲೂ ಈ ಬಾರಿ ಶೂಟಿಂಗ್ ವಿಭಾಗವನ್ನು ಕೈಬಿಡಲಾಗಿತ್ತು. ನಾಲ್ಕು ವರ್ಷಗಳ ಹಿಂದೆ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕೂಟದಲ್ಲಿ ಶೂಟಿಂಗ್‌ನಲ್ಲಿಯೇ ಭಾರತವು ಒಟ್ಟು 16 ಪದಕಗಳನ್ನು ಪಡೆದಿತ್ತು. ಈ ಸಲ ಕುಸ್ತಿ ಹಾಗೂ ವೇಟ್‌ಲಿಫ್ಟಿಂಗ್ ವಿಭಾಗಗಳ ಸ್ಪರ್ಧಿಗಳು ಹೆಚ್ಚು ಪದಕಗಳನ್ನು ಗೆದ್ದುಕೊಟ್ಟರು. ಬ್ಯಾಡ್ಮಿಂಟನ್ ಮತ್ತು ಟೇಬಲ್ ಟೆನಿಸ್ ಆಟಗಾರರು ತಮ್ಮ ಮೇಲಿನ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. ಮೂರನೇ ಬಾರಿ ಕಾಮನ್‌ವೆಲ್ತ್ ಕೂಟದಲ್ಲಿ ಆಡಿದ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಅವರು ಚಿನ್ನಕ್ಕೆ ಮುತ್ತಿಕ್ಕಿದರು. ಇಪ್ಪತ್ತು ವರ್ಷ ವಯಸ್ಸಿನ ಲಕ್ಷ್ಯ ಸೇನ್, ಪುರುಷರ ಸಿಂಗಲ್ಸ್‌ನ ಚಿನ್ನದ ಹುಡುಗನಾಗಿ ಉದಯಿಸಿದರು. ಟೇಬಲ್ ಟೆನಿಸ್‌ನಲ್ಲಿ ಅನುಭವಿ ಆಟಗಾರ ಶರತ್ ಕಮಲ್ ಮೂರು ಚಿನ್ನದ ಪದಕಗಳನ್ನು ಗೆದ್ದು ತಮ್ಮ ಸಾಮರ್ಥ್ಯ ಸಾಬೀತುಪಡಿಸಿದರು. ಸತ್ಯನ್, ಶ್ರೀಜಾ ಅಕುಲಾ ಕೂಡ ಮಿಂಚಿದರು. ವೇಟ್‌ಲಿಫ್ಟಿಂಗ್‌ನಲ್ಲಿ ಯುವಪ್ರತಿಭೆ ಜೆರೆಮಿ ಲಾಲ್‌ರಿನುಂಗಾ, ಕನ್ನಡಿಗ ಗುರುರಾಜ್ ಪೂಜಾರಿ, ಬಾಕ್ಸಿಂಗ್‌ನಲ್ಲಿ ನಿಖತ್ ಜರೀನ್, ವೇಟ್‌ ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು, ಕುಸ್ತಿಯಲ್ಲಿ ಸಾಕ್ಷಿ ಮಲಿಕ್, ವಿನೇಶಾ ಫೋಗಟ್, ಬಜರಂಗ್ ಪೂನಿಯಾ ಚಿನ್ನ ಗೆದ್ದರು. ಈ ಸಲ ಟ್ರ್ಯಾಕ್ ಹಾಗೂ ಫೀಲ್ಡ್, ಜುಡೊ ಮತ್ತು ಲಾನ್‌ಬಾಲ್‌ನಲ್ಲಿಯೂ ಎಂದಿಗಿಂತ ಹೆಚ್ಚು ಪದಕಗಳು ಒಲಿದಿದ್ದು ಉತ್ತಮ ಸಾಧನೆ. ಜಾವೆಲಿನ್ ಥ್ರೋನಲ್ಲಿ ಚಾಂಪಿಯನ್ ನೀರಜ್ ಚೋಪ್ರಾ ಗೈರುಹಾಜರಿ ಕಾಡಿತು. ಆದರೆ ಮಹಿಳೆಯರ ಜಾವೆಲಿನ್‌ನಲ್ಲಿ ಅನ್ನುರಾಣಿ ಪದಕ ಗೆದ್ದು ಸಾಧನೆ ತಂದರು. ಈ ಕೂಟದಲ್ಲಿ ಸೇರ್ಪಡೆಯಾದ ಮಹಿಳಾ ಟಿ20 ಕ್ರಿಕೆಟ್‌ನಲ್ಲಿ ಭಾರತ ತಂಡ ಬೆಳ್ಳಿ ಸಾಧನೆ ಮಾಡಿದೆ. ಇದರೊಂದಿಗೆ ಕ್ರಿಕೆಟ್ ಆಟವನ್ನೂ ಒಲಿಂಪಿಕ್ ಕೂಟಕ್ಕೆ ಸೇರ್ಪಡೆಗೊಳಿಸುವ ಪ್ರಯತ್ನಕ್ಕೆ ಚಾಲನೆ ದೊರೆಯಿತು.



> ಇಂತಹದೊಂದು ಸಾಧನೆ ಮೂಡಿದಾಗ ಯುವಸಮೂಹದಲ್ಲಿ ಉಂಟಾಗುವ ಸಂಚಲನವನ್ನು ಬಳಸಿಕೊಂಡು ಗ್ರಾಮೀಣ ಮಟ್ಟದಲ್ಲಿ ಪ್ರತಿಭಾಶೋಧಕ್ಕೆ ಮುಂದಾಗಬೇಕು

ಈ ಎರಡು ದಶಕಗಳಲ್ಲಿ ನಡೆದ ಆರು ಕಾಮನ್‌ವೆಲ್ತ್ ಕೂಟಗಳಲ್ಲಿ ಸತತವಾಗಿ 50ಕ್ಕಿಂತ ಹೆಚ್ಚು ಪದಕಗಳನ್ನು ಭಾರತವು ಗೆದ್ದಿರುವುದು ಗಮನಾರ್ಹ. ಈ ಸಾಧನೆಯ ಓಟದ ಹಿಂದೆ ಹಲವು ಕಾರಣಗಳಿವೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಇಂತಹ ಸಾಧನೆ ಮೂಡುತ್ತಿರುವುದು ಭಾರತದ ಕ್ರೀಡೆಯು ವೃತ್ತಿಪರತೆಯತ್ತ ಹೆಜ್ಜೆ ಇಟ್ಟಿರುವುದರ ಸೂಚಕವೂ ಹೌದು. ಇದರಿಂದಾಗಿ, ಮಧ್ಯಮ ವರ್ಗದ ಕುಟುಂಬಗಳ ಮಕ್ಕಳು ಕ್ರೀಡೆಯಲ್ಲಿ ಭವಿಷ್ಯ ರೂಪಿಸಿಕೊಳ್ಳುವ ಭರವಸೆ ಮೂಡುತ್ತಿದೆ. ದೇಶದ ಪ್ರತಿಷ್ಠಿತ ಉದ್ಯಮ ಸಂಸ್ಥೆಗಳು ಕ್ರೀಡಾ ವಸತಿ ಶಾಲೆಗಳು ಮತ್ತು ಅಕಾಡೆಮಿಗಳನ್ನು ಆರಂಭಿಸಿರುವುದು ಕೂಡ ಆಟಗಾರರ ಬೆಳವಣಿಗೆಗೆ ಸಕಾರಾತ್ಮಕವಾಗಿ ಒದಗಿಬಂದಿದೆ. ಕೇಂದ್ರ ಕ್ರೀಡಾ ಇಲಾಖೆಯ ಟಾರ್ಗೆಟ್ ಒಲಿಂಪಿಕ್ ಪೋಡಿಯಂ (ಟಾಪ್) ಯೋಜನೆಯೂ ಕ್ರೀಡಾಪಟುಗಳಿಗೆ ತಕ್ಕಮಟ್ಟಿಗೆ ಆರ್ಥಿಕ ನೆರವು ನೀಡುವಲ್ಲಿ ಯಶಸ್ವಿಯಾಗಿದೆ. ಸರ್ಕಾರಿ– ಖಾಸಗಿ ಸಹಭಾಗಿತ್ವದಿಂದಾಗಿ ವಿದೇಶಿ ಕೋಚ್‌ಗಳ ಲಭ್ಯತೆ, ನೂತನ ತಂತ್ರಜ್ಞಾನ ಹಾಗೂ ಕ್ರೀಡಾವಿಜ್ಞಾನದ ನೆರವು ದೊರೆಯುತ್ತಿರುವುದು ಆಟಗಾರರ ಸಾಮರ್ಥ್ಯ ವೃದ್ಧಿಗೆ ಇಂಬು ನೀಡಿವೆ. ಪ್ರಚಾರ ಹೆಚ್ಚಿಗೆ ಲಭಿಸುತ್ತಿರುವುದರಿಂದ ಪ್ರಾಯೋಜಕರೂ ಒಲವು ತೋರುತ್ತಿದ್ದಾರೆ. ಆದರೆ, ಕ್ರೀಡಾ ಫೆಡರೇಷನ್‌ಗಳಲ್ಲಿನ ಆಡಳಿತವು ಸುಧಾರಣೆಯಾಗುವುದು ಇನ್ನೂ ಬಾಕಿ ಇದೆ. ಈಗಲೂ ಪಟ್ಟಭದ್ರರು ಮತ್ತು ರಾಜಕಾರಣಿಗಳ ಹಸ್ತಕ್ಷೇಪ ನಿಂತಿಲ್ಲ. ಕ್ರೀಡಾ ನೀತಿಯನ್ನು ಸಮರ್ಪಕವಾಗಿ ಜಾರಿಗೊಳಿಸದ ಫೆಡರೇಷನ್‌ಗಳಿಗೆ ನ್ಯಾಯಾಲಯಗಳು ಚಾಟಿ ಬೀಸುತ್ತಿವೆ. ಕೆಲವು ಅಥ್ಲೀಟ್‌ಗಳು ತಮ್ಮ ತರಬೇತಿ ಹಾಗೂ ಆಯ್ಕೆ ಪ್ರಕ್ರಿಯೆಯಲ್ಲಿ ಆಗಿರುವ ಅನ್ಯಾಯಗಳ ವಿರುದ್ಧ ಧ್ವನಿ ಎತ್ತಿದ್ದಾರೆ. ಇಂತಹದೇ ಪ್ರಕರಣವೊಂದರಲ್ಲಿ ದೆಹಲಿ ಹೈಕೋರ್ಟ್ ಸೂಚನೆಯ ಮೇರೆಗೆ ಕೊನೆಕ್ಷಣ ದಲ್ಲಿ ತೇಜಸ್ವಿನ್ ಶಂಕರ್ ಅವರಿಗೆ ಅಥ್ಲೆಟಿಕ್ಸ್ ತಂಡದಲ್ಲಿ ಸ್ಥಾನ ಲಭಿಸಿತ್ತು. ಪುರುಷರ ಹೈಜಂಪ್‌ನಲ್ಲಿ ತೇಜಸ್ವಿನ್ ಕಂಚು ಗೆದ್ದರು. ಈ ವಿಭಾಗದಲ್ಲಿ ಭಾರತಕ್ಕೆ ದಕ್ಕಿದ ಮೊದಲ ಪದಕ ಇದು. ಇವೆಲ್ಲದರಾಚೆ ಕ್ರಿಕೆಟ್ ಅಭಿಮಾನಿಗಳೇ ಹೆಚ್ಚಿರುವ ದೇಶದಲ್ಲಿ ಬೇರೆ ಕ್ರೀಡೆಗಳಲ್ಲಿಯೂ ತಾರೆಗಳು ಮಿನುಗುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ. ಪ್ರತೀ ಸಲ ಇಂತಹದೊಂದು ದೊಡ್ಡ ಸಾಧನೆ ಮೂಡಿದಾಗ ಯುವ ಸಮೂಹದಲ್ಲಿ ಉಂಟಾಗುವ ಸಂಚಲನವನ್ನು ಬಳಸಿಕೊಂಡು ಗ್ರಾಮೀಣ ಮಟ್ಟದಲ್ಲಿ ಪ್ರತಿಭಾಶೋಧಕ್ಕೆ ಮುಂದಾಗಬೇಕು. ಭವಿಷ್ಯದಲ್ಲಿ ಇನ್ನೂ ಹೆಚ್ಚು ಪದಕಗಳು ಭಾರತದ ಮಡಿಲು ಸೇರುವಂತಾಗಬೇಕು.

ದಿನದ ಟ್ವೀಟ್

ಬಿಜೆಪಿ ಮತ್ತು ಪ್ರಾದೇಶಿಕ ಪಕ್ಷಗಳು



ಬಿಜೆಪಿ ಮತ್ತು ಮಿತ್ರಪಕ್ಷಗಳ ಸಂಕ್ಷಿಪ್ತ ಇತಿಹಾಸ: ಶಿವಸೇನೆ ವಿಭಜನೆ; ಅಕಾಲಿದಳ ದುರ್ಬಲ; ಎಐಎಡಿಎಂಕೆ ವಿಭಜನೆ; ಟಿಡಿಪಿ ದುರ್ಬಲ; ಎಂಜಿಪಿ ಅವನತಿ; ಅಂಚಿಗೆ ಸರಿದ ಎಜಿಪಿ; ಎಲ್‌ಜೆಪಿ ವಿಭಜನೆ; ದುರ್ಬಲಗೊಂಡ ಐಎನ್‌ಎಲ್‌ಡಿ; ಉಳಿವಿಗೆ ಹೋರಾಡುತ್ತಿರುವ ಪಿಡಿಪಿ; ಜೆಡಿಯು? (ಟಿಎಂಸಿ/ಬಿಜೆಡಿ ಮಾತ್ರ ಮೈತ್ರಿ ತೊರೆದು ಉಳಿದವು ಮತ್ತು ಬೆಳೆದವು). ನೀತಿ: ಬಿಜೆಪಿ ಪ್ರಬಲಗೊಳ್ಳುವುದು ಪ್ರಾದೇಶಿಕ ಪಕ್ಷಗಳಿಗೆ ಕೆಟ್ಟ ಸುದ್ದಿ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ



ಖೇಲೊ ಇಂಡಿಯಾ ಯೋಜನೆಯಡಿ ರಾಜ್ಯಗಳಿಗೆ ಕೇಂದ್ರ ಸರ್ಕಾರದ ಅನುದಾನ ಹಂಚಿಕೆ ಪ್ರಮಾಣವು ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳಿಗೆ ಎಸಗುತ್ತಿರುವ ತಾರತಮ್ಯವನ್ನು ಸ್ಪಷ್ಟವಾಗಿ ಹೇಳುತ್ತದೆ. ತೆಲಂಗಾಣಕ್ಕೆ ₹ 24.11 ಕೋಟಿ, ಆಂಧ್ರ ಪ್ರದೇಶಕ್ಕೆ ₹ 33.80 ಕೋಟಿ ಮಾತ್ರ ಸಿಕ್ಕಿದೆ. ಗುಜರಾತ್‌ಗೆ ₹ 608.37 ಕೋಟಿ, ಉತ್ತರ ಪ್ರದೇಶ ₹ 503.02 ಕೋಟಿ ಮತ್ತು ಕರ್ನಾಟಕವು ₹ 128.52 ಕೋಟಿ ಪಡೆದಿವೆ.

ಪ್ರೊ. ಕೆ.ನಾಗೇಶ್ವರ್, ಪ್ರಾಧ್ಯಾಪಕ

25 ವರ್ಷಗಳ ಹಿಂದೆ

ಭಾನುವಾರ, 10-8-1997

● ಸೋನಿಯಾ ಆಗಮನ: ಜನತೆ ಬಳಿ ತೆರಳಲು ಕರೆ

ಸುಭಾಷ್‌ನಗರ (ಕಲ್ಕತ್ತ) ಆಗಸ್ಟ್ 9– ಇದೇ ಮೊದಲ ಬಾರಿಗೆ ಎಐಸಿಸಿ ಅಧಿವೇಶನದಲ್ಲಿ ಸೋನಿಯಾ ಗಾಂಧಿ ಅವರು ಪಾಲ್ಗೊಂಡು, ಜನಸಂಪರ್ಕ ಹೆಚ್ಚಿಸಿಕೊಂಡು ಪಕ್ಷವನ್ನು ಬಲಪಡಿಸುವಂತೆ ಕಾರ್ಯಕರ್ತರಿಗೆ ಕರೆ ನೀಡಿದರು. ಅಧಿವೇಶನಕ್ಕೆ ಸೋನಿಯಾ ಹಾಜರಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿದ ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಅವರು, ಪಕ್ಷವನ್ನು ಮುನ್ನಡೆಸುವಂತೆ ಸೋನಿಯಾ ಅವರಲ್ಲಿ ಮನವಿ ಮಾಡಿಕೊಂಡರು.

ಇಲ್ಲಿ ನಡೆಯುತ್ತಿರುವ 80ನೇ ಎಐಸಿಸಿ ಅಧಿವೇಶನದಲ್ಲಿ ಸೋನಿಯಾ ಅವರೇ ಪ್ರಮುಖ ಆಕರ್ಷಣೆಯಾಗಿದ್ದರು. ಅಧ್ಯಕ್ಷೀಯ ಭಾಷಣ ಮಾಡಿದ ಕೇಸರಿ ಅವರು, 'ಪಕ್ಷವನ್ನು ಬಲಪಡಿಸಲು ನೀವು ಬಯಸುವ ಯಾವುದೇ ಜವಾಬ್ದಾರಿ ತೆಗೆದುಕೊಳ್ಳಬಹುದು' ಎಂದರು.

● ಬಂಡಾಯ ನಾಯಕಿಯಿಂದ ಹೊಸ ಪಕ್ಷ

ಕಲ್ಕತ್ತ, ಆಗಸ್ಟ್ 9– ಪಶ್ಚಿಮ ಬಂಗಾಳ ಕಾಂಗ್ರೆಸ್‌ನ ಬಂಡಾಯ ನಾಯಕಿ ಮಮತಾ ಬ್ಯಾನರ್ಜಿ ಅವರು 'ತೃಣಮೂಲ ಕಾಂಗ್ರೆಸ್' ಎಂಬ ಹೊಸ ಪಕ್ಷ ಸ್ಥಾಪನೆಯನ್ನು ಪ್ರಕಟಿಸುವುದರೊಂದಿಗೆ ಕಾಂಗ್ರೆಸ್ ಮಹಾ ಅಧಿವೇಶನ ದಲ್ಲಿ ಬಿರುಗಾಳಿ ಎಬ್ಬಿಸಿದ್ದಾರೆ.

ಕಾಂಗ್ರೆಸ್ ಅಧಿವೇಶನ ನಡೆಯುತ್ತಿರುವ ಸಭಾಂಗಣದ ಪಕ್ಕದಲ್ಲೇ ಸಂಘಟಿಸಿದ್ದ ಬೃಹತ್ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಮಮತಾ ಬ್ಯಾನರ್ಜಿ, ಹೊಸ ಪಕ್ಷದ ರಚನೆ ನಿರ್ಧಾರವನ್ನು ಪ್ರಕಟಿಸಿದರು.

50 ವರ್ಷಗಳ ಹಿಂದೆ

ಗುರುವಾರ, 10-8-1972

● ಶ್ರೀ ಅರವಿಂದರ ಸ್ಮರಣಾರ್ಥ ವಿಶೇಷ ಅಂಚೆ ಚೀಟಿ

ನವದೆಹಲಿ, ಆಗಸ್ಟ್ 9– ಮಹರ್ಷಿ ಅರವಿಂದರ ಗೌರವಾರ್ಥವಾಗಿ ಅಂಚೆ – ತಂತಿ ಇಲಾಖೆಯು ಅವರ ಜನ್ಮದಿನ ವಾದ ಆಗಸ್ಟ್ 15ರಂದು 20 ಪೈಸೆ ಮೌಲ್ಯದ ವಿಶೇಷ ಅಂಚೆ ಚೀಟಿಯನ್ನು ಮಾರಾಟಕ್ಕೆ ಬಿಡುಗಡೆ ಮಾಡಲಿದೆ. ಅಂಚೆ ಚೀಟಿಯಲ್ಲಿ ಮಹರ್ಷಿ ಅರವಿಂದರ ಸಂಕೇತವಿದೆ. ಈ ಸಂಕೇತದ ಸುತ್ತಲೂ ಸೂರ್ಯನ ಚಿತ್ರವಿದೆ. ಈ ಸೂರ್ಯನ ಚಿತ್ರವು ಮಹರ್ಷಿ ಅರವಿಂದರ ಜ್ಞಾನದ ಪ್ರಭಾವ ವಲಯದ ಸೂಚಕವಾಗಿದೆ.

● ಆಹಾರಧಾನ್ಯ ಆಮದು, ಪಡಿತರ ವ್ಯವಸ್ಥೆ ಇಲ್ಲ: ಅಹಮದ್

ನವದೆಹಲಿ, ಆಗಸ್ಟ್ 9– ಅಭಾವ ಪರಿಸ್ಥಿತಿ ಮುಂದುವರಿಯುತ್ತಿದ್ದರೂ ಈ ವರ್ಷ ಪಡಿತರ ವ್ಯವಸ್ಥೆ ಜಾರಿಗೆ ತರುವುದಿಲ್ಲ ಮತ್ತು ವಿದೇಶಗಳಿಂದ ಆಹಾರಧಾನ್ಯ ಆಮದು ಮಾಡಿಕೊಳ್ಳುವುದಿಲ್ಲ ಎಂದು ಕೇಂದ್ರ ಕೃಷಿ ಸಚಿವ ಫಕ್ರುದ್ದೀನ್ ಅಲಿ ಅಹಮದ್ ತಿಳಿಸಿದ್ದಾರೆ.

ಈ ಕಾನೂನು ರೂಪಿಸಲು ಪಕ್ಷವು ಭಿನ್ನವಾದ ಕಾರ್ಯತಂತ್ರದ ಮೊರೆಹೋಗಿದೆ

ನಾಗರಿಕ ಸಂಹಿತೆ: ಬಿಜೆಪಿಗೆ ಸವಾಲು



ವಿಶ್ಲೇಷಣೆ

ಅರುಣ್ ಸಿನ್ಹಾ

ತ್ರಿವಳಿ ತಲಾಖ್ ನಿಷೇಧಿಸಿ ಕಾಯ್ದೆ ರೂಪಿಸಿರುವ ಬಿಜೆಪಿಯು ಈಗ ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿದಂತೆ ಕಾನೂನು ರೂಪಿಸಲು ಕೆಲಸ ಆರಂಭಿಸಿದೆ. ಈ ಕಾನೂನು ರೂಪಿಸಲು ಪಕ್ಷವು ಭಿನ್ನವಾದ ಕಾರ್ಯತಂತ್ರದ ಮೊರೆಹೋಗಿದೆ. ಪಕ್ಷವು ಇಲ್ಲಿ ನೇರ ಮಾರ್ಗ ಅನುಸರಿಸುತ್ತಿಲ್ಲ; ಬದಲಿ ಮಾರ್ಗ ಅನುಸರಿಸುತ್ತಿದೆ.

ಅಂದರೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕಾನೂನು ರೂಪಿಸಲು ಸಂಸತ್ತಿನಲ್ಲಿ ಮಸೂದೆ ಮಂಡಿಸುತ್ತಿಲ್ಲ. ಮಸೂದೆಯನ್ನು ಮೊದಲು ಉತ್ತರಾಖಂಡ ವಿಧಾನಸಭೆಯಲ್ಲಿ ಅಥವಾ ಉತ್ತರ ಪ್ರದೇಶ ವಿಧಾನಸಭೆಯಲ್ಲಿ ಮಂಡಿಸಲಾಗುತ್ತದೆ. ಹಿಮಾಚಲ ಪ್ರದೇಶ, ಮಧ್ಯಪ್ರದೇಶ ಮತ್ತು ಬಿಜೆಪಿ ಆಡಳಿತವಿರುವ ಇತರ ರಾಜ್ಯಗಳೂ ಈ ವಿಚಾರದಲ್ಲಿ ಉತ್ಸುಕವಾಗಿದ್ದರೂ, ಈ ಎರಡು ರಾಜ್ಯಗಳು ಹೆಚ್ಚಿನ ವೇಗದಿಂದ ಕೆಲಸ ಮಾಡುತ್ತಿವೆ.

ಏಕರೂಪ ನಾಗರಿಕ ಸಂಹಿತೆ ವಿಚಾರದಲ್ಲಿ ಕಾನೂನು ರೂಪಿಸುವ ಇರಾದೆ ತನಗಿಲ್ಲ ಎಂದು ಕೇಂದ್ರ ಸರ್ಕಾರ ಬಹಿರಂಗವಾಗಿ ಹೇಳಿದೆ. ಇಂತಹ ಕಾನೂನಿನ ವಿಚಾರವಾಗಿ ಮುಂದಡಿ ಇರಿಸುವ ಮೊದಲು 'ಸಂಬಂಧ ಪಟ್ಟವರ ಜೊತೆ ವಿಸ್ತೃತ ಚರ್ಚೆ ಆಗಬೇಕು' ಎಂದು ಸಂಸತ್ತಿನಲ್ಲಿ ಕೇಳಿದ ಪ್ರಶ್ನೆಗಳಿಗೆ ಕೇಂದ್ರ ಸರ್ಕಾರವು ಉತ್ತರವಾಗಿ ತಿಳಿಸಿದೆ. ಹೀಗಿದ್ದರೂ, ಪ್ರಧಾನಿ ನರೇಂದ್ರ ಮೋದಿ ಅಥವಾ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಲ್ಲಿ, ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರಲ್ಲಿ ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿದ ಕಾನೂನು ತರುವ ಆಲೋಚನೆ ಕೈಬಿಡಿ ಎಂದು ಹೇಳಿಲ್ಲ. ಬೇರೆ ರಾಜ್ಯಗಳ ಮುಖ್ಯಮಂತ್ರಿಗಳಿಗೂ ಅವರು ಈ ಮಾತು ಹೇಳಿಲ್ಲ. ಕಾನೂನು ರೂಪಿಸುವ ಮೊದಲು 'ಸಂಬಂಧ ಪಟ್ಟವರ ಜೊತೆ ವಿಸ್ತೃತ ಚರ್ಚೆ ನಡೆಸಿ' ಎಂದೂ ಹೇಳಿಲ್ಲ.

ಬಿಜೆಪಿ ಆಡಳಿತವಿರುವ ರಾಜ್ಯಗಳ ನಡೆಗೆ ಅವರ ಮೌನ ಸಮ್ಮತಿ ಇದೆ. ಏಕರೂಪ ನಾಗರಿಕ ಸಂಹಿತೆಯು ಆರ್‌ಎಸ್‌ಎಸ್‌ನ ಅತ್ಯಂತ ಹಳೆಯ ಕನಸುಗಳಲ್ಲಿ ಒಂದಾಗಿರುವ ಕಾರಣ ಈ ನಡೆಯು ಆಶ್ಚರ್ಯ ಮೂಡಿಸುವಂಥದ್ದೇನೂ ಅಲ್ಲ. ಈ ಕನಸು ಬೇಗ ನನಸಾದಷ್ಟೂ ಬಿಜೆಪಿ–ಆರ್‌ಎಸ್‌ಎಸ್ ನಾಯಕತ್ವಕ್ಕೆ ಹೆಚ್ಚು ಖುಷಿಯಾಗುತ್ತದೆ. ಆದರೂ ಈ ವಿಚಾರದಲ್ಲಿ ಎಚ್ಚರಿಕೆಯ ಹೆಜ್ಜೆ ಇರಿಸಲಾಗುತ್ತಿದೆ. ಯಾವುದೇ ಕಾನೂನಿಗೆ ಅನುಮೋದನೆ ಪಡೆದುಕೊಳ್ಳುವ ಸಂಖ್ಯಾಬಲ ಕೇಂದ್ರ ಸರ್ಕಾರಕ್ಕೆ ಇದೆಯಾದರೂ, ಏಕರೂಪ ನಾಗರಿಕ ಸಂಹಿತೆಯ ವಿಚಾರದಲ್ಲಿ ಕೇಂದ್ರವೇ ಕಾನೂನು ಜಾರಿಗೆ ಮುಂದಾದರೆ ಎದುರಾಗಬಹುದಾದ ಪ್ರತಿಕ್ರಿಯೆಗಳು ಹೇಗಿರಬಹುದು ಎಂಬುದು ಅವರಿಗೆ ಸ್ಪಷ್ಟ ವಾಗುತ್ತಿಲ್ಲ. ಕೋಮು ಸೌಹಾರ್ದಕ್ಕೆ ಹೆಚ್ಚು ಧಕ್ಕೆಯಾಗದೆ, ಅಂತರರಾಷ್ಟ್ರೀಯ ಸಂಬಂಧಗಳಿಗೆ ಮತ್ತು ಸರ್ಕಾರಕ್ಕೆ ಹಾಗೂ ಪಕ್ಷಕ್ಕೆ ಧಕ್ಕೆಯಾಗದ ರೀತಿಯಲ್ಲಿ ಕಾನೂನು ಜಾರಿಗೊಳಿಸಬಹುದೇ ಎಂಬುದು ಅವರಿಗೆ ಖಚಿತ ವಾಗುತ್ತಿಲ್ಲ. ಹೀಗಾಗಿ, ಒಂದೆರಡು ರಾಜ್ಯಗಳಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೆ ತಂದು, ಪರಿಣಾಮ ಏನಾಗುತ್ತದೆ ಎಂಬುದನ್ನು ನೋಡುವುದು ಅವರಿಗೆ ಒಳ್ಳೆಯ ಮಾರ್ಗವಾಗಿ ಕಂಡಿದೆ. ರಾಜ್ಯಗಳ ಮಟ್ಟದಲ್ಲಿ ಮಾತ್ರ ಪ್ರತಿರೋಧ ಎದುರಾದರೆ ಅದನ್ನು ಸುಲಭವಾಗಿ ನಿಯಂತ್ರಿಸಬಹುದು.

ಆದರೆ ಇಲ್ಲಿ ಎಲ್ಲವೂ ಸುಲಭವಿಲ್ಲ. ಬಿಜೆಪಿಯ ಗುರಿ ಮುಸ್ಲಿಮರು ಎಂಬುದು ನಿಜ. ಆದರೆ, ಏಕರೂಪ ನಾಗರಿಕ ಸಂಹಿತೆಯು ಹಿಂದೂಗಳು, ಕ್ರೈಸ್ತರು ಮತ್ತು ಪಾರ್ಸಿಗಳಿಗಾಗಿ ರೂಪಿಸಿರುವ ಮತ–ಧರ್ಮ ನಿರ್ದಿಷ್ಟ ವೈಯಕ್ತಿಕ ಕಾನೂನುಗಳನ್ನು ಇಲ್ಲವಾಗಿ ಸುತ್ತದೆ. ಈ ಮತಧರ್ಮಗಳಿಗೆ ಸೇರಿದವರ ವಿವಾಹ, ವಿಚ್ಛೇದನ, ಉತ್ತರಾಧಿಕಾರ, ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಗಳು ಸರಿಸುಮಾರು ಒಂದು ಶತಮಾನದಿಂದ ಜಾರಿಯಲ್ಲಿವೆ. ಹೀಗಾಗಿಯೇ, ಈ ವಿಚಾರವಾಗಿ ವಿಸ್ತೃತ ಚರ್ಚೆಯ ಅಗತ್ಯವಿದೆ ಎಂದು ಮೋದಿ ನೇತೃತ್ವದ ಸರ್ಕಾರವು ಆರಂಭದಿಂದಲೂ ಹೇಳುತ್ತಿದೆ. ಮುಸ್ಲಿಮರು ಮಾತ್ರವೇ ಅಲ್ಲದೆ, ತಮ್ಮ ವೈಯಕ್ತಿಕ ಜೀವನವನ್ನು ಏಕರೂಪ ನಾಗರಿಕ ಸಂಹಿತೆಗೆ ಅನುಗುಣವಾಗಿ ನಡೆಸಲು ಹಿಂದೂಗಳು, ಕ್ರೈಸ್ತರು ಮತ್ತು ಪಾರ್ಸಿಗಳು ಕೂಡ ಸಿದ್ಧರಾಗಬೇಕಾಗುತ್ತದೆ.

ಅಂದಾಜು ಮಾಡಲು ಕೂಡ ಕಷ್ಟವಾಗುವ ಹಲವು ಸಂಗತಿಗಳು ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸುವಲ್ಲಿ ಅಡ್ಡಿಯಾಗುತ್ತವೆ. ಉತ್ತರಾಖಂಡ ಅಥವಾ ಉತ್ತರಪ್ರದೇಶದಲ್ಲಿ ಇಂಥದ್ದೊಂದು ಸಂಹಿತೆಯನ್ನು ಜಾರಿಗೆ ತರುವ ಪ್ರಕ್ರಿಯೆಯು ಕಾನೂನು ಅಭಿಪ್ರಾಯಗಳು, ಮನವಿಗಳು, ವಿಧಾನಸಭೆಯಲ್ಲಿ ಆಕ್ರೋಶದ ಭಾಷಣಗಳು, ಪ್ರತಿಭಟನೆಗಳು, ಚಳವಳಿಗಳು ಹಾಗೂ ಕಾನೂನು ವ್ಯಾಜ್ಯಗಳಲ್ಲಿ ಸಿಲುಕಿಕೊಳ್ಳುವ ಸಾಧ್ಯತೆ ಇದೆ.


ಧಾಮಿ ಅಥವಾ ಆದಿತ್ಯನಾಥ ಅವರು ಪ್ರಯತ್ನಿಸ ಬಹುದಾದ ಒಂದು ಬದಲಿ ಮಾರ್ಗ ಇದೆ. ಈ ವಿಚಾರವಾಗಿ ಕೆಲವು ಸೂಚನೆಗಳು ಈ ಹಿಂದೆಯೂ ಬಂದಿವೆ. ಗೋವಾದಲ್ಲಿ ಏಕರೂಪ ನಾಗರಿಕ ಸಂಹಿತೆ ಇದೆ ಎಂದು ಹಲವರು ಹೇಳಿದ್ದಾರೆ. ಅದನ್ನು ಮಾದರಿಯಾಗಿ ಬಳಸಿಕೊಳ್ಳಬಹುದು. ಬಿಜೆಪಿ ನಾಯಕ ಸುಶೀಲ್ ಮೋದಿ ನೇತೃತ್ವದ ಸಂಸದೀಯ ನಿಯೋಗವೊಂದು ಇದರ ಅಧ್ಯಯನಕ್ಕೆ ಗೋವಾಕ್ಕೆ ಭೇಟಿ ನೀಡಿದೆ. ಅದೇನೇ ಇದ್ದರೂ, ಧಾಮಿ ಅಥವಾ ಆದಿತ್ಯನಾಥ ಅವರಿಗೆ ಗೋವಾ ಮಾದರಿಯನ್ನು ಆಯ್ಕೆ ಮಾಡಿಕೊಳ್ಳುವುದು ಸುಲಭವಲ್ಲ. ಉತ್ತರಾಖಂಡ ಹಾಗೂ ಉತ್ತರಪ್ರದೇಶದ ಪುರುಷ ಪ್ರಾಧಾನ್ಯದ ಸಮಾಜವು ಈ ಸಂಹಿತೆಗೆ ಹೇಗೆ ಪ್ರತಿಕ್ರಿಯಿಸ ಬಹುದು ಎಂಬುದು ಗೊತ್ತಿಲ್ಲ. ಗೋವಾದಲ್ಲಿ ಇದನ್ನು ಏಕರೂಪ ನಾಗರಿಕ ಸಂಹಿತೆ ಎಂದು ಕರೆಯುವುದಿಲ್ಲ; ಅದನ್ನು ಕೌಟುಂಬಿಕ ಕಾನೂನುಗಳು ಎನ್ನಲಾಗುತ್ತದೆ. ಪೋರ್ಚುಗೀಸರು 1870ರ ಸಮಯದಲ್ಲಿ ಜಾರಿಗೆ ತಂದ ಇದರ ಒಂದು ವೈಶಿಷ್ಟ್ಯ, ಆಸ್ತಿ ಹಾಗೂ ವಿವಾಹದ ನಡುವಿನ ನಂಟು.

ಇದರ ಪ್ರಕಾರ, ಪತಿ–ಪತ್ನಿ ಪೈಕಿ ಯಾರೇ ಆಸ್ತಿಯನ್ನು ಉಡುಗೊರೆಯಾಗಿ, ಪೂರ್ವಿಕರಿಂದ, ಖರೀದಿಯ ಮೂಲಕ ಪಡೆದುಕೊಂಡರೂ ವಿವಾಹ ಸಂಬಂಧ ಇರುವವರೆಗೆ ಆ ಆಸ್ತಿಯ ಮೇಲೆ ಇಬ್ಬರದೂ ಹಕ್ಕಿರುತ್ತದೆ. ಪತಿ–ಪತ್ನಿಯ ಒಪ್ಪಿಗೆ ಇಲ್ಲದೆ ಇಂತಹ ಆಸ್ತಿಯನ್ನು ಭಾಗ ಮಾಡುವಂತಿಲ್ಲ, ವರ್ಗಾವಣೆ ಮಾಡುವಂತಿಲ್ಲ. ವಿವಾಹ ಸಂಬಂಧ ಅಂತ್ಯಗೊಂಡರೆ ಮಾತ್ರ ಆಸ್ತಿ ವಿಭಜಿಸಬಹುದು. ವಿಚ್ಛೇದನದ ಮೂಲಕ ವಿವಾಹ ಸಂಬಂಧ ಕೊನೆಗೊಂಡರೆ, ಪತಿ–ಪತ್ನಿ ಇಬ್ಬರಿಗೂ ಆಸ್ತಿಯಲ್ಲಿ ಅರ್ಧ ಪಾಲು ಸಿಗುತ್ತದೆ. ವಿಚ್ಛೇದನ ಯಾರೇ ನೀಡಿದ್ದರೂ, ಆಸ್ತಿ ವಿಭಜನೆ ಸಮಾನವಾಗಿ ಆಗುತ್ತದೆ. ಪತಿಯು ನಿಧನ ಹೊಂದಿದರೆ, ಪತ್ನಿಗೆ ಆಸ್ತಿಯಲ್ಲಿ ಅರ್ಧ ಪಾಲು, ಇನ್ನರ್ಧ ಪಾಲು ಮಕ್ಕಳಿಗೆ ಸಿಗುತ್ತದೆ. ಪತ್ನಿಯ ಅರ್ಧ ಪಾಲನ್ನು ವಿಭಜಿಸುವುದಿಲ್ಲ; ಆ ಪಾಲು ಪತಿಗೆ ವರ್ಗಾವಣೆ ಆಗುತ್ತದೆ. ವಿಚ್ಛೇದನ ಇಲ್ಲದೆ, ಪತಿ–ಪತ್ನಿ ಪ್ರತ್ಯೇಕವಾದರೆ ಆಸ್ತಿಯನ್ನು ಸಮಾನವಾಗಿ ಪಾಲು ಮಾಡಲಾಗುತ್ತದೆ.

ವಿಚ್ಛೇದನ ಪ್ರಕರಣಗಳಲ್ಲಿ ಪತ್ನಿಗೆ ಮಧ್ಯಂತರ ಜೀವನಾಂಶ ಹಾಗೂ ಶಾಶ್ವತ ಜೀವನಾಂಶ ಪಡೆಯಲು ಗೋವಾದ ಕಾನೂನು ಅವಕಾಶ ಕಲ್ಪಿಸುತ್ತದೆ. ಇಂತಹ ಅವಕಾಶವು ವೈಯಕ್ತಿಕ ಕಾನೂನುಗಳ ಅಡಿಯಲ್ಲಿ ಮಹಿಳೆಯರಿಗೆ ಇಲ್ಲ.

ಗೋವಾದ ಏಕರೂಪ ನಾಗರಿಕ ಸಂಹಿತೆಯು ಮಹಿಳೆಗೆ ಧರ್ಮ ನಿರ್ದಿಷ್ಟವಾದ ವೈಯಕ್ತಿಕ ಕಾನೂನುಗಳಿಗಿಂತ ಹೆಚ್ಚಿನ ಪ್ರಮಾಣದ ಭದ್ರತೆಯನ್ನು, ಬೆಂಬಲವನ್ನು ನೀಡುತ್ತದೆ. ಮಹಿಳೆಯರಲ್ಲಿ ಲಿಂಗ ಸಮಾನತೆಯ ಪ್ರಜ್ಞೆ ಹೆಚ್ಚುತ್ತಿರುವಾಗ, ಉತ್ತರಾಖಂಡ, ಉತ್ತರಪ್ರದೇಶ, ಹಿಮಾಚಲಪ್ರದೇಶ, ಮಧ್ಯಪ್ರದೇಶದ ಪುರುಷಪ್ರಧಾನ ವ್ಯವಸ್ಥೆಗಳು ಆಸ್ತಿಯ ಸ್ವಾಧೀನ, ಬಳಕೆ ವಿಚಾರದಲ್ಲಿ ಏಕರೂಪ ನಾಗರಿಕ ಸಂಹಿತೆಯು ತಮಗೆ ಅಪಾಯ ಎಂದು ಪರಿಗಣಿಸಬಹುದು.

ಮಹಿಳೆಯರು ತಮ್ಮ ಅನ್ನವನ್ನು ತಾವೇ ದುಡಿದು ಕೊಳ್ಳುವುದು ಹೆಚ್ಚುತ್ತಿರುವ ಈ ಹೊತ್ತಿನಲ್ಲಿ ಪುರುಷ ಪ್ರಧಾನ ಶಕ್ತಿಗಳು ತಮ್ಮ ಬಲ ಕಳೆದುಕೊಳ್ಳುತ್ತಿವೆ. ಎಲ್ಲ ಆಸ್ತಿಗಳಲ್ಲಿಯೂ ಮಹಿಳೆಯರಿಗೆ ಅರ್ಧ ಪಾಲು ದೊರೆತರೆ, ಪುರುಷ ಪ್ರಧಾನ ವ್ಯವಸ್ಥೆಗೆ ನೇರ ಸವಾಲು ಎದುರಾಗಬಹುದು. ಆ ಸವಾಲು ಆರ್ಥಿಕ ನೆಲೆಯಲ್ಲಿ ಮಾತ್ರ ಉಳಿದುಕೊಳ್ಳುವುದಿಲ್ಲ. ಅದು ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ನೆಲೆಗಳಿಗೂ ವ್ಯಾಪಿಸಿಕೊಳ್ಳುತ್ತದೆ.



ಚುರುಮುರಿ



ಮದುವೆ ಜರ್ನಿ

• ಮಣ್ಣೆರಾಜು

ಜಡಿಮಳೆಯಲ್ಲಿ ಶಂಕ್ರಿ, ಸುಮಿ ಸ್ಕೂಟರ್ ಏರಿ ಮದುವೆಗೆ ಹೊರಟಿದ್ದರು.

'ಕಲ್ಯಾಣಮಂಟಪ ತುಂಬಾ ಹತ್ತಿರ, ಎರಡು ರೋಡ್ ಕ್ರಾಸ್ ಮಾಡಿದ್ರೆ ಸಿಗುತ್ತೆ, ಬೇಗ ಹೋಗಿಬಿಡೋಣ...' ಎಂದು ಶಂಕ್ರಿ ಹೆಂಡತಿಗೆ ಹೇಳಿದ್ದ. ಸ್ವಲ್ಪ ದೂರ ಹೋಗುತ್ತಿದ್ದಂತೆ ಟ್ರಾಫಿಕ್ ಪೊಲೀಸರು ಕೈ ಅಡ್ಡ ಹಾಕಿದರು.

'ಹೆಲ್ಮೆಟ್ ಹಾಕಿದ್ದೀವಿ, ಡಿಎಲ್, ಡಾಕ್ಯುಮೆಂಟ್ಸ್ ಕರೆಕ್ಟಾಗಿದೆ' ಅಂದ ಶಂಕ್ರಿ.

'ನೀವು ಕರೆಕ್ಟಾಗಿದ್ದೀರಿ, ಪರಿಸ್ಥಿತಿ ಕರೆಕ್ಟಾಗಿಲ್ಲ, ಬೆಲೆ ಏರಿಕೆ ಖಂಡಿಸಿ ಹೋರಾಟಗಾರರು ಈ ರೋಡಲ್ಲಿ ಮೆರವಣಿಗೆ ಬರ್ತಿದ್ದಾರೆ, ಮುಂದೆ ಹೋಗಲಾಗದು, ಪಕ್ಕದ ರೋಡಲ್ಲಿ ಹೋಗಿ' ಅಂದ್ರು ಪೊಲೀಸರು. ಶಂಕ್ರಿ ಪಕ್ಕದ ರಸ್ತೆಗೆ ಸ್ಕೂಟರ್ ತಿರುಗಿಸಿದ.

ಅಲ್ಲೂ ಪೊಲೀಸರ ಅಡ್ಡಗೈ. 'ಮಳೆ ಬಂದು ರಸ್ತೆ ಕುಸಿದಿದೆ, ಸಂಚಾರ ಬಂದ್ ಮಾಡಿದ್ದೀವಿ, ಟೇಕ್ ಡೈವರ್ಷನ್' ಅಂದರು. ಶಂಕ್ರಿ ಡೈವರ್ಷನ್ ತಗೊಂಡ.

ಮುಂದೆ ಹೋದಾಗ ಮತ್ತೆ ಪೊಲಿಸರು ತಡೆದರು. 'ವಿವಿಐಪಿ ಪಾಸ್ ಆಗ್ತಿದ್ದಾರೆ. ಅವರು ಹೋಗೋವರೆಗೂ ವೇಯ್ಟ್ ಮಾಡಿ ಇಲ್ಲವೇ ಇನ್ನೊಂದು ರಸ್ತೆಯಲ್ಲಿ ಹೋಗಿ' ಎಂದರು. ಶಂಕ್ರಿ ರಸ್ತೆ ಬದಲಿಸಿದ.

ಅಲ್ಲಿ ಪೊಲೀಸರು ವಿಶಲ್ ಊದಿ ತಡೆದರು, 'ಇದು ಒನ್ ವೇ ಕಣ್ರೀ, ಗೊತ್ತಾಗಲ್ವಾ?' ಅಂತ ರೇಗಿದರು. ಶಂಕ್ರಿ ಸ್ಕೂಟರ್ ತಿರುಗಿಸಿದ.

'ಸಾರ್, ಮುಂದೆ ಹೋಗ್ಬೇಡಿ, ಅಲ್ಲಿ ಆ್ಯಕ್ಸಿಡೆಂಟ್ ಆಗಿ ಟ್ರಾಫಿಕ್ ಜಾಮ್ ಆಗಿದೆ, ವೆಹಿಕಲ್ಸ್ ಬಿಡ್ತಿಲ್ಲ' ಅಂದ ಒಬ್ಬ. ಇನ್ನೊಂದು ರಸ್ತೆಗೆ ಶಂಕ್ರಿ ಸ್ಕೂಟರ್ ನುಗ್ಗಿಸಿದ.

ಕಡೆಗೂ ಕಲ್ಯಾಣಮಂಟಪ ಸೇರಿದರು. ಸುಮಿಯ ರೇಷ್ಮೆ ಸೀರೆ ಒದ್ದೆಯಾಗಿ ನೀರು ಸುರಿಯುತ್ತಿತ್ತು. ಮುಖದ ಮೇಕಪ್ ಮಳೆಯಲ್ಲಿ ಕರಗಿ ಕಾಣೆಯಾಗಿತ್ತು.

'ಯಾಕೆ ಲೇಟು?...' ಎಂದು ಮದುವೆ ಮನೆಯವರು ಕೇಳಿ, ಪನ್ನೀರು ಚಿಮುಕಿಸಿ ಸ್ವಾಗತಿಸಿದರು.

ಸಂಗತ

'ಕಾಡಿನ ರಾಜ' ಕೊಟ್ಟಿಗೆಗೆ ಬಂದಾನು!

ವಿಶ್ವ ಸಿಂಹ ದಿನಾಚರಣೆಯ ಈ ವೇಳೆ ಸಿಂಹಗಳನ್ನು ಸಂರಕ್ಷಿಸಿ ಎನ್ನುವುದಕ್ಕಿಂತ ಅವುಗಳ ವಾಸನೆಲೆಗಳನ್ನು ಸಂರಕ್ಷಿಸಿ ಎನ್ನುವುದೇ ಹೆಚ್ಚು ಸಮಂಜಸ

• ಬಿ.ಎಸ್.ಭಗವಾನ್

'ಕಾಡಿನ ರಾಜ' ಎಂದು ಕರೆಸಿಕೊಂಡಿರುವ ಸಿಂಹವು ಬೇಟೆಯ ಕೊರತೆ, ಆವಾಸದ ಅಭಾವ, ಮನುಷ್ಯನ ಅತಿಕ್ರಮಣದಿಂದಾಗಿ ಸೊರಗಿದೆ. ಹಲವರು ತಮ್ಮ ಸಾಕುಪ್ರಾಣಿಗಳ ರಕ್ಷಣೆಗೆ, ಮೋಜಿಗೆ ಸಿಂಹಗಳನ್ನು ಕೊಲ್ಲುವುದಿದೆ. ಗಾಯಗೊಂಡ ಸಿಂಹಗಳು ಇತರ ಪ್ರಾಣಿಗಳಿಂದ ಒಂದಿಲ್ಲೊಂದು ಸೋಂಕಿಗೆ ಒಳಗಾಗಿ ಅಸುನೀಗುತ್ತವೆ.

ಜಾಗತಿಕ ಮಟ್ಟದಲ್ಲಿ ಈ 25 ವರ್ಷಗಳಲ್ಲಿ ಸಿಂಹಗಳ ಸಂಖ್ಯೆ ಅರ್ಧದಷ್ಟು ಕಡಿಮೆಯಾಗಿದೆ. ಸ್ವಿಟ್ಜರ್ಲೆಂಡ್‌ನಲ್ಲಿ ಕೇಂದ್ರ ಸ್ಥಾನವುಳ್ಳ ಅಂತರ ರಾಷ್ಟ್ರೀಯ ಪ್ರಕೃತಿ ಸಂರಕ್ಷಣಾ ಒಕ್ಕೂಟ (ಇಂಟರ್ ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್), 'ಸಿಂಹದ ಹಲವು ಪ್ರಭೇದಗಳು ಅಳಿವಿನಂಚಿನಲ್ಲಿವೆ, ಇದನ್ನು ತಪ್ಪಿಸುವ ಜರೂರಿದೆ' ಎಂದು ಎಚ್ಚರಿಸಿದೆ. ಸದ್ಯ ಜಗತ್ತಿನಲ್ಲಿ ಪ್ರಮುಖವಾಗಿ ಉಳಿದಿರುವ ಸಿಂಹ ಪ್ರಭೇದಗಳೆಂದರೆ ಆಫ್ರಿಕನ್ ಲಯನ್ ಮತ್ತು ಗಾತ್ರದಲ್ಲಿ ಅದಕ್ಕಿಂತ ಚಿಕ್ಕದಾದ ಏಷ್ಯಾಟಿಕ್ ಲಯನ್.

ಸಿಂಹಗಳು ಪರಿಸರ ವ್ಯವಸ್ಥೆಯ ಆರೋಗ್ಯದ ನಿರ್ಣಾಯಕಗಳು. ಸಿಂಹಕ್ಕೆ ಆಹಾರ ಸರಪಳಿಯಲ್ಲಿ ಮುಖ್ಯ ಸ್ಥಾನವಿದೆ. ಬದುಕುಳಿಯಲು ಯಾವುದು ಯಾವುದನ್ನು ಸೇವಿಸಬೇಕು ಎನ್ನುವುದರ ಪ್ರಕೃತಿಯ ನಿಯೋಜನೆ ಅದ್ಭುತ. ಅದು, ಅಂತರ್‌ಸಂಬಂಧವುಳ್ಳ ಆಹಾರ ಸರಣಿಗಳ ಮಾಲೆಯಿಂದ ಒಂದಕ್ಕೊಂದು ಹೆಣೆದ ಅನನ್ಯ ವಿನ್ಯಾಸ. ಬಹು ಸಂಕೀರ್ಣವಾದ ಆಹಾರ ಜಾಲದಲ್ಲಿ ಕಿಂಚಿತ್ತು ವ್ಯತ್ಯಯವಾದರೂ ನಿಸರ್ಗ ನಿಟ್ಟುಸಿರುಬಿಡುತ್ತದೆ. ಸಿಂಹವು ಮಾಂಸಾಹಾರಿ ಚಿಕ್ಕ ಪ್ರಾಣಿಗಳು ಮತ್ತು ಸಸ್ಯಾಹಾರಿ ದೊಡ್ಡ ಪ್ರಾಣಿಗಳ ಸಂಖ್ಯೆಯನ್ನು ಸಮತೋಲನದಲ್ಲಿ ಇಡುತ್ತದೆ. ಅದು, ಮಾಂಸಾಹಾರಿ ಚಿಕ್ಕ ಪ್ರಾಣಿಗಳನ್ನಲ್ಲದೆ ಹೆಚ್ಚುವರಿ ಸಸ್ಯಾಹಾರಿ ಪ್ರಾಣಿಗಳನ್ನೂ ಬೇಟೆಯಾಡುವುದು ವಿಶೇಷ.

ನೆಲಹರವು ಹಸಿರಿನಿಂದ ನಳನಳಿಸುವುದಕ್ಕೂ ಪ್ರಕೃತಿಯು ಪರೋಕ್ಷ ಮಿತಿ ವಿಧಿಸಿಬಿಟ್ಟಿದೆ. ಇತ್ತ ಮರುಭೂಮಿಯೂ ಬೇಡ, ಅತ್ತ ಅತಿ ಹಸಿರೂ ಬೇಡ ಎನ್ನುವ ಇರಾದೆ ನಿಸರ್ಗದ್ದು. ಹೀಗೆ ವನ್ಯ-ಮೃಗಗಳಿಂದ ನಮಗೆ ಎಲೆಮರೆಯ ಕಾಯಿಯಂತೆ ಪರೋಕ್ಷ ಮಹದುಪಕಾರ. ಮನುಷ್ಯ ಅವುಗಳೊಂದಿಗೆ ಸಂಘರ್ಷಕ್ಕಿಳಿಯುವುದೇ ವಿಪರ್ಯಾಸ. ವನ್ಯಜೀವ ಅಥವಾ 'ವೈಲ್ಡ್ ಲೈಫ್' ಎಂಬುದು ಪಾಲಿಸದ, ಪಳಗಿಸದ ಮತ್ತು ಸ್ವಾಭಾವಿಕ ವಾಸನೆಲೆಗಳಲ್ಲಿ ಜೀವಿಸುವ ಇಡೀ ಪ್ರಾಣಿ ಸಮುದಾಯವನ್ನು ಪ್ರತಿನಿಧಿಸುತ್ತದೆ.

ವಿಶ್ವಮಟ್ಟದಲ್ಲಿ ಪ್ರತೀ 5 ವರ್ಷಗಳಿಗೊಮ್ಮೆ ಸಿಂಹ ಗಣತಿ ನಡೆಯುವುದು. ಶತಮಾನದ ಹಿಂದೆ ಸಿಂಹಗಳ ತವರಾದ ಆಫ್ರಿಕಾಖಂಡದಲ್ಲೇ ಒಟ್ಟು ಒಂದು ಲಕ್ಷ ಸಿಂಹಗಳಿದ್ದವು. ಆದರೆ ಇಂದು ಜಗತ್ತಿನಲ್ಲಿ 20,000 ಸಿಂಹಗಳಷ್ಟೇ ಇವೆ. ಭಾರತದಲ್ಲಿ ಗುಜರಾತ್‌ನ ಗಿರ್ ರಾಷ್ಟ್ರೀಯ ಉದ್ಯಾನದಲ್ಲಿ 2015ರಲ್ಲಿ 523 ಸಿಂಹಗಳಿದ್ದವು. 2020ರಲ್ಲಿ ಈ ಸಂಖ್ಯೆ 674ಕ್ಕೆ ಏರಿದ್ದು ನಾವು ಹೆಮ್ಮೆಪಡಬಹುದಾದ ಮಹತ್ವದ ಬೆಳವಣಿಗೆ.

ಹಿಂದೆ ಬೆಟ್ಟ ಗುಡ್ಡಗಳಲ್ಲಿ ಪೊದೆ, ಬಂಡೆಗಳ ಮರೆಯನ್ನೇ ಮನೆಯಾಗಿಸಿಕೊಂಡು ಸಿಂಹ ಸುರಕ್ಷಿತ ವಾಗಿತ್ತು. ಮನುಷ್ಯನ ಕಾಂಕ್ರೀಟು ವ್ಯಾಮೋಹದಿಂದಾಗಿ ಅದಕ್ಕೆ ಒದಗಿದ ದುರ್ಗತಿ ಎಂಥದ್ದು? ಕೆಲವೇ ಮರಗಳುಳ್ಳ ವಿಶಾಲ ಹುಲ್ಲಿನ ನೆಲಹರವಿದ್ದ ರಾಯಿತು, ಅಲ್ಲಿಯೇ ಬದುಕುವ ಅನಿವಾರ್ಯ ಸ್ಥಿತಿ ಅದಕ್ಕೆ ತಲೆದೋರಿತು. ಕೆಲವು ಪ್ರಿಯ ಬೇಟೆಗಳು ಬಹು ಅಪರೂಪವಾದವು. ಮುಂದೊಂದು ದಿನ ಕೊಟ್ಟಿಗೆಯಲ್ಲಿ ಚಿರತೆ, ಹುಲಿಯ ಹಾಗೆ ಸಿಂಹ ಪ್ರತ್ಯಕ್ಷ-ವಾದರೂ ಅಚ್ಚರಿಯೇನಿಲ್ಲ!

ಸುದೈವವಶಾತ್ ಸಿಂಹಕ್ಕೆ ಕೆರೆಕುಂಟೆಗಳ ಅಗತ್ಯ ಅಷ್ಟಾಗಿಲ್ಲ. ಬೇಟೆಗೆ ಸಿಲುಕುವ ಪ್ರಾಣಿಗಳಿಂದಲೇ ಅದು ನೀರನ್ನು ದಕ್ಕಿಸಿಕೊಳ್ಳುತ್ತದೆ. ಸಿಂಹವು ಕಾಡೇ ಇಲ್ಲದ 'ಕಾಡಿನ ರಾಜ' ಎನ್ನಿಸಿಕೊಳ್ಳಲು ಬಿಡಬಾರದು. ವಿಶ್ವ ಸಿಂಹ ದಿನಾಚರಣೆಯ (ಆ. 10) ಈ ಸಂದರ್ಭದಲ್ಲಿ, ಸಿಂಹಗಳನ್ನು ಸಂರಕ್ಷಿಸಿ ಎನ್ನುವುದಕ್ಕಿಂತ ಸಿಂಹಗಳ ವಾಸನೆಲೆಗಳನ್ನು ಸಂರಕ್ಷಿಸಿ ಎನ್ನುವುದೇ ಹೆಚ್ಚು ಸಮಂಜಸ.



ಅಸಾಧಾರಣ ಸ್ಮರಣಶಕ್ತಿ, ಸೀಮಾಪ್ರಜ್ಞೆ, ಬೇಟೆಯಾಡುವಾಗ ಸಿಂಹಗಳು ತೋರುವ ತಂತ್ರ, ಕೌಶಲಕ್ಕೆ ಸಾಟಿಯಿಲ್ಲ. ತನ್ನ ಸ್ಥೈರ್ಯ, ಸಹನೆಯಿಂದಾಗಿಯೇ ಸಿಂಹ ಭಾರತವೂ ಸೇರಿದಂತೆ ಹಲವು ದೇಶಗಳ ರಾಷ್ಟ್ರೀಯ ಲಾಂಛನಗಳಲ್ಲಿದೆ. 11 ಮೀಟರ್ ಎತ್ತರಕ್ಕೆ ನೆಗೆತ, ತಾಸಿಗೆ 80 ಕಿ.ಮೀ. ವೇಗದ ಓಟ. ಪೂರ್ವಾಪರ ಅವಲೋಕನಕ್ಕೆ ಪರ್ಯಾಯ ಹೆಸರೇ ಸಿಂಹ! 'ಪ್ರತಿಯೊಬ್ಬ ಧೈರ್ಯಶಾಲಿಯ ಹೃದಯದಲ್ಲೂ ಸಿಂಹ ನಿದ್ರಿಸುತ್ತದೆ' ಎನ್ನುವುದು ಟರ್ಕಿ ದೇಶದ ಗಾದೆ.

ಸಿಂಹ ಬೇಟೆ ವಿರೋಧಿ ಆಂದೋಲನದ ಸಂಘ, ಸಂಸ್ಥೆಗಳಿಗೆ ವಂತಿಗೆ ಸಲ್ಲಿಕೆಯೂ ಸಿಂಹ ಸಂರಕ್ಷಣೆಯತ್ತ ಒಂದು ದಿಟ್ಟ ಹೆಜ್ಜೆಯೆ. ಭೂಮಿಯ ತಾಪಮಾನ ಏರಿಕೆ, ಸಾಗರ ಮಟ್ಟದ ಏರಿಕೆ, ವಾತಾವರಣ ವೈಪರೀತ್ಯ ನಿವಾರಣೆಗೆ ಬೇಕಾದ ಉಪಕ್ರಮಗಳನ್ನು ಆದ್ಯತೆಯ ಮೇಲೆ ಕೈಗೊಳ್ಳುವುದು ಈಗಿನ ತುರ್ತು ಅಗತ್ಯ. ಅದರಲ್ಲಿ ಅರಣ್ಯೀಕರಣದ ಪಾತ್ರ ಹೆಚ್ಚು ಮಹತ್ವದಿಂದ ಕೂಡಿದೆ. ಬೇರೆ ಬೇರೆ ಹಂತಗಳಲ್ಲಿ ಆ ಕೆಲಸ ಆಗಬೇಕು. ಸಂಘ–ಸಂಸ್ಥೆಗಳು, ನಾಗರಿಕರು ಮತ್ತು ಸರ್ಕಾರ ಈ ದಿಸೆಯಲ್ಲಿ ಕೈಜೋಡಿಸಬೇಕು.

ವಾಚಕರ ವಾಣಿ

ಕ್ರೀಡಾಳುಗಳಿಗೆ ಸಿಗಲಿ ಹೆಚ್ಚಿನ ಪ್ರೋತ್ಸಾಹ

ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತವು ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಪಡೆದು ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ. ಆದರೆ ವೇಟ್‌ಲಿಫ್ಟಿಂಗ್ ವಿಭಾಗದಲ್ಲಿ ಕಂಚಿನ ಪದಕ ಪಡೆದಿರುವ ಗುರುರಾಜ ಪೂಜಾರಿ ಅವರು, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಪದಕ ಗೆದ್ದವರಿಗೆ ರಾಜ್ಯ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಧನ ತುಂಬಾ ಕಡಿಮೆ ಇದೆ ಎಂದು ಬೇಸರ ವ್ಯಕ್ತಪಡಿಸಿರುವುದು ಗಮನಾರ್ಹ.

ಭಾರತೀಯ ಕ್ರೀಡಾಪಟುಗಳು ಪ್ರತಿಷ್ಠಿತ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ಮಾಡಿ, ದೇಶದ ಕೀರ್ತಿಪತಾಕೆ ಉತ್ತುಂಗದಲ್ಲಿ ಹಾರಾಡುವಂತೆ ಮಾಡಬೇಕೆಂದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರೀಡಾಪಟುಗಳಿಗೆ ಹೆಚ್ಚು ಉತ್ತೇಜನ ನೀಡಬೇಕು. ಉದ್ಯೋಗ ಕಲ್ಪಿಸಬೇಕು. ಪ್ರೋತ್ಸಾಹಧನ ನೀಡಬೇಕು. ಅನುಕೂಲಕರ ವಾತಾವರಣವನ್ನು ಸೃಷ್ಟಿಸಿಕೊಡಬೇಕು.

ವಿ.ತಿಪ್ಪೇಸ್ವಾಮಿ, ಹಿರಿಯೂರು

ಬಾಡಿಗೆ ತಾಯ್ತನ: ನೈತಿಕ ಬಡತನ ಬಾರದಿರಲಿ

ಬಾಡಿಗೆ ತಾಯ್ತನಕ್ಕೆ ಸಂಬಂಧಿಸಿದ ಕಾಯ್ದೆಯಲ್ಲಿನ ಅಂಶಗಳನ್ನು ಡಾ. ಗೀತಾ ಕೃಷ್ಣಮೂರ್ತಿ ಚೆನ್ನಾಗಿ ವಿವರಿಸಿದ್ದಾರೆ (ಪ್ರ.ವಾ., ಆ. 9). ಆದರೆ ಬಾಡಿಗೆ ತಾಯ್ತನಕ್ಕೆ ಇರುವ ಅವಕಾಶವನ್ನೇ ರದ್ದು ಮಾಡುವುದು ಸೂಕ್ತ. ದೇಶದಲ್ಲಿ ಲಕ್ಷಾಂತರ ಮಕ್ಕಳು, ಹಸುಗೂಸುಗಳು ಅನಾಥಾಶ್ರಮಗಳಲ್ಲಿ ಬೆಳೆಯುತ್ತಿವೆ. ಮಕ್ಕಳಿಲ್ಲದವರು ಇಂತಹ ಮಕ್ಕಳನ್ನೇ ದತ್ತು ಪಡೆದು ಅವುಗಳ ಜೀವನಕ್ಕೆ ಭದ್ರತೆ ಒದಗಿಸಲು ನಮ್ಮ ದೇಶದ ಕಾನೂನಿನಲ್ಲಿ ಅವಕಾಶ ಇದೆ. ಅದರ ಪ್ರಯೋಜನ ಪಡೆಯಬೇಕು. ಮಹಿಳೆಯ ಜೀವನದಲ್ಲಿ ಬರುವ ಪವಿತ್ರ ಮತ್ತು ಭಾವನಾತ್ಮಕ ಹಂತವಾದ ತಾಯ್ತನದ ವಾಣಿಜ್ಯೀಕರಣವನ್ನು ತಪ್ಪಿಸಲು ಇದರಿಂದ ಸಾಧ್ಯವಾಗುತ್ತದೆ.

ಕಲ್ಮೇಶ್ ಬಿರಾದಾರ, ವಿಜಯಪುರ

ಆಟಗಾರರ ಆಯ್ಕೆ: ಪಾರದರ್ಶಕ ವ್ಯವಸ್ಥೆ ಬೇಕು

ಈ ಬಾರಿಯ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತದ ಸಾಧನೆ ತೃಪ್ತಿಕರವಾಗಿದೆಯಾದರೂ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರಮಾದಗಳು ಆಗಿವೆ. ಸ್ಪರ್ಧಾಳುಗಳ ಆಯ್ಕೆ ಪಾರದರ್ಶಕವಾಗಿರಲಿಲ್ಲ ಅನ್ನುವುದಕ್ಕೆ ತೇಜಸ್ವಿನ್ ಶಂಕರ್ ಅವರಿಗೆ ಹೈಜಂಪ್‌ನಲ್ಲಿ ಭಾಗವಹಿಸುವ ಎಲ್ಲ ಅರ್ಹತೆಗಳಿದ್ದರೂ ಮೊದಲಿಗೆ ಆಯ್ಕೆಯಾಗದಿದ್ದುದೇ ನಿದರ್ಶನ. ಅನಿವಾರ್ಯವಾಗಿ ಹೈಕೋರ್ಟ್ ಮೆಟ್ಟಿಲೇರಿ ಅವರು ಸ್ಥಾನ ಪಡೆದರು. ಇದೆಲ್ಲದರಿಂದ ಮಾನಸಿಕವಾಗಿ ಕುಗ್ಗಿ ಹೋಗಿದ್ದರ ನಡುವೆಯೂ ಕಂಚಿನ ಪದಕ ಗೆದ್ದರು.

ಆದರೆ ಅದೆಷ್ಟೋ ಕ್ರೀಡಾಪಟುಗಳು ಹೀಗೆ ಅನ್ಯಾಯಕ್ಕೆ ಒಳಗಾಗಿ ಮೊಳಕೆಯಲ್ಲೇ ಕಮರಿ ಹೋಗುವ ಸಾಧ್ಯತೆ ಇರುತ್ತದೆ. ಇದಕ್ಕೆ ಕಾರಣರಾದ ದುಷ್ಟಶಕ್ತಿಗಳನ್ನು ಪತ್ತೆ ಮಾಡಿ ದಂಡಿಸಬೇಕು. ಆಟಗಾರರನ್ನು ಆಯ್ಕೆ ಮಾಡುವ ವ್ಯವಸ್ಥೆಗೆ ಭರ್ಜರಿ ಸರ್ಜರಿ ಆಗಬೇಕು.

ಹನುಮಂತಪ್ಪ, ನರಗುಂದ

ಅನಗತ್ಯ ದೃಢೀಕರಣ ಏಕೆ?

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಜೂನಿಯರ್ ಅಸಿಸ್ಟೆಂಟ್ ಹುದ್ದೆಗೆ ಸಂಬಂಧಿಸಿದ ಪರೀಕ್ಷೆಯ ಪ್ರವೇಶ ಪತ್ರದಲ್ಲಿ ಅಭ್ಯರ್ಥಿಗಳು ಗೆಜೆಟೆಡ್ ಅಧಿಕಾರಿಗಳ ದೃಢೀಕರಣ ಮಾಡಿಸಬೇಕು ಎಂಬ ನಿಬಂಧನೆ ಹಾಕಲಾಗಿತ್ತು. ಇದರಿಂದ ಅಭ್ಯರ್ಥಿಗಳು ಪರೀಕ್ಷೆಗೆ ಅಭ್ಯಾಸ ನಡೆಸುವುದು ಬಿಟ್ಟು ಅಧಿಕಾರಿಗಳ ಸಹಿ ಪಡೆಯಲು ಕಚೇರಿ ಸುತ್ತಬೇಕಾಯಿತು.

ಪ್ರಾಧಿಕಾರ ನಡೆಸುವ ಪರೀಕ್ಷೆಗಳಲ್ಲಿ ಇಂತಹ ದೃಢೀಕರಣ ಸಹಿ ಏತಕ್ಕಾಗಿ ಎಂಬುದು ತಿಳಿಯುವುದಿಲ್ಲ. ಇದು ಅನಗತ್ಯ ಎಂದಾದರೆ, ಮುಂದೆ ನಡೆಯುವ ಪರೀಕ್ಷೆಗಳಲ್ಲಿ ಪ್ರಾಧಿಕಾರವು ಈ ರೀತಿ ಅನವಶ್ಯಕವಾಗಿ ತೊಂದರೆ ಕೊಡುವುದನ್ನು ನಿಲ್ಲಿಸಲಿ.

ಗಿರೀಶ್ ನಾವಿ, ವಿಜಯಪುರ

ಸ್ಪೋಕನ್ ಇಂಗ್ಲಿಷ್ ತರಗತಿ: ಎಲ್ಲೆಡೆ ಆರಂಭವಾಗಲಿ

ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಸ್ಪೋಕನ್ ಇಂಗ್ಲಿಷ್ ತರಗತಿ ಆರಂಭಿಸುವುದಾಗಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಹೇಳಿರುವುದು ಉತ್ತಮ ಹಾಗೂ ಸ್ವಾಗತಾರ್ಹ ನಡೆ. ರಾಜ್ಯದ ಬಹುತೇಕ ಗ್ರಾಮೀಣ ಶಾಲೆಗಳ ಮಕ್ಕಳಿಗೆ ಇಂಗ್ಲಿಷ್ ಕಗ್ಗಂಟಿನ ವಿಷಯ. ಇದೀಗ ಸರ್ಕಾರಿ ಶಾಲೆಗಳಲ್ಲಿ ಸ್ಪೋಕನ್ ಇಂಗ್ಲಿಷ್ ತರಗತಿ ಆರಂಭಿಸುವುದ ರಿಂದ ಇಂಗ್ಲಿಷ್ ಭಾಷೆ ಬಗೆಗಿನ ದಿಗಿಲು ನಿವಾರಣೆಯಾಗಲಿದೆ.

ಶಿಕ್ಷಣ ಸಚಿವರ ಹೇಳಿಕೆಯು ಬಾಯಿಮಾತಿಗೆ ಸೀಮಿತವಾಗದೆ, ಆದಷ್ಟು ಶೀಘ್ರ ಎಲ್ಲೆಡೆ ಜಾರಿಗೊಳ್ಳಲಿ. ಈ ಮೂಲಕ ಸರ್ಕಾರಿ ಶಾಲೆಗಳತ್ತ ಹೆಚ್ಚು ಹೆಚ್ಚು ಮಕ್ಕಳು ಆಕರ್ಷಿತರಾಗುವಂತೆ ಆಗಲಿ.

ಜಿ.ಎಸ್.ಬಸವರಾಜಪ್ಪ, ಸಾಸಿವೆಹಳ್ಳಿ, ಹೊನ್ನಾಳಿ

ಉಚಿತ ಕೊಡುಗೆ 'ಅಸ್ತ್ರ' ಕಳವಳಕಾರಿ

ಚುನಾವಣೆ ವೇಳೆ ರಾಜಕೀಯ ಪಕ್ಷಗಳು ಮತದಾರರನ್ನು ಸೆಳೆಯಲು ಘೋಷಣೆ ಮಾಡುವ ಉಚಿತ ಕೊಡುಗೆಗಳಿಂದ ದೇಶದ ಆರ್ಥಿಕತೆ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ಈ ಹಿಂದೆ ಒಂದೆರಡು ರಾಜ್ಯಗಳಿಗೆ ಸೀಮಿತವಾಗಿದ್ದ ಉಚಿತ ಕೊಡುಗೆಗಳ ಭರಾಟೆಯು ಈಗ ದೇಶದಾದ್ಯಂತ ಮತದಾರರನ್ನು ಸೆಳೆಯುವ ಅಸ್ತ್ರದಂತೆ ಬಳಕೆಯಾಗುತ್ತಿರುವುದು ಕಳವಳಕಾರಿ. ಹೇಗಾದರೂ ಸರಿ ಅಧಿಕಾರಕ್ಕೆ ಏರಲೇಬೇಕು ಎಂಬ ಉಮೇದಿನೊಂದಿಗೆ ರಾಜಕೀಯ ಪಕ್ಷಗಳು ಚುನಾವಣೆ ಪೂರ್ವದಲ್ಲಿ ಮಾಡುವ ಈ ಘೋಷಣೆಗಳು ಜಾರಿಗೆ ಬಂದರೆ ಅವುಗಳ ಹೊರೆ ಬೀಳುವುದು ತೆರಿಗೆದಾರರ ಮೇಲೆಯೇ.


ರಾಜಕೀಯ ಪಕ್ಷಗಳು ಆದಾಯ ಹೆಚ್ಚಳ, ಆರ್ಥಿಕ ವೃದ್ಧಿ ಹಾಗೂ ಉದ್ಯೋಗಾವಕಾಶಗಳ ಮೂಲಕ ದುಡಿಯುವ ವರ್ಗವನ್ನು ಸೃಷ್ಟಿಸಬೇಕೇ ವಿನಾ ಉಚಿತ ಕೊಡುಗೆಗಳನ್ನು ನೀಡುವ ಮೂಲಕ ರಾಜ್ಯಗಳ ಆರ್ಥಿಕತೆಯನ್ನು ಹದಗೆಡಿಸು ವುದಲ್ಲ. ಈ ಸಂಬಂಧ ತಜ್ಞರ ಸಮಿತಿ ರಚನೆಗೆ ಸುಪ್ರೀಂ ಕೋರ್ಟ್ ನಿರ್ದೇಶಿಸಿರುವುದು ಪ್ರಶಂಸನೀಯ ಸಂಗತಿ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಸಿರು ಹೊದ್ದ ಕೋಸ್ಟರೀಕ ಮರ ಬೆಳೆಸಿದರೆ ಭತ್ಯೆ


ಪಶ್ಚಿಮ ಘಟ್ಟದ ಕೆಲವು ಭಾಗಗಳನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವುದಕ್ಕೆ ಸಂಬಂಧಿಸಿದ ಕರಡು ಅಧಿಸೂಚನೆಯು ತೀವ್ರ ಚರ್ಚೆಗೆ ಒಳಗಾಗಿದೆ. ಈ ಕರಡನ್ನು ತಿರಸ್ಕರಿಸುವುದಾಗಿ ಕರ್ನಾಟಕ ಸರ್ಕಾರ ಹೇಳಿದೆ. ಆದರೆ ಪರಿಸರ ರಕ್ಷಣೆಗೆ ಸರ್ಕಾರದ ಬಳಿ ಸ್ಪಷ್ಟವಾದ ನೀತಿ ಇದ್ದಂತಿಲ್ಲ. ಮಧ್ಯ ಅಮೆರಿಕದ ಪುಟ್ಟ ದೇಶ ಕೋಸ್ಟರೀಕವು ಇದ್ದ ಕಾಡನ್ನೆಲ್ಲ ಕಳೆದುಕೊಂಡಿತು. ಆದರೆ, ಪ್ರಮಾದವನ್ನು ಅರಿತುಕೊಂಡ ಸರ್ಕಾರ ಪರಿಣಾಮಕಾರಿ ನೀತಿ ಮೂಲಕ ದೇಶದ ಶೇ 55 ಭಾಗವನ್ನು ಹಸಿರಾಗಿಸಿಕೊಂಡಿದೆ. ಕೋಸ್ಟರೀಕದ ಈ ಯಶೋಗಾಥೆಯನ್ನು ಜಗತ್ತಿನ ಅತ್ಯುತ್ತಮ ಮಾದರಿ ಎಂದು ಹೇಳಲಾಗುತ್ತಿದೆ



1940
75% ಅರಣ್ಯ ಪ್ರದೇಶದ ವ್ಯಾಪ್ತಿ



1987
21% ಅರಣ್ಯ ಪ್ರದೇಶದ ವ್ಯಾಪ್ತಿ



1997
42% ಅರಣ್ಯ ಪ್ರದೇಶದ ವ್ಯಾಪ್ತಿ




2005
51% ಅರಣ್ಯ ಪ್ರದೇಶದ ವ್ಯಾಪ್ತಿ



2010
53% ಅರಣ್ಯ ಪ್ರದೇಶದ ವ್ಯಾಪ್ತಿ

ಪ್ರಜಾವಾಣಿ ವಾರ್ತೆ



2020
55% ಅರಣ್ಯ ಪ್ರದೇಶದ ವ್ಯಾಪ್ತಿ



ಜನರನ್ನು ಒಳಗೊಂಡು ನಡೆಸಲಾಗುವ ಪರಿಸರ ಸಂರಕ್ಷಣೆ ಮತ್ತು ಅರಣ್ಯೀಕರಣಕ್ಕೆ ಕೋಸ್ಟರೀಕ ಅನುಸರಿಸುತ್ತಿರುವ ಮಾದರಿಯು, ಅತ್ಯಂತ ಯಶಸ್ವಿ ಎಂದು ಹೆಸರಾಗಿದೆ. ಜನ ಸಾಮಾನ್ಯರು ತಮ್ಮ ಹಿತ್ತಲು, ಕೈತೋಟ, ಕೃಷಿ ಭೂಮಿಯಲ್ಲಿ ಬೆಳೆಸುವ ಪ್ರತಿ ಮರಕ್ಕೂ ಸರ್ಕಾರವು ಇಂತಿಷ್ಟು ಎಂದು ಹಣವನ್ನು ನೀಡುತ್ತದೆ. ಹೀಗೆ ಪರಿಸರ ಸಂರಕ್ಷಣೆಗೆ ಉತ್ತೇಜನವಾಗಿ ಹಣ ನೀಡುವ ನೀತಿಯಿಂದ ಕೋಸ್ಟರೀಕವು ಬಹಳಷ್ಟನ್ನು ಸಾಧಿಸಿದೆ.

ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕ ಖಂಡಗಳ ನಡುವೆ ಇರುವ ಒಂದು ಸಣ್ಣ ರಾಷ್ಟ್ರ ಕೋಸ್ಟರೀಕ. ಎರಡು ಕಡೆ ಸಮುದ್ರದಿಂದ ಸುತ್ತುವರಿದಿರುವ ಈ ದೇಶದಲ್ಲಿ ಅರಣ್ಯವೇ ಪ್ರಮುಖ ನೈಸರ್ಗಿಕ ಸಂಪನ್ಮೂಲ. 1940ರ ಸುಮಾರಿನಲ್ಲಿ ದೇಶದ ಒಟ್ಟು ವಿಸ್ತೀರ್ಣದಲ್ಲಿ ಅರಣ್ಯ ಪ್ರದೇಶದ ಪ್ರಮಾಣವು ಶೇ 75ರಷ್ಟು ಇತ್ತು. ಆದರೆ, ನಗರೀಕರಣ ಮತ್ತು ವಾಣಿಜ್ಯ ಬೆಳೆಗಳಿಗಾಗಿ ಕಾಡು ಕಡಿಯಲು ಆರಂಭಿಸಿದ್ದರಿಂದ ನಂತರದ 45 ವರ್ಷಗಳಲ್ಲಿ ದೇಶದಲ್ಲಿನ ಅರಣ್ಯದ ಪ್ರಮಾಣವು ಶೇ 21ರಷ್ಟಕ್ಕೆ ಕುಸಿದಿತ್ತು. ಅರಣ್ಯವನ್ನು ಉಳಿಸಿಕೊಳ್ಳಲೇಬೇಕು ಎಂದು ಕೋಸ್ಟರೀಕ ಪಣತೊಟ್ಟಿದ್ದು ಆಗಲೇ.

ಅರಣ್ಯ ನಾಶದ ಅಪಾಯಗಳನ್ನು ಅರಿತ ಕೋಸ್ಟರೀಕ ಸರ್ಕಾರವು 1980ರ ದಶಕದ ಕೊನೆಯಲ್ಲಿ ಅರಣ್ಯದ ಮರಗಳನ್ನು ಕಡಿಯುವುದನ್ನು ಸಂಪೂರ್ಣವಾಗಿ ನಿಷೇಧ ಮಾಡಿತು. ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿತು. ಆದರೆ, ಅಷ್ಟರಿಂದ ಮಾತ್ರ ಅರಣ್ಯದ ಪುನರುಜ್ಜೀವನ ಸಾಧ್ಯವಿರಲಿಲ್ಲ. ಇದಕ್ಕಾಗಿ ಉತ್ತೇಜನಾ ಭತ್ಯೆ ಆಧಾರದಲ್ಲಿ ಜನರನ್ನು ಪರಿಸರ ಸಂರಕ್ಷಣೆಯಲ್ಲಿ ಮತ್ತು ಅರಣ್ಯೀಕರಣದಲ್ಲಿ ತೊಡಗಿಸಿಕೊಳ್ಳುವ ನೀತಿಯನ್ನು ರೂಪಿಸಲಾಯಿತು.

1940–1985ರ ಮಧ್ಯೆ ಕೋಸ್ಟರೀಕದ ಬಹುತೇಕ ಅರಣ್ಯ ಭಾಗವು ಬಾಳೆ ತೋಟ, ಕಾಫಿ ತೋಟ ಮತ್ತು ಕಬ್ಬಿನ ಗದ್ದೆಗಳಾಗಿದ್ದವು. ಈ ಮೂರೂ ಬೆಳೆಗಳ ರಫ್ತೇ ದೇಶದ ಪ್ರಮುಖ ಮತ್ತು ಪ್ರಧಾನ ಆದಾಯವಾಗಿತ್ತು. 1990ರ ಹೊತ್ತಿಗೆ ಮರುಅರಣ್ಯೀಕರಣಕ್ಕೆ ಒತ್ತು ನೀಡುವ ಬಗ್ಗೆ ಸರ್ಕಾರ ಗಮನ ಹರಿಸಿತು. ಆದರೆ, ಮರುಅರಣ್ಯೀಕರಣದಿಂದ ವಾಣಿಜ್ಯ ಬೆಳೆಗಳ ತೋಟಗಳೆಲ್ಲವೂ ನಾಶವಾಗುತ್ತಿದ್ದವು ಮತ್ತು ಅಪಾರ ಸಂಖ್ಯೆಯ ಜನರು ಉದ್ಯೋಗ ಕಳೆದುಕೊಳ್ಳುವ ಅಪಾಯವಿತ್ತು. ಈ ಅಪಾಯವನ್ನು ನಿಭಾಯಿಸುವ ಸಲುವಾಗಿಯೇ, ಪರಿಸರ ಸಂರಕ್ಷಣೆ ಮತ್ತು ಮರುಅರಣ್ಯೀಕರಣದಲ್ಲಿ ಭಾಗಿಯಾಗುವ ಜನರಿಗೆ ಭತ್ಯೆ ನೀಡುವ ಕಾರ್ಯಕ್ರಮವನ್ನು ಆರಂಭಿಸಲಾಯಿತು.

ಇದಕ್ಕಾಗಿ 1988–92ರ ಅವಧಿಯಲ್ಲಿ 'ಫಾರೆಸ್ಟ್ ಏಡ್ ಸರ್ಟಿಫಿಕೇಟ್' ಎಂಬ ಕಾರ್ಯಕ್ರಮವನ್ನು ರೂಪಿಸಲಾಯಿತು. ತಮ್ಮ ತೋಟಗಳಲ್ಲಿ ಇರುವ ಮರಗಳನ್ನು ಉಳಿಸಿಕೊಳ್ಳುವವರಿಗೆ ಭತ್ಯೆ ನೀಡುವ ಕಾರ್ಯಕ್ರಮವದು. ಜತೆಗೆ ಹೊಸದಾಗಿ ಮರಗಳನ್ನು ಬೆಳೆಸುವವರಿಗೂ ಭತ್ಯೆ ನೀಡಲಾಗುತ್ತಿತ್ತು. 1992ರ ನಂತರ ಈ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು. ಮರುಅರಣ್ಯೀಕರಣದಿಂದ ನಷ್ಟವಾಗುವ ಕೃಷಿ ಜಮೀನಿಗೆ ವಿಶೇಷ ಭತ್ಯೆ ನೀಡುವ ಕಾರ್ಯಕ್ರಮವನ್ನೂ ರೂಪಿಸಲಾಯಿತು. ಇದರಿಂದ ರೈತರ ಆದಾಯಕ್ಕೆ ಯಾವುದೇ ಹೊಡೆತ ಬೀಳಲಿಲ್ಲ. ಬದಲಿಗೆ ರೈತರ ಆದಾಯಕ್ಕೂ ಭದ್ರತೆ ದೊರೆಯಿತು, ಮರುಅರಣ್ಯೀಕರಣವೂ ಸಾಧ್ಯವಾಯಿತು. ನಂತರದ ವರ್ಷಗಳಲ್ಲಿ, ಮರುಅರಣ್ಯೀಕರಣಕ್ಕೆ ಇದೇ ಸ್ವರೂಪದ ಹೊಸ ಹೊಸ ಕಾರ್ಯಕ್ರಮಗಳನ್ನು ಸೇರಿಸಲಾಯಿತು. 1987ರಲ್ಲಿ ಶೇ 21ರಷ್ಟಕ್ಕೆ ಕುಸಿದಿದ್ದ ಅರಣ್ಯ ಪ್ರದೇಶದ ವ್ಯಾಪ್ತಿಯು 2005ರ ವೇಳೆಗೆ ಶೇ 51ರಷ್ಟಾಗಿತ್ತು.

ಮರುಅರಣ್ಯೀಕರಣದಿಂದ, ದೇಶದ ರಫ್ತು ಆದಾಯದಲ್ಲಿ ಆದ ಖೋತಾವನ್ನು ತುಂಬಿಕೊಳ್ಳಲು ಕೋಸ್ಟರೀಕ ಸರ್ಕಾರವು ಪರಿಸರ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ನೀಡಿತು. ಈ ಮೂಲಕ ಆದಾಯ ನಷ್ಟವನ್ನು ತುಂಬಿಕೊಳ್ಳಲಾಯಿತು. ಹೀಗೆ ಪರಿಸರ ಪ್ರವಾಸೋದ್ಯಮವನ್ನೇ ಪ್ರಮುಖ ಆದಾಯದ ಮೂಲವನ್ನಾಗಿ ಅಭಿವೃದ್ಧಿಪಡಿಸಿದ ಕೋಸ್ಟರೀಕದ ಮಾದರಿಯೂ ಮಹತ್ವದ್ದು.

ಆಧಾರ: ಕೋಸ್ಟರೀಕ ಪರಿಸರ ಮತ್ತು ಇಂಧನ ಸಚಿವಾಲಯದ ವರದಿ, ಕೋಸ್ಟರೀಕ ಮರುಅರಣ್ಯೀಕರಣ ಕುರಿತ ವಿಶ್ವ ಸಂಸ್ಥೆಯ ವರದಿ. ನಕ್ಷೆ ಕೃಪೆ: ಗೂಗಲ್ ಅರ್ಥ್

ಪರಿಸರ ಪ್ರವಾಸೋದ್ಯಮ: ಅಭಿವೃದ್ಧಿಯ ಮಾದರಿ

ಅರಣ್ಯ ವ್ಯಾಪ್ತಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಹಾಗೂ ಜನರ ಚಟುವಟಿಕೆಗಳನ್ನು ಸಂಪೂರ್ಣ ನಿರ್ಬಂಧಿಸಿದರೆ ಮಾತ್ರ ಅರಣ್ಯ ಸಂರಕ್ಷಣೆ ಸಾಧ್ಯವಾಗುತ್ತದೆ ಎಂಬ ವಾದಕ್ಕೆ ಕೋಸ್ಟರೀಕ ದೇಶ ಅಪವಾದ. ಈ ದೇಶದಲ್ಲಿ ಅರಣ್ಯ ಸಂಪತ್ತು ದಾಖಲೆ ಮಟ್ಟದಲ್ಲಿ ಹೆಚ್ಚಳವಾಗಿದೆ. ಅದರೆ ಜೊತೆಜೊತೆಗೆ ಈ ವ್ಯಾಪ್ತಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನೂ ಹಾಗೂ ಜನರಿಗೆ ಅಗತ್ಯವಾಗಿ ಬೇಕಾದ ಸೌಕರ್ಯಗಳನ್ನೂ ಒದಗಿಸಲಾಗಿದೆ. ಹಲವು ದೇಶಗಳಲ್ಲಿ ಕಂಡುಬರುವ ಕಾಡಂಚಿನ ಜನರ ಅರಣ್ಯರೋದನ ಇಲ್ಲಿಲ್ಲ.

ಕೋಸ್ಟರೀಕದ ಮತ್ತೊದು ಹೆಗ್ಗಳಿಕೆ ಎಂದರೆ ಪ್ರವಾಸೋದ್ಯಮ. ಇದು ಪರಿಸರವನ್ನು ಆಧರಿಸಿದ ಪ್ರವಾಸೋದ್ಯಮ. ಕೋಸ್ಟರೀಕ ದೇಶವು ತನ್ನ ಅರಣ್ಯ ಸಂಪತ್ತಿನ ಕಾರಣಕ್ಕಾಗಿ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾಗಿದೆ. ಹಾಗೆಯೇ ದೇಶದ ಜನರು ಅರಣ್ಯಕ್ಕೆ ನೀಡಿದ ಗೌರವದಿಂದಾಗಿ, ಅದನ್ನು ಉಳಿಸಿ ಬೆಳೆಸಿಕೊಂಡ ಕಾರಣದಿಂದಾಗಿ ಪರಿಸರ ಪ್ರವಾಸೋದ್ಯಮವು ಅಗಾಧವಾಗಿ ಬೆಳೆದಿದೆ. ಸುಮಾರು ಮೂರು ಲಕ್ಷ ಪ್ರವಾಸಿಗರು ಕೋಸ್ಟರೀಕದ ಕಾಡುಗಳನ್ನು ನೋಡಲು ಪ್ರತೀ ವರ್ಷ ಬರುತ್ತಾರೆ. ಪ್ರವಾಸೋದ್ಯಮವು ದೇಶದ ಜಿಡಿಪಿಗೆ ಶೇ 8ಕ್ಕಿಂತಲೂ ಹೆಚ್ಚು ಕೊಡುಗೆ ನೀಡುತ್ತಿದೆ. ದೇಶದ ಸುಮಾರು 10ರಷ್ಟು ಜನರು ಈ ವಲಯವನ್ನು ನೆಚ್ಚಿಕೊಂಡಿದ್ದಾರೆ ಎಂಬುದನ್ನು ಗಮನಿಸಿದರೆ, ಈ ಕ್ಷೇತ್ರ ಬೆಳೆದಿರುವ ಪರಿ ತಿಳಿಯುತ್ತದೆ.

ಇತರ ದೇಶಗಳು ತಮ್ಮ ದೇಶಕ್ಕೆ ಪ್ರವಾಸಿಗರನ್ನು ಸೆಳೆಯುವ ಆಕರ್ಷಕ ಮಾದರಿಗಳ ಬದಲಾಗಿ, ಸಮಗ್ರ ಅಭಿವೃದ್ಧಿ ಮಾದರಿಯನ್ನು ಕೋಸ್ಟರೀಕ ಅಳವಡಿಸಿಕೊಂಡಿರುವುದರಿಂದ ಪ್ರವಾಸೋದ್ಯಮವೂ ಬೆಳೆದಿದೆ. ಪ್ರವಾಸೋದ್ಯಮವನ್ನು ಕೇವಲ ಉದ್ಯೋಗ ಸೃಷ್ಟಿಸುವ ಮಾರ್ಗವಾಗಿ ಬಳಸಿಕೊಳ್ಳದೇ, ಸಾಮಾಜಿಕ ಪ್ರಗತಿಗೂ ಅಸ್ತ್ರವಾಗಿ ಬಳಸಿಕೊಳ್ಳಲಾಗಿದೆ ಎನ್ನುತ್ತಾರೆ ಕೋಸ್ಟರೀಕದ ಪ್ರವಾಸೋದ್ಯಮ ಸಚಿವ ಗುಸ್ತಾವೊ ಸೆಗುರಾ. ಪ್ರವಾಸಿಗರ ಕಾರಣದಿಂದ ದೇಶದ ಕರಾವಳಿ ಹಾಗೂ ಗ್ರಾಮೀಣ ಭಾಗಗಳು ಪ್ರವಾಸೋದ್ಯಮದ ಜತೆಜತೆಗೇ ಅಭಿವೃದ್ಧಿಯನ್ನು ದಾಖಲಿಸಿವೆ. ದೇಶದ ಪ್ರಾಥಮಿಕ ಕೃಷಿ ಉತ್ಪನ್ನಗಳಾದ ಬಾಳೆ, ಕಾಫಿ ಹಾಗೂ ಸಕ್ಕರೆ ರಫ್ತಿನ ಆದಾಯವನ್ನು ಮೀರಿ ಕೋಸ್ಟರೀಕದ ಪ್ರವಾಸೋದ್ಯಮ ಮುಂದೆ ಹೋಗಿದೆ. ಅರಣ್ಯ ಪ್ರದೇಶದ ರಕ್ಷಣೆಯು ದೇಶದ ಆರ್ಥಿಕತೆಗೆ ಹಾಗೆಯೇ ಸಹಜ ಪರಿಸರಕ್ಕೆ ದೊಡ್ಡ ಕೊಡುಗೆ ನೀಡುತ್ತದೆ ಎಂಬುದಕ್ಕೆ ಇವೆಲ್ಲವೂ ಸಮಗ್ರ ನಿದರ್ಶನಗಳಾಗಿವೆ.

ಇಂಧನ: ಶೇ 98ರಷ್ಟು ಸ್ವಾವಲಂಬನೆ

ಕೋಸ್ಟರೀಕದ ಮತ್ತೊಂದು ಹೆಗ್ಗಳಿಕೆ ಹಸಿರು ಇಂಧನ ಕ್ಷೇತ್ರದಲ್ಲಿ ಸಾಧಿಸಿರುವ ಯಶಸ್ಸು. ದೇಶದ ಶೇ 98ರಷ್ಟು ಇಂಧನವನ್ನು ಜಲವಿದ್ಯುತ್, ಪವನ ವಿದ್ಯುತ್‌ನಂತಹ ಪುನರ್‌ಬಳಕೆಯ ಮೂಲಗಳಿಂದಲೇ ಉತ್ಪಾದಿಸಲಾಗುತ್ತಿದೆ. ಶೇ 73 ರಷ್ಟು ವಿದ್ಯುತ್ ಜಲವಿದ್ಯುತ್ ಯೋಜನೆಗಳಿಂದ, ಶೇ 15ರಷ್ಟು ಪವನ ವಿದ್ಯುತ್‌ನಿಂದ ಹಾಗೂ ಶೇ 8 ರಷ್ಟು ವಿದ್ಯುತ್ ಭೂಶಾಖದಿಂದ (ಜಿಯೊ ಥರ್ಮಲ್) ಲಭ್ಯವಾಗುತ್ತಿದೆ. ದೇಶವು ಶೇ 98ರಷ್ಟು ಪುನರ್‌ಬಳಕೆ ಇಂಧನಗಳನ್ನು ಬಳಸುತ್ತಿದೆ ಎಂಬುದಾಗಿ ಸರ್ಕಾರ 2018ರಲ್ಲೇ ಘೋಷಿಸಿತ್ತು. 2017ರಲ್ಲಿ 300 ದಿನಗಳ ಕಾಲ ಯಾವುದೇ ಪಳೆಯುಳಿಕೆ (ಪೆಟ್ರೋಲಿಯಂ ಉತ್ಪನ್ನಗಳು) ಇಂಧನ ಬಳಸಿ ಉತ್ಪಾದಿಸಿದ ವಿದ್ಯುತ್ ಅನ್ನು ಬಳಸಿರಲಿಲ್ಲ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಬಿಹಾರದಲ್ಲಿ ಜೆಡಿಯು ಪಕ್ಷವು ಬಿಜೆಪಿ ಜೊತೆ ಮೈತ್ರಿ ಕಡಿದುಕೊಂಡಿದ್ದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 195

ಪಿತೃಪುತ್ರಿಯರಿಗೆ ಶಾಪವಿತ್ತ ಮುನಿ

ದಕ್ಷನಿಗೆ ಅರವತ್ತು ಜನ ಪುತ್ರಿಯರು ಜನಿಸಿದ್ದರು. ಅವರನ್ನು ಕಶ್ಯಪ ಮತ್ತಿತರರಿಗೆ ಮದುವೆಮಾಡಿಕೊಟ್ಟಿದ್ದ. ಆ ಪುತ್ರಿಯರಲ್ಲಿ ಸ್ವಧಾದೇವಿಯನ್ನು ಪಿತೃಗಳಿಗೆ ಮದುವೆ ಮಾಡಿಕೊಟ್ಟಿದ್ದ. ಆ ಸ್ವಧಾದೇವಿಗೆ ಮೇನಾದೇವಿ, ಧನ್ಯಾ ಮತ್ತು ಕಲಾವತಿ ಎಂಬ ಮೂವರು ಕನ್ಯೆಯರು ಜನಿಸಿದರು. ಇವರು ಪಿತೃದೇವತೆಗಳ ಮಾನಸಪುತ್ರಿಯರಾಗಿದ್ದರು. ಅವರು ಸ್ವಧಾದೇವಿಯ ಗರ್ಭದಿಂದ ಜನಿಸಿದವರಾಗಿರಲಿಲ್ಲ. ಆದರೂ ಲೋಕದಲ್ಲಿ ಸ್ವಧಾದೇವಿಯ ಪುತ್ರಿಯರು ಎಂದು ಪ್ರಸಿದ್ಧರಾಗಿದ್ದರು. ಆ ಕನ್ಯೆಯರ ಪವಿತ್ರ ಹೆಸರುಗಳನ್ನು ಉಚ್ಚರಿಸಿದವರ ಇಷ್ಟಾರ್ಥಗಳು ಸಿಗುತ್ತವೆ. ಅವರು ಲೋಕಮಾತೆಯರು, ಮಹಾಯೋಗಿನಿಯರು, ಜ್ಞಾನಿಗಳು, ಮೂರು ಲೋಕಗಳಲ್ಲೂ ಸಂಚರಿಸಬಲ್ಲವರು.

ಇಂಥ ಪಿತೃಕನ್ಯೆಯರು ಒಮ್ಮೆ ವಿಷ್ಣುವಿನ ದರ್ಶನಕ್ಕಾಗಿ ಶ್ವೇತದ್ವೀಪದಲ್ಲಿರುವ ವಿಷ್ಣುಲೋಕಕ್ಕೆ ತೆರಳಿದರು. ಅಲ್ಲಿಗೆ ಆಗ ಸನಕಾದಿ ಮುನಿಗಳು ಬಂದರು. ಅವರಿಗೆ ದೇವತೆಗಳು ಎದ್ದು ಗೌರವಿಸಿದರು. ಆದರೆ ಆ ಮೂವರು ಪಿತೃಕನ್ಯೆಯರು ಅಜ್ಞಾನದಿಂದ ಏಳಲೇ ಇಲ್ಲ. ಶಂಕರನ ಮಾಯೆಯಿಂದ ಮೋಹಿತರಾಗಿ ಆ ಕನ್ಯೆಯರು ಸನಕಾದಿಗಳನ್ನು ಗೌರವಿಸಲಿಲ್ಲ. ಆ ಮಾಯೆಗೇ ಪ್ರಾರಬ್ಧ ಸೇರಿದಂತೆ ಅನೇಕ ಹೆಸರುಗಳಿವೆ. ಸನಕಾದಿಗಳು ಆಗ ತುಂಬಾ ಕೋಪಗೊಂಡರು. ಶಿವಮಾಯಾಮೋಹಿತನಾಗಿ ಸನತ್ಕುಮಾರನು 'ಎಲೈ ಪಿತೃಕನ್ಯೆಯರೇ, ನೀವು ಪಿತೃದೇವತೆಗಳ ಕುಮಾರಿಯರಾದರೂ ವೇದತತ್ವವು ತಿಳಿಯದುದರಿಂದ ಮೂಢರಾಗಿರುವಿರಿ. ನೀವು ನಮಗೆ ನಮಸ್ಕಾರ ಮಾಡಲಿಲ್ಲ. ಆಸನವನ್ನು ಬಿಟ್ಟು ಏಳಲೂ ಇಲ್ಲ. ಆದಕಾರಣ ನೀವು ಸ್ವರ್ಗದಿಂದ ಚ್ಯುತರಾಗಿ ಮನುಷ್ಯಸ್ತ್ರೀಯರಾಗಿ ಜನಿಸಿರಿ' ಎಂದು ಶಾಪವನ್ನಿತ್ತ.

ಸನತ್ಕುಮಾರನ ಶಾಪವನ್ನು ಕೇಳಿ ಆ ಪಿತೃಕನ್ಯೆಯರು ತುಂಬಾ ಭಯಗೊಂಡು, ಅವನ ಕಾಲುಗಳಿಗೆ ಬಿದ್ದು 'ಓ ಮುನಿಶ್ರೇಷ್ಠನೆ, ಪ್ರಸನ್ನನಾಗು. ತಿಳಿವಳಿಕೆಯಿಲ್ಲದ ನಾವು ನಿಮ್ಮನ್ನು ಗೌರವಿಸಲಿಲ್ಲ. ನಮ್ಮ ತಪ್ಪನ್ನು ಕ್ಷಮಿಸಿ, ಮತ್ತೆ ನಾವು ಸ್ವರ್ಗವನ್ನು ಪಡೆಯುವಂತೆ ಅನುಗ್ರಹಮಾಡು' ಎಂದು ಬೇಡಿಕೊಂಡರು. ಸನತ್ಕುಮಾರ ಪ್ರಸನ್ನನಾದ. 'ಎಲೈ ಪಿತೃಕನ್ಯೆಯರೇ, ನಿಮ್ಮಲ್ಲಿ ಹಿರಿಯವಳಾದ ಮೇನಾದೇವಿಯು ವಿಷ್ಣುವಿನ ಅಂಶವಾದ ಹಿಮವಂತನ ಪ್ರಿಯೆಯಾಗುವಳು. ಅವಳಲ್ಲಿ ಜಗನ್ಮಾತೆಯಾದ ಪಾರ್ವತಿಯು ಜನಿಸುವಳು. ಎರಡನೆಯವಳಾದ ಧನ್ಯಾದೇವಿಯು ಯೋಗಿಯಾದ ಜನಕರಾಜನ ಪತ್ನಿಯಾಗುವಳು. ಅವಳಿಗೆ ಮಹಾಲಕ್ಷ್ಮಿಯ ಅವತಾರದವಳಾದ ಸೀತಾ ಎಂಬ ಕುವರಿಯು ಜನಿಸುವಳು. ಕೊನೆಯವಳಾದ ಕಲಾವತಿಯು ದ್ವಾಪರಯುಗದ ಕೊನೆಯಲ್ಲಿ, ವೃಷಭಾನನ ಮಡದಿಯಾಗುವಳು. ಅವಳಿಗೆ ರಾಧಾ ಎಂಬ ಮಗಳು ಜನಿಸುವಳು.

'ಮೇನಾದೇವಿಯು ಜಗನ್ಮಾತೆಯಾದ ಪಾರ್ವತಿಯನ್ನು ಹಡೆದು, ಅವಳ ಅನುಗ್ರಹದಿಂದ ಪತಿಯೊಡನೆ ಕೈಲಾಸವನ್ನು ಸಶರೀರವಾಗಿ ಪಡೆಯುವಳು. ಧನ್ಯಾದೇವಿಯು ಸೀರಧ್ವಜ ಮತ್ತು ಸೀತೆಯೊಡನೆ ವೈಕುಂಠಕ್ಕೆ ತೆರಳುವರು. ಕಲಾವತಿಯು ಪತಿಯಾದ ವೃಷಭಾನನೊಡನೆ ಹಾಗೂ ಮಗಳು ರಾಧೆಯೊಡನೆ ಮುಕ್ತಳಾಗಿ ಗೋಲೋಕವನ್ನು ಸೇರುವಳು. ಪಿತೃಕನ್ಯೆಯರಾದ ನೀವು ಸ್ವರ್ಗದಲ್ಲಿ ವಿಹರಿಸುವವರು. ದುಷ್ಕರ್ಮದಿಂದಾಗಿ ನಿಮ್ಮ ವಿಷ್ಣುದರ್ಶನ ಭಾಗ್ಯವೂ ನಷ್ಟವಾಯಿತು. ಆದರೆ ಶಿವನ ಆದರಕ್ಕೆ ಪಾತ್ರರಾದ ನೀವು ಧನ್ಯರಾಗಿದ್ದೀರ. ಆದ್ದರಿಂದ ಮೇನಾದೇವಿಗೆ ಜನಿಸುವ ಪಾರ್ವತಿಯು ಶಿವನ ಮಡದಿಯಾದರೆ, ಧನ್ಯಾದೇವಿಗೆ ಜನಿಸುವ ಸೀತೆಯು ರಾಮನ ಮಡದಿಯಾಗುವಳು. ಕಲಾವತೀದೇವಿಯ ಪುತ್ರಿಯಾದ ರಾಧೆಯು ಕೃಷ್ಣನಲ್ಲಿ ರಹಸ್ಯವಾದ ಅನುರಾಗವುಳ್ಳ ಪ್ರಿಯೆಯಾಗುವಳು' ಎಂದ ಸನತ್ಕುಮಾರ ತನ್ನ ಸಹೋದರರೊಡನೆ ಅಂತರ್ಧಾನನಾದ. ಮೂವರು ಪಿತೃಕನ್ಯೆಯರೂ ಪಾಪವನ್ನು ಕಳೆದುಕೊಂಡ ಸಂತೋಷದಲ್ಲಿ ತಮ್ಮ ಮನೆಗೆ ತೆರಳಿದರು ಎಂಬಲ್ಲಿಗೆ ಪಾರ್ವತೀಖಂಡದ ಎರಡನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಿಜೆಪಿ ಜೊತೆಗಿನ ಸಖ್ಯ ತೊರೆದು, ಆರ್‌ಜೆಡಿ ಜೊತೆ ಸೇರಿ ಮತ್ತೆ ಹೊಸ ಸರ್ಕಾರ ರಚನೆಯ ಯತ್ನದಲ್ಲಿರುವ ನಿತೀಶ್ ಕುಮಾರ್ ಅವರ ಪೋಸ್ಟರ್‌ಗಳು ಬಿಹಾರದಲ್ಲಿ ಸದ್ದು ಮಾಡುತ್ತಿವೆ. 'ನಿತೀಶ್ ಎಲ್ಲರಿಗೂ ಸೇರಿದವರು' ಎಂಬುದಾಗಿ ದೊಡ್ಡ ಅಕ್ಷರಗಳಲ್ಲಿ ಬರೆದಿರುವ ದೊಡ್ಡ ದೊಡ್ಡ ಪೋಸ್ಟರ್‌ಗಳು ಪಟ್ನಾದ ಜೆಡಿಯು ಕಚೇರಿ ಸೇರಿದಂತೆ ನಗರದ ಹಲವು ಕಡೆ ತಲೆಎತ್ತಿವೆ ಎಂದು ಹಲವು ಸುದ್ದಿಸಂಸ್ಥೆಗಳು ವರದಿ ಮಾಡಿವೆ.



ಸುದ್ದಿಸಂಸ್ಥೆಗಳು ಟ್ವೀಟ್ ಮಾಡಿರುವ ಪೋಸ್ಟರ್‌ನ ಚಿತ್ರವನ್ನು ರಿವರ್ಸ್ ಇಮೇಜ್ ಮೂಲಕ ಆಲ್ಟ್ ನ್ಯೂಸ್ ಪರಿಶೀಲಿಸಿದೆ. 2020ರ ವಿಧಾನಸಭಾ ಚುನಾವಣೆ ಬಳಿಕ ಈ ಪೋಸ್ಟರ್‌ಗಳನ್ನು ಹಾಕಲಾಗಿತ್ತು ಎಂದು ಅದು ಹೇಳಿದೆ. ನಿತೀಶ್ ಅವರು ಜೆಡಿಯು–ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಎಂದು ಗೃಹಸಚಿವ ಅಮಿತ್ ಶಾ ಅವರು ಘೋಷಿಸಿದ ಬಳಿಕ ಈ ಪೋಸ್ಟರ್‌ಗಳು ಕಾಣಿಸಿದ್ದವು. ಈಗ ಆರ್‌ಜೆಡಿ ಜೊತೆ ಸೇರುವ ಜೆಡಿಯು ನಿರ್ಧಾರದ ಬಳಿಕ ಇಂತಹ ಪೋಸ್ಟರ್‌ಗಳನ್ನು ಹಾಕಲಾಗಿದೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ವೆಬ್‌ಸೈಟ್ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮನಸ್ಸಾಕ್ಷಿ

ಶುನಕ ಬೆಂಬತ್ತಿತಲ ಧರ್ಮಜನ ಕಡೆವರಂ |
ನಿನಗಂತು ಸಂಗಡಿಗನೊರ್ವನೆಡೆಬಿಡದನ್ ||
ಇಣಿಕಿ ನೋಡರದಾರುಮೆನ್ನುವೆಡೆ ಕಾದಿಹನು |
ಅಣಕಿಗಂ ಮನಸ್ಸಾಕ್ಷಿ – ಮಂಕುತಿಮ್ಮ || 690 ||

ಪದ-ಅರ್ಥ: ಶುನಕ = ನಾಯಿ, ಬೆಂಬತ್ತಿತಲ = -ಬೆನ್ನುಹತ್ತಿತಲ, ಕಡೆವರಂ = ಕಡೆಯವರೆಗೂ, ನಿನಗಂತು = ನಿನಗೆ + ಅಂತು, ಸಂಗಡಿಗನೊರ್ವನೆಡೆಬಿಡದನ್ = ಸಂಗಡಿಗನು + ಓರ್ವನ್ (ಒಬ್ಬನು) + ಎಡೆಬಿಡದನ್, ನೋಡರದಾರುಮೆನ್ನುವೆಡೆ = ನೋಡರು(ನೋಡುವುದಿಲ್ಲ) + ಅದಾರು (ಯಾರೂ) + ಎನ್ನುವೆಡೆ-(ಎನ್ನುವುದಾದರೆ), ಅಣಕಿಗ = ಅಣಕಿಸುವವನು.

ವಾಚ್ಯಾರ್ಥ: ಕಡೆಯವರೆಗೂ ಧರ್ಮರಾಜನನ್ನು ನಾಯಿಯೊಂದು ಬೆನ್ನತ್ತಿತಲ್ಲ. ಅಂತೆಯೇ ನಿನಗೂ ಸಂಗಡಿಗನೊಬ್ಬನು ಎಡೆಬಿಡದೆ ಇದ್ದಾನೆ. ಯಾರೂ ನನ್ನನ್ನು ಇಣಿಕಿ ನೋಡಲಾರರು ಎನ್ನುವುದಾದರೆ ಮನಸ್ಸಾಕ್ಷಿ ಅಣಕಿಸುತ್ತ ಕಾದಿದ್ದಾನೆ.

ವಿವರಣೆ: ಮಹಾಭಾರತದ ಮನೋಜ್ಞ ಪ್ರಸಂಗವೊಂದನ್ನು ಈ ಕಗ್ಗ ಎತ್ತಿ ತೋರುತ್ತದೆ. ಕುರುಕ್ಷೇತ್ರ ಯುದ್ಧ ಮುಗಿದು ಧರ್ಮರಾಜನ ಆಡಳಿತದ ಕೆಲವು ವರ್ಷಗಳು ಕಳೆದ ನಂತರ, ತಾವಿನ್ನು ಹಿಮಾಲಯಕ್ಕೆ ಹೋಗುವ ಸಮಯ ಬಂತೆಂದು ತಿಳಿದು. ಅಭಿಮನ್ಯುವಿನ ಮಗನಾದ ಪರೀಕ್ಷಿತನನ್ನು ರಾಜನನ್ನಾಗಿ ಮಾಡಿ, ಸುಭದ್ರೆಯನ್ನು ರಾಜಮಾತೆಯನ್ನಾಗಿ ನಿಯಮಿಸಿ, ಧರ್ಮರಾಜ ತನ್ನ ತಮ್ಮಂದಿರು ಮತ್ತು ದ್ರೌಪದಿಯೊಂದಿಗೆ ಹೊರಟ. ಅವರೊಂದಿಗೆ ಒಂದು ನಾಯಿಯೂ ಇತ್ತು. ಅದೆಲ್ಲಿಂದ ಬಂದಿತ್ತೋ? ಮೇರು ಪರ್ವತವನ್ನು ಸೇರುವ ಮೊದಲೇ ಪ್ರಿಯಪತ್ನಿ ದ್ರೌಪದಿ ದೇಹತ್ಯಾಗ ಮಾಡಿದಳು. ಮುಂದೆ ನಡೆದಂತೆ ನಕುಲ, ಸಹದೇವ, ಅರ್ಜುನರು ಪ್ರಾಣಬಿಟ್ಟರು. ಕೊನೆಗೆ ಪ್ರಯಾಣದಲ್ಲಿ ಭೀಮನೂ ಮರಣಹೊಂದಿದ. ಆದರೆ ನಾಯಿ ಮಾತ್ರ ಜೊತೆಯಾಗಿಯೇ ಇತ್ತು.

ಸ್ವರ್ಗದ ಕಡೆಗೆ ನಡೆದಾಗ ಇಂದ್ರ ಬಂದು, "ಧರ್ಮರಾಜಾ, ನೀನು ಧರ್ಮಪಾಲನೆ ಮಾಡಿದ್ದೀಯಾ, ರಥವನ್ನು ಹತ್ತು. ಸ್ವರ್ಗಕ್ಕೆ ಕರೆದೊಯ್ಯುತ್ತೇನೆ" ಎಂದಾಗ ತನ್ನ ಜೊತೆಯಲ್ಲಿ ನಾಯಿಯನ್ನು ಕರೆದುಕೊಂಡು ಹೋಗಬೇಕು ಎಂದು ಬೇಡುತ್ತಾನೆ ಧರ್ಮರಾಜ. ಕಾರಣ ಕೇಳಿದರೆ, "ನನ್ನ ಹೆಂಡತಿ, ತಮ್ಮಂದಿರು ನನ್ನನ್ನು ತೊರೆದರೂ ಈ ನಾಯಿ ನನ್ನನ್ನು ತೊರೆದಿಲ್ಲ. ಅದಿಲ್ಲದೆ ನಾನು ಸ್ವರ್ಗಕ್ಕೆ ಬರಲಾರೆ" ಎಂದಾಗ ನಾಯಿ ಯಮಧರ್ಮನಾಗಿ ನಿಂತು, "ನಿನ್ನ ಧರ್ಮಪ್ರಜ್ಞೆಗೆ ಮೆಚ್ಚಿದ್ದೇನೆ" ಎಂದು ಸ್ವರ್ಗಕ್ಕೆ ಹೋಗಲು ಅನುವು ಮಾಡುತ್ತಾನೆ. ಈ ಪ್ರಸಂಗವನ್ನು ಕಗ್ಗದಲ್ಲಿ ತರಲಾಗಿದೆ.

ಧರ್ಮರಾಜನನ್ನು ಕೊನೆಯವರೆಗೆ ಬೆನ್ನತ್ತಿದ ನಾಯಿಯಂತೆ ನಮ್ಮನ್ನೂ ಒಬ್ಬ ಎಂದಿಗೂ ಬಿಡದೆ ಬೆನ್ನುಹತ್ತಿ ಬರುತ್ತಾನಂತೆ ಅವನು ಯಾರು ಎಂದು ಕುತೂಹಲದಿಂದ ಇಣುಕಿ ನೋಡಿದರೆ ಆತ ನಮ್ಮ ಮನಸ್ಸಾಕ್ಷಿ, ಇದೆಷ್ಟು ಚೆಂದದ ಮಾತು! ನಾವು ಯಾರಿಗಾದರೂ ಮೋಸ ಮಾಡಬಹುದು, ಸುಳ್ಳು ಹೇಳಬಹುದು, ಜನರನ್ನು ಮರುಳು ಮಾಡಬಹುದು. ಆದರೆ ನಮ್ಮ ಅಂತ:ಸಾಕ್ಷಿ. ಅದನ್ನು ಗಮನಿಸುತ್ತದೆ. ಮನಸ್ಸಿಗೆ ಚುಚ್ಚುತ್ತದೆ. 'ಎಲಾ ಸುಳ್ಳು ಹೇಳುತ್ತೀಯಾ?" ಎಂದು ಕೆಣಕಿ ಪ್ರಶ್ನಿಸುತ್ತದೆ. ಎಲ್ಲಿಯವರೆಗೆ ನಾವು ಮನಸ್ಸಾಕ್ಷಿಯನ್ನು ಶುದ್ಧವಾಗಿಟ್ಟುಕೊಳ್ಳುತ್ತೇವೋ, ಅದಕ್ಕನುಗುಣವಾಗಿ ನಡೆಯುತ್ತೇವೋ ಅಲ್ಲಿಯವರೆಗೆ ನಮಗೆ ಮುಖವಾಡಗಳ ಅಗತ್ಯತೆ ಬರುವುದಿಲ್ಲ. ಕೊನೆಯವರೆಗೂ ನಮ್ಮೊಂದಿಗಿರುವ ಮನಸ್ಸಾಕ್ಷಿ, ನಮ್ಮ ಸನ್ನಡತೆಗೆ ಒಂದು ದಾರಿದೀಪ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಆಗಸ್ಟ್ 10, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯಣ- ವರ್ಷ ಋತು ತಿಥಿ: (ಶ್ರಾವಣ ಶುಕ್ಲ) ತ್ರಯೋದಶಿ ಗಂ. 14-16 ನಕ್ಷತ್ರ: ಪೂರ್ವಾಷಾಢ ಗಂ. 09-40 ಯೋಗ: ಪ್ರೀತಿ ಗಂ. 19-35, ಕರಣ: ತೈತಿಲ ಗಂ. 14-16 ಕರ್ಕಾಟಕ ಮಾಸದ 24 ನೇ ದಿನ. ರಾಹುಕಾಲ : ಮಧ್ಯಾಹ್ನ 12:00–01:30 ಸೂರ್ಯೋದಯ : 06-21 ಸೂರ್ಯಾಸ್ತ : 06-51 ಮುಸ್ಲಿಂ ದಿನಾಂಕ : 11 ಮೊಹರಮ್ ಅದೃಷ್ಟ ಸಂಖ್ಯೆ: 1, 8

ಮೇಷ: ಕೆಲಸ ಕಾರ್ಯದಲ್ಲಿ ಅಧಿಕ ಹಣ ವ್ಯಯವಾದರೂ, ಮುಂದಿನ ದಿನಗಳ ಬಗೆಗಿನ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದು ಉತ್ತಮ. ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ವರಮಾನವನ್ನು ಹೆಚ್ಚಿಸಿಕೊಳ್ಳುವಿರಿ.

ವೃಷಭ: ಮನೆಗಾಗಿ ವಿಲಾಸಿ ಸಾಮಗ್ರಿಗಳನ್ನು ಖರೀದಿಸುವುದು ಖರ್ಚಿಗೆ ದಾರಿಯಾಗಲಿದೆ. ನಿಮ್ಮ ಹೊಸ ಆಸೆ ಆಕಾಂಕ್ಷೆಗಳು ಗುರಿಗಳನ್ನು ಬದಲಿಸಬಹುದು. ಮದುವೆಯ ವಿಷಯಗಳು ಪ್ರಸ್ತಾಪಕ್ಕೆ ಬರಲಿದೆ.

ಮಿಥುನ: ನಿಮ್ಮ ಒಡನಾಡಿಗಳ ಪ್ರೀತಿ ವಿಶ್ವಾಸ ಸಹಕಾರದಿಂದ ಕಾರ್ಯವನ್ನು ಸುಲಭದಲ್ಲಿ ಸಾಧಿಸುವಿರಿ. ಈ ದಿನ ನಿಮ್ಮ ಹೆಜ್ಜೆ ಬಿರುಸಾಗಿ ಸಾಗಲಿದೆ. ಕೆಲಸದಲ್ಲಿ ಪ್ರಶಂಸೆ ಸಿಗುವುದು.

ಕರ್ಕಾಟಕ: ಆರ್ಥಿಕ ತಾಪತ್ರಯಗಳು ಹೇಳಿಕೊಳ್ಳಲಾಗದಂತಾಗಲಿದೆ. ಬಹಳ ದಿನಗಳ ನಂತರ ಹಿಂದಿನಿಂದ ಬಾಕಿ ಇರುವ ಮನೆ ದೇವರ ಕೆಲಸಗಳನ್ನು ಮಾಡಿ ಮುಗಿಸುವ ನಿರ್ಧಾರಕ್ಕೆ ಬರುವಂತಾಗುವುದು. ಅದರಿಂದ ಶುಭವಾಗುವುದು.

ಸಿಂಹ: ಬಹುಭಾಷಾ ಚಲನ ಚಿತ್ರರಂಗದವರಿಗೆ ಒಳ್ಳೆಯ ಖ್ಯಾತಿ ದೊರೆಯುವುದು. ದೇವತಾನುಗ್ರಹದಿಂದ ನೀವು ಮಾಡುವ ಕೆಲಸದಲ್ಲಿ ಒಳ್ಳೆಯ ಲಾಭವನ್ನು ಪಡೆಯುವಿರಿ. ಆರೋಗ್ಯದ ಬಗೆಗೆ ಹೆಚ್ಚಿನ ಕಾಳಜಿ ವಹಿಸಿ.

ಕನ್ಯಾ: ನೀರಿನ ಸಂಬಂಧದ ವ್ಯವಹಾರದಲ್ಲಿರುವವರಿಗೆ ಧನ ಲಾಭವಾಗುವುದು. ತಾಂತ್ರಿಕ ಕ್ಷೇತ್ರದಲ್ಲಿನ ನಿಮ್ಮ ಪ್ರಯತ್ನಗಳಿಂದ ಉತ್ತಮ ಉದ್ಯೋಗ ಗಳಿಸುವಿರಿ. ಸಕಾಲಕ್ಕೆ ಸ್ನೇಹಿತರಿಂದ ಹಣದ ಸಹಾಯ ಸಿಗಲಿದೆ.

ತುಲಾ: ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ವಿಚಾರದಲ್ಲಿ ಮರೆಯಲಾಗದ ಒಂದು ಕಹಿ ಘಟನೆ ನಡೆಯಬಹುದು. ರಾಮನಾಮ ಪಠಣೆಯಿಂದ ಶುಭವಾಗುವುದು. ವಾಹನ ಚಾಲನೆ ಕಾರ್ಯದಲ್ಲಿ ಯಾವುದೇ ಆತುರವು ಒಳ್ಳೆಯದಲ್ಲ.

ವೃಶ್ಚಿಕ: ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಈ ದಿನ ನಿಮಗೆ ಹೆಚ್ಚು ಆನಂದ ಸಿಗಬಹುದು. ಆಧ್ಯಾತ್ಮದ ಬಗೆಗಿನ ನಿಮ್ಮ ಚಿಂತನೆಯು ಜೀವನೋತ್ಸಾಹ ಮತ್ತು ಧೈರ್ಯವನ್ನು ವೃದ್ಧಿಸುತ್ತದೆ.

ಧನು: ಬ್ಯಾಂಕ್ ಉದ್ಯೋಗಕ್ಕಾಗಿ ಮಾಡಿದ ಪ್ರಯತ್ನ ವ್ಯರ್ಥವಾದಂತಾಗುತ್ತದೆ. ರಾಜಕೀಯ ವಿದ್ಯಮಾನಗಳನ್ನು ಎಚ್ಚರಿಕೆಯಿಂದ ಗಮನಿಸಿ. ಸಂಜೆಯ ಸಮಯದ ಪುಟ್ಟದೊಂದು ಪ್ರಯಾಣ ಇರುವುದು.

ಮಕರ: ಸಂಸಾರ ನಿರ್ವಹಣೆ ಸಲಭವೆನಿಸುವುದಿಲ್ಲ. ಉದ್ಯೋಗ ಬದಲಾವಣೆ ವಿಚಾರದಲ್ಲಿದ್ದ ಗೊಂದಲವನ್ನು ನಿವಾರಿಸಿಕೊಳ್ಳುವಿರಿ. ಶಸ್ತ್ರ ಚಿಕಿತ್ಸೆ ಮಾಡಿಸಲು ವಿಶ್ವಾಸಿಗಳಿಂದ ವೈದ್ಯರ ಸಂಪರ್ಕ ದೊರೆಯುವುದು.

ಕುಂಭ: ನಿಮ್ಮ ಕನಸುಗಳನ್ನು ಸಾಧಿಸಿಕೊಳ್ಳಲೇ ಬೇಕಿದ್ದರೆ ಅವಿರತ ಶ್ರಮ ಅಗತ್ಯ ಮತ್ತು ಅನಿವಾರ್ಯವಾಗುವುದು. ದಿನಚರಿಯ ಬದಲಾವಣೆಗೆ ಗಮನ ನೀಡಿರಿ. ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

ಮೀನ: ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರುವುದು. ನೆಮ್ಮದಿಯ ಬದುಕಿಗೆ ಬೇಕಾದ ಹಣದ ಅಭಾವ ಇರುವುದಿಲ್ಲ. ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆ ಅನುಭವಕ್ಕೆ ಬಂದಲ್ಲಿ ವೈದ್ಯರನ್ನು ಭೇಟಿ ಮಾಡಿ.

ಪದಬಂಧ 5045


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3. ತಡವಾಗಿ ತಲುಪಿ ನೋಡಿರುವ ಜಲಪಾತ (4)
5. ಕಮರಿ ಹತ್ತಿರವಿರುವ ಹೆಣ್ಣು ದುಂಬಿ (4)
6. ಕಂಬಿ ಮಾಡುವವ ತೋರಿದ ಗರ್ವ (2)
7. ಗಿರಿಯ ಬಳಿ ಸೆರೆ ಹಿಡಿಯುವುದು (4)
10. ಬಿರುಸಾದ ಮಾತಿದು (4)
12. ಪಕ್ಷದ ಆರನೆಯ ದಿನ (2)
14. ಸೀದಾ ಸಾದಾ ಇದ್ದವನು ತೋರುತ್ತಿರುವ ಅಲಕ್ಷ ! (4)
15. ಉಡಿದಾರವನ್ನು ಹೀಗೂ ಹೇಳುವರು (4)

ಮೇಲಿಂದ ಕೆಳಕ್ಕೆ

1. ರಾಗಬದ್ಧವಾಗಿ ಕಾವ್ಯವನ್ನು ಓದುವುದು (3)
2. ಹೂವಿನಲ್ಲಿರುವ ಸಿಹಿ ರಸ (4)
3. ತರಿಯನ್ನು ತರಲು ಇಷ್ಟೇಕೆ ಅವಸರ? (4)
4. ಜಿಪುಣ ಇಲ್ಲಿದ್ದಾನೆ (3)
6. ದುಂಬಿ ತಿರುಗಿದ್ದಾಗ ಚುಕ್ಕೆ ಕಾಣುವುದೇ? (2)
8. ಹೊಳಪಿನ ಲೇಪನವಿದು (3)
9. ಉತ್ಪತ್ತಿ ಅಥವ ಹುಟ್ಟು ಎಂದರೂ ಸರಿಯೇ (2)
10. ಕೈಯಲ್ಲಿರುವ ಪ್ರಚಾರದ ಚೀಟಿ (4)
11. ನ್ಯಾಯಾಲಯದಲ್ಲಿ ತನ್ನಕಡೆಗೆ ತೀರ್ಪು ಪಡೆದಿರುವ ವ್ಯಕ್ತಿ (4)
12. ಹೆಂಡತಿ ಸೋದರಿಯ ಗಂಡ (3)
13. ಘನವಾಗಿ ಬಂದಿರುವ ಹಿರಿಮೆ (3)



5044ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ವಿರಹ 3. ಶರತ್ಕಾಲ 5. ರಸನ 7. ದಶಮಾಂಶ 9. ಸದಾಚಾರ 11. ಮೂಷಿಕ 14. ಪ್ರತೀಹಾರ 15. ತಿಕ್ಕಲು

ಮೇಲಿಂದ ಕೆಳಕ್ಕೆ:
1. ವಿಧುರ 2. ಹವನ 3. ಶಬ್ದಕೋಶ 4. ಲಡಿ 6. ಸಮಂಜಸ 7. ದಡಾರ 8. ಶತಾಯುಷಿ 10. ಚಾಡಿಕೋರ 11. ಮೂಗುತಿ 12. ಕಡಲು 13. ವಿಪ್ರ

ಸುಡೊಕು 5431

			3		8		2	
8		6				5		
	5		4		6		7	
			1		2		4	
		9		3				
6			8		9	2		5
	8		6		1		9	
7		2		8		3		1
	6		2		3		5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5430 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ಸಿಆರ್‌ಜೆಡ್‌ನಲ್ಲಿ ಹಲವು ಯೋಜನೆಗೆ ಮಂಜೂರು!

ನವದೆಹಲಿ (ಪಿಟಿಐ): ಶಾಶ್ವತ ಯೋಜನೆಗಳ ಕುರಿತಂತೆ ಅಸಮರ್ಪಕವಾಗಿರುವ ಪರಿಸರ ಪರಿಣಾಮ ಮೌಲ್ಯಮಾಪನ (ಇಐಎ) ವರದಿಯ ಜತೆಗೆ, 2015–2020ರ ನಡುವೆ ಕರಾವಳಿ ನಿಯಂತ್ರಣ ವಲಯದಲ್ಲಿ (ಸಿಆರ್‌ಜೆಡ್) ಹಲವು ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ ಎಂದು ಭಾರತೀಯ ಮಹಾಲೇಖಪಾಲರ (ಸಿಎಜಿ) ಹೊಸ ವರದಿ ಹೇಳಿದೆ.

ಇಐಎ ವರದಿ ತಯಾರಿಯಲ್ಲಿ ತೊಡಗಿಸಿಕೊಂಡಿದ್ದ ಸಲಹೆಗಾರರಿಗೆ ಮಾನ್ಯತೆ ಇಲ್ಲದೆ ಇರುವುದು, ಹಳೆಯ ಆಧಾರರಹಿತ ದತ್ತಾಂಶಗಳ ಬಳಕೆ, ಯೋಜನೆಯ ಪರಿಸರ ಪರಿಣಾಮಗಳ ಕುರಿತು ಮೌಲ್ಯಮಾಪನ ಮಾಡದಿರುವುದು, ಯೋಜನಾ ಪ್ರದೇಶಗಳಲ್ಲಿ ಉಂಟಾಗುವ ವಿಪತ್ತುಗಳನ್ನು ಪರಿಹರಿಸದಿರುವುದು ಇಂತಹ ಯೋಜನೆಗಳಿಗೆ ಮಂಜೂರಾತಿ ನೀಡಲು ಕಾರಣವಾಗಿದೆ ಎಂದೂ ವರದಿ ಹೇಳಿದೆ.

ರಾಜ್ಯ, ಕೇಂದ್ರಾಡಳಿತ ಪ್ರದೇಶದ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಗಳು ಯೋಜನೆಗಳನ್ನು ಸಂಬಂಧಿತ ಅಧಿಕಾರಿಗಳಿಗೆ ಶಿಫಾರಸು ಮಾಡುವ ಬದಲು ಸ್ವಂತವಾಗಿ ಅನುಮತಿ ನೀಡಿರುವುದನ್ನು ಗಮನಿಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅವರು ಕಡ್ಡಾಯ ದಾಖಲೆಗಳನ್ನು ಸಲ್ಲಿಸದೆ ಅನೇಕ ಯೋಜನೆಗಳನ್ನು ಶಿಫಾರಸು ಮಾಡಿದ್ದಾರೆ ಎಂದೂ ಹೇಳಿದೆ. ಕರ್ನಾಟಕದಲ್ಲಿ ಎಸ್‌ಸಿಜೆಡ್‌ಎಂಎ ಅನ್ನು ಪುನರ್‌ರಚಿಸಲಾಗಿಲ್ಲ ಎಂದೂ ವರದಿ ಹೇಳಿದೆ.

ಕರ್ನಾಟಕದಲ್ಲಿ ಉಲ್ಲಂಘನೆ

- ಸಿಆರ್‌ಝಡ್ ಅನುಮತಿ ಪಡೆಯದೆ ಉಡುಪಿಯ ಶಾಂಭವಿ ನದಿಯ ದ್ವೀಪದಲ್ಲಿ ಒಂದು ರಸ್ತೆ ಹಾಗೂ ಎರಡು ಸೇತುವೆಗಳನ್ನು ನಿರ್ಮಿಸಲಾಗಿದೆ. ಈ ಸಂಬಂಧ ಷೋಕಾಸ್ ನೋಟಿಸ್ ಸಹ ನೀಡಲಾಗಿತ್ತು.
- ಮಂಗಳೂರಿನ ಗುರುಪುರ ನದಿಗೆ ಸಮೀಪದ 200 ಮೀಟರ್ ವ್ಯಾಪ್ತಿಯೊಳಗೆ ಹೋಟೆಲ್‌ನ ಪಾರ್ಕಿಂಗ್ ಪ್ರದೇಶ ನಿರ್ಮಾಣ. ಇದು ಸಹ ನಿಯಮದ ಉಲ್ಲಂಘನೆ.
- ಕರಾವಳಿ ಕರ್ನಾಟಕದ 12 ನಗರ ಹಾಗೂ ಪಟ್ಟಣಗಳು ನೇರವಾಗಿ ಸಂಸ್ಕರಿಸದ ಕೊಳಚೆ ನೀರನ್ನು ಸಮುದ್ರಕ್ಕೆ ಬಿಡುತ್ತಿವೆ. ಮಂಗಳೂರು ಮಹಾನಗರ ಪಾಲಿಕೆ ಮಾತ್ರ ಕೊಳಚೆ ನೀರನ್ನು ಶೇ 100ರಷ್ಟು ಸಂಸ್ಕರಣೆ ಮಾಡುತ್ತಿದೆ. ಉಡುಪಿ, ಕಾರವಾರ ಹಾಗೂ ಭಟ್ಕಳದಲ್ಲಿ ಕ್ರಮವಾಗಿ ಶೇ 25, ಶೇ 14 ಹಾಗೂ ಶೇ 25ರಷ್ಟು ಪ್ರದೇಶಗಳು ಒಳಚರಂಡಿ ಹೊಂದಿವೆ.
- ನಿಯಮ ಉಲ್ಲಂಘಿಸಿ ಎನ್‌ಎಂಪಿಟಿ ಬಂದರಿನಲ್ಲಿ ಹೆಚ್ಚುವರಿ ಬರ್ತ್ ಹಾಗೂ ಕಾರವಾರದಲ್ಲಿ ಪೆಟ್ರೋಲಿಯಂ ಸಂಗ್ರಹಣಾ ಟರ್ಮಿನಲ್ ನಿರ್ಮಿಸಲಾಗಿದೆ.

ವಿದ್ಯುತ್ ತಿದ್ದುಪಡಿ ಮಸೂದೆ–ಸ್ಥಾಯಿ ಸಮಿತಿಗೆ

‘ದರ ನಿಗದಿ: ರಾಜ್ಯಗಳ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಅಧಿಕಾರ’

ನವದೆಹಲಿ: ಅಗತ್ಯಕ್ಕೆ ತಕ್ಕಂತೆ ದರ ನಿಗದಿಪಡಿಸುವುದು ಹಾಗೂ ಸಕಾಲದಲ್ಲಿ ಪರಿಷ್ಕರಣೆಗೆ ಅವಕಾಶ ಸೇರಿದಂತೆ ವಿವಿಧ ಪ್ರಸ್ತಾವಗಳನ್ನು ಒಳಗೊಂಡ ವಿದ್ಯುತ್ ತಿದ್ದುಪಡಿ ಮಸೂದೆ–2022 ಅನ್ನು ಸಂಸತ್‌ನಲ್ಲಿ ಸೋಮವಾರ ಮಂಡಿಸಲಾಯಿತು.

ಈ ಮಸೂದೆಯನ್ನು ಸಮಗ್ರ ಪರಿಶೀಲನೆಗಾಗಿ ಸಂಸದೀಯ ಸ್ಥಾಯಿ ಸಮಿತಿಗೆ ಕಳುಹಿಸಲಾಗಿತ್ತು.

ವಿದ್ಯುತ್ ವಿತರಣಾ ಕಂಪನಿಗಳು (ಡಿಸ್ಕಾಂಗಳು) ಅಥವಾ ವಿದ್ಯುತ್ ಉತ್ಪಾದನಾ ಕಂಪನಿಗಳು ವಿದ್ಯುತ್ ದರ ಪರಿಷ್ಕರಿಸುವಂತೆ ಕೋರಿ ಮನವಿ ಸಲ್ಲಿಸದಿದ್ದಲ್ಲಿ, ಸ್ವಯಂ ಪ್ರೇರಿತವಾಗಿಯೇ ವಿದ್ಯುತ್ ದರಗಳನ್ನು ಪರಿಷ್ಕರಿಸುವ ಅಧಿಕಾರವನ್ನು ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗಗಳಿಗೆ ನೀಡುವ ಪ್ರಸ್ತಾವವನ್ನು ಈ ತಿದ್ದುಪಡಿ ಮಸೂದೆ ಒಳಗೊಂಡಿದೆ.

ನಿಗದಿಪಡಿಸಿದ ಸಮಯದ ಒಳಗಾಗಿ ವಿದ್ಯುತ್ ಉತ್ಪಾದನಾ ಕಂಪನಿಗಳು ದರ ಪರಿಷ್ಕರಣೆ ಕೋರಿ ಅರ್ಜಿ ಸಲ್ಲಿಸಬೇಕು. ಕಂಪನಿಗಳು ಇಂಥ ಅರ್ಜಿ ಸಲ್ಲಿಸಲು ವಿಫಲಗೊಂಡಲ್ಲಿ, ಈ ಸಂಬಂಧ ನಿಗದಿಮಾಡಲಾಗಿದ್ದ ಕೊನೆಯ ದಿನಾಂಕದಿಂದ 30 ದಿನಗಳು ಮೀರದ ಅವಧಿಯೊಳಗೆ ಪರಿಷ್ಕರಣೆ ಪ್ರಕ್ರಿಯೆಗೆ ಆಯೋಗವು ಚಾಲನೆ ನೀಡಬೇಕು.

ಅಲ್ಲದೇ, ದರ ನಿಗದಿ ಮಾಡುವುದಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹ ಹಾಗೂ ದಾಖಲೆಗಳನ್ನು ಸಿದ್ಧಪಡಿಸುವ ಕಾರ್ಯವನ್ನು ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗ ಆರಂಭಿಸಬೇಕು. ನೂತನ ಹಣಕಾಸು ವರ್ಷ ಆರಂಭವಾಗುವ ಮುನ್ನವೇ ದರ ನಿಗದಿ ಮಾಡುವ ಗುರಿಗೆ ಅನುಗುಣವಾಗಿ ಈ ಕಾರ್ಯ ನಡೆಯಬೇಕು ಎಂಬ ಅಂಶವನ್ನು ಸಹ ಈ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ವಿದ್ಯುತ್ ಸರಬರಾಜು ಕಂಪನಿಗಳು ನಿಗದಿ ಮಾಡುವ ದರಗಳು ಗ್ರಾಹಕರನ್ನು ಸುಲಿಗೆ ಮಾಡುವ ರೀತಿಯಲ್ಲಿ ಇರಬಾರದು. ಅಲ್ಲದೇ, ಗರಿಷ್ಠ ದರವು ಕೂಡ ಗ್ರಾಹಕರಿಗೆ ಹೊರೆಯಾಗದಂತೆ ಇರಬೇಕು. ಹೀಗಾಗಿ, ಎರಡು ಅಥವಾ ಎರಡಕ್ಕಿಂತ ಹೆಚ್ಚು ವಿದ್ಯುತ್ ಸರಬರಾಜು ಕಂಪನಿಗಳು ಇರುವ ಪ್ರದೇಶಗಳಲ್ಲಿ, ಆಯೋಗಗಳು ವಿದ್ಯುತ್‌ನ ಕನಿಷ್ಠ ಹಾಗೂ ಗರಿಷ್ಠ ದರವನ್ನು ನಿಗದಿ ಮಾಡಬಹುದು ಎಂಬ ಅಂಶವನ್ನು ಸಹ ಮಸೂದೆ ಒಳಗೊಂಡಿದೆ.

ವಿದ್ಯುತ್ ಪ್ರಸರಣ ಹಾಗೂ ಸರಬರಾಜು ವ್ಯವಸ್ಥೆಯಲ್ಲಿ ಸ್ಥಿರತೆಯನ್ನು ಖಾತರಿಪಡಿಸಲು ‘ನ್ಯಾಷನಲ್ ಲೋಡ್ ಡಿಸ್ಪ್ಯಾಚ್ ಸೆಂಟರ್’ (ಎನ್‌ಎಲ್‌ಡಿಸಿ) ಸ್ಥಾಪಿಸಬೇಕು ಎಂಬ ಪ್ರಸ್ತಾವವೂ ಇದೆ.

ಬಿಲ್ ಬಾಕಿಯೇ ಹೊರೆ!

ವಿದ್ಯುತ್ ಕ್ಷೇತ್ರವು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಇತ್ತೀಚೆಗೆ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ವಿದ್ಯುತ್ ಸರಬರಾಜು ಹಾಗೂ ಉತ್ಪಾದನಾ ಕಂಪನಿಗಳ ಬಾಕಿಯನ್ನು ತೀರಿಸುವಂತೆ ರಾಜ್ಯಗಳಿಗೆ ಮನವಿ ಮಾಡಿದ್ದರು. ಕಳೆದ ಮಾರ್ಚ್ 31ಕ್ಕೆ ಕೊನೆಗೊಂಡಂತೆ, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ಪಾವತಿಸಬೇಕಾದ ಬಾಕಿ ಮೊತ್ತ ₹ 1 ಲಕ್ಷ ಕೋಟಿಗೂ ಅಧಿಕ ಎಂದು ಇಂಧನ ಸಚಿವಾಲಯದ ಮೂಲಗಳು ಹೇಳುತ್ತವೆ.

ಆರ್‌ಟಿಐ ಮೂಲಕ ಕಿರುಕುಳ: 9 ಮಂದಿ ಕಪ್ಪು ಪಟ್ಟಿಗೆ

ಅಹಮದಾಬಾದ್ (ಪಿಟಿಐ): ಮಾಹಿತಿ ಹಕ್ಕು ಕಾಯ್ದೆಯಡಿ ಪುನರಾವರ್ತಿತ ಪ್ರಶ್ನೆಗಳನ್ನು ಕೇಳಿ ಅಧಿಕಾರಿಗಳಿಗೆ ಕಿರುಕುಳ ನೀಡುತ್ತಿದ್ದ ಒಂಬತ್ತು ಮಂದಿಯನ್ನು ಗುಜರಾತ್ ಮಾಹಿತಿ ಆಯೋಗವು ಕಪ್ಪು ಪಟ್ಟಿಗೆ ಸೇರಿಸಿದ್ದು, ಅವರು ಕೇಳುವ ಅರ್ಜಿಗಳಿಗೆ ಪ್ರತಿಕ್ರಿಯೆ ನೀಡಬಾರದು ಎಂದು ಆದೇಶ ನೀಡಿದೆ.

ಆದೇಶವನ್ನು ವಿಶ್ಲೇಷಿಸಿರುವ ಸರ್ಕಾರೇತರ ಸಂಸ್ಥೆ (ಎನ್‌ಜಿಒ), ‘ಮಾಹಿತಿ ಪಡೆಯಲು ಜನರಿಗೆ ಜೀವಮಾನವಿಡೀ ನಿಷೇಧ ಹೇರಿರುವ ಕ್ರಮ ಗುಜರಾತಿನಲ್ಲಿ ಮೊದಲ ಬಾರಿಗೆ ನಡೆದಿದೆ. ಆಯೋಗದ ಈ ಕ್ರಮದ ಕುರಿತು ಆರ್‌ಟಿಐ ಅಡಿ ಕೇಳಲಾದ ಪ್ರಶ್ನೆಗೆ, ಈ ರೀತಿಯ ನಿಬಂಧನೆ ಅಸ್ತಿತ್ವದಲ್ಲಿಲ್ಲ ಎಂದು ಕೇಂದ್ರ ಮಾಹಿತಿ ಆಯೋಗ ತಿಳಿಸಿದೆ’ ಎಂದು ಹೇಳಿದೆ.

ಶೀಘ್ರ ಇನ್ನೊಂದು ಎಸ್‌ಎಸ್‌ಎಲ್‌ವಿ ನೌಕೆ ಉಡಾವಣೆಗೆ ಪ್ರಯತ್ನ: ಕಿರಣ್‌ಕುಮಾರ್

ನವದೆಹಲಿ (ಪಿಟಿಐ): ‘ಕಿರು ಉಪ ಗ್ರಹ ಉಡ್ಡಯನ ವಾಹನ’ವು (ಎಸ್‌ಎಸ್‌ಎಲ್‌ವಿ) ಉಪಗ್ರಹಗಳನ್ನು ನಿಗದಿತ ಕಕ್ಷೆಗೆ ಸೇರಿಸುವಲ್ಲಿ ವಿಫಲಗೊಂಡಿರುವುದರಿಂದ ಹಿನ್ನಡೆಯಾಗಿಲ್ಲ. ಶೀಘ್ರವೇ ಇನ್ನೊಂದು ಎಸ್‌ಎಸ್‌ಎಲ್‌ವಿ ನೌಕೆ ಉಡಾವಣೆಗೆ ಪ್ರಯತ್ನಿಸಲಾಗುವುದು ಎಂದು ಬಾಹ್ಯಾಕಾಶ ಆಯೋಗದ ಸದಸ್ಯ ಎ.ಎಸ್.ಕಿರಣ್‌ಕುಮಾರ್ ತಿಳಿಸಿದ್ದಾರೆ.

‘ಇಸ್ರೊದ ಹೊಸ ರಾಕೆಟ್‌ನ ಎಲ್ಲಾ ಮೂರು ಹಂತಗಳು ಉತ್ತಮವಾಗಿ ಕಾರ್ಯನಿರ್ವಹಿಸಿವೆ’ ಎಂದೂ ಅವರು ವಿಫಲಗೊಂಡಿರುವ ಎಸ್‌ಎಸ್‌ಎಲ್‌ವಿ ಕುರಿತು ಪ್ರತಿಕ್ರಿಯಿಸಿದ್ದಾರೆ.

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16,000	15600	15850	211.85ಸೆಂಟ್ಸ್
ಎಸಿ	8,820	8400	8800	
ಆರ್‌ಪಿ	9,500	9500	9700	ಲಂಡನ್
ಆರ್‌ಸಿ	4,735	4500	4550	2073ಡಾಲರ್ಸ್



ಸುದ್ದಿ 2 ನಿಮಿಷ

‘ವಾಟ್ಸ್‌ಆ್ಯಪ್ ಸ್ಕ್ರೀನ್‌ಶಾಟ್‌ಗೆ ನಿರ್ಬಂಧ’

ನವದೆಹಲಿ (ಪಿಟಿಐ): ‘ಇನ್ನು ಮುಂದೆ ವಾಟ್ಸ್‌ಆ್ಯಪ್‌ನಲ್ಲಿ ಒಮ್ಮೆ ವೀಕ್ಷಿಸಬಹುದಾದ ಸಂದೇಶಗಳ ಸ್ಕ್ರೀನ್‌ಶಾಟ್ ತೆಗೆಯುವುದನ್ನು ನಿರ್ಬಂಧಿಸಲಾಗುತ್ತದೆ. ಸ್ವೀಕೃತಿದಾರರು ಸಂದೇಶ ವೀಕ್ಷಿಸಿದ ಕೂಡಲೇ ಅದು ತಾನಾಗಿಯೇ ಅಳಿಸಿಹೋಗಲಿದೆ. ಬಳಕೆದಾರರ ಗೋಪ್ಯತೆ ಗಮನದಲ್ಲಿಟ್ಟುಕೊಂಡು ಇಂತಹ ಹಲವು ಮಾರ್ಪಾಡುಗಳನ್ನು ಮಾಡಲಾಗಿದ್ದು, ಈ ವೈಶಿಷ್ಟ್ಯಗಳನ್ನು ಶೀಘ್ರವೇ ಪರಿಚಯಿಸಲಾಗುತ್ತದೆ’ ಎಂದು ವಾಟ್ಸ್‌ಆ್ಯಪ್ ಮಾಲೀಕತ್ವ ಹೊಂದಿರುವ ಮೆಟಾ ಪ್ಲಾಟ್‌ಫಾರ್ಮ್ ಮಂಗಳವಾರ ತಿಳಿಸಿದೆ.



‘ಇನ್ನು ಮುಂದೆ ಗುಂಪಿನಲ್ಲಿರುವ ಇತರರಿಗೆ ತಿಳಿಯದಂತೆ ರಹಸ್ಯವಾಗಿ ಗುಂಪು ಚಾಟ್‌ಗಳಿಂದ ನಿರ್ಗಮನ ಹೊಂದಬಹುದು. ತಮಗೆ ಬೇಕಾದವರಿಗಷ್ಟೇ ತಾವು ಆನ್‌ಲೈನ್‌ನಲ್ಲಿ ಇರುವುದು ಗೊತ್ತಾಗುವಂತೆ ಸಂಯೋಜನೆ (ಸೆಟ್ಟಿಂಗ್ಸ್) ಮಾಡಿಕೊಳ್ಳಬಹುದು. ಒಮ್ಮೆ ನೋಡುವ ಸಂದೇಶ (ವೀವ್ ಒನ್ಸ್ ಮೆಸೆಜಸ್) ಎಂಬ ವೈಶಿಷ್ಟ್ಯವನ್ನೂ ಪರಿಚಯಿಸಲಾಗುತ್ತಿದೆ. ಸ್ವೀಕೃತಿದಾರರು ಓದಿದ ಕೂಡಲೇ ಆ ಸಂದೇಶ ಅಳಿಸಿಹೋಗಲಿದೆ’ ಎಂದು ಮೆಟಾ ಕಂಪನಿಯ ಸಿಇಒ ಮಾರ್ಕ್ ಜುಕರ್‌ಬರ್ಗ್ ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಮೋದಿ ಆಸ್ತಿ ಮೌಲ್ಯ ₹ 2.23 ಕೋಟಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಸದ್ಯದ ಆಸ್ತಿ ಮೌಲ್ಯ ₹ 2.23 ಕೋಟಿಯಷ್ಟಿದೆ. ಒಂದು ವರ್ಷದ ಹಿಂದೆಗೆ ಹೋಲಿಸಿದರೆ ಅವರ ಆಸ್ತಿಯಲ್ಲಿ ₹ 26.13 ಲಕ್ಷದಷ್ಟು ಹೆಚ್ಚಳವಾಗಿದೆ.

ಪ್ರಧಾನಿ ಅವರು ಈ ವರ್ಷದ ಮಾರ್ಚ್ 31ರವರೆಗಿನ ತಮ್ಮ ಆಸ್ತಿಯನ್ನು ಘೋಷಿಸಿಕೊಂಡಿದ್ದು, ಅದರಲ್ಲಿ ಈ ವಿಷಯ ತಿಳಿಸಲಾಗಿದೆ. ಯಾವುದೇ ನಿವೇಶನ ಹೊಂದಿಲ್ಲದ ಅವರ ಚರಾಸ್ತಿಗಳು ಬಹುತೇಕ ಬ್ಯಾಂಕ್ ಠೇವಣಿ ರೂಪದಲ್ಲಿವೆ. ಪ್ರಧಾನ ಮಂತ್ರಿ ಕಚೇರಿ ವೆಬ್‌ಸೈಟ್‌ನಲ್ಲಿ ಈ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿದೆ. ಗಾಂಧಿನಗರದ ಒಂದು ತುಂಡು ಭೂಮಿಯಲ್ಲಿನ ತಮ್ಮ ಪಾಲನ್ನು ದಾನ ಮಾಡಿರುವುದರಿಂದ ಮೋದಿ ಅವರು ಸದ್ಯ ಯಾವುದೇ ಸ್ಥಿರ ಆಸ್ತಿ ಹೊಂದಿಲ್ಲ. ಯಾವುದೇ ಬಾಂಡ್, ಷೇರು ಅಥವಾ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿಲ್ಲ. ವಾಹನ ಸಹ ಹೊಂದಿಲ್ಲ. ಆದರೆ, ₹ 1.73 ಲಕ್ಷ ಮೌಲ್ಯದ ನಾಲ್ಕು ಚಿನ್ನದ ಉಂಗುರ ಹೊಂದಿದ್ದಾರೆ.

ಮೋದಿ ಅವರ ಆಸ್ತಿ ಮೌಲ್ಯ ₹2,23,82,504. ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ 2002ರ ಅಕ್ಟೋಬರ್‌ನಲ್ಲಿ ಮೋದಿ ಅವರು ವಸತಿ ನಿವೇಶನ ಖರೀದಿಸಿದ್ದರು. ಅದರಲ್ಲಿ ಮೂವರು ಪಾಲುದಾರರಿದ್ದರು. ಸರ್ವೆ ಸಂಖ್ಯೆ 401/ಎ ನಲ್ಲಿ ಇದ್ದ ಆ ಭೂಮಿಯನ್ನು ದಾನ ಮಾಡಲಾಗಿದೆ. ಹೀಗಾಗಿ ಅದರ ಮೇಲೆ ಮೋದಿ ಮಾಲೀಕತ್ವ ಇಲ್ಲ ಎಂದು ತಿಳಿಸಲಾಗಿದೆ. ಪ್ರಧಾನಿ ಬಳಿ ₹ 35,250 ನಗದು ಇದೆ. ₹ 9,05,105 ಮೊತ್ತದ ರಾಷ್ಟ್ರೀಯ ಉಳಿತಾಯ ಪತ್ರ ಮತ್ತು ₹1,89,305 ಮೌಲ್ಯದ ಜೀವ ವಿಮಾ ಪಾಲಿಸಿ ಹೊಂದಿದ್ದಾರೆ.

‘ಗೋವಾದಲ್ಲಿ ಎಎಪಿಗೆ ರಾಜ್ಯ ಪಕ್ಷದ ಸ್ಥಾನ’

ನವದೆಹಲಿ (ಪಿಟಿಐ): ದೆಹಲಿ, ಪಂಜಾಬ್ ನಂತರ ಇದೀಗ ಗೋವಾದಲ್ಲಿ ಸಹ ಆಮ್ ಆದ್ಮಿ ಪಾರ್ಟಿಗೆ (ಎಎಪಿ) ಚುನಾವಣಾ ಆಯೋಗ ರಾಜ್ಯ ಪಕ್ಷದ ಸ್ಥಾನಮಾನ ನೀಡಿದೆ ಎಂದು ಪಕ್ಷದ ರಾಷ್ಟ್ರೀಯ ಸಂಚಾಲಕರೂ ಆಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

‘ಕಳೆದ ಫೆಬ್ರುವರಿಯಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸಾಧನೆ ಆಧಾರದ ಮೇಲೆ ಗೋವಾದಲ್ಲಿ ಎಎಪಿಗೆ ರಾಜ್ಯ ಪಕ್ಷದ ಸ್ಥಾನ ನೀಡಲಾಗಿದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಸ್ಮಾರ್ಟ್‌ಫೋನ್ ಮಾರುಕಟ್ಟೆ ಶೇಕಡ 2.9ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ಏಪ್ರಿಲ್–ಜೂನ್ ಅವಧಿಯಲ್ಲಿ ದೇಶದ ಸ್ಮಾರ್ಟ್‌ಫೋನ್ ಮಾರುಕಟ್ಟೆಯು ಶೇಕಡ 2.9ರಷ್ಟು ಬೆಳವಣಿಗೆ ಕಂಡಿದೆ ಎಂದು ಇಂಟರ್‌ನ್ಯಾಷನಲ್ ಡೇಟಾ ಕಾರ್ಪೊರೇಷನ್ (ಐಡಿಸಿ) ಸಿದ್ಧಪಡಿಸಿರುವ ವರದಿ ಹೇಳಿದೆ. ಸ್ಮಾರ್ಟ್‌ಫೋನ್ ಮಾರಾಟದಲ್ಲಿ ಶಓಮಿ ಕಂಪನಿಯು ಮೊದಲ ಸ್ಥಾನದಲ್ಲಿ ಇದೆ.

ದೇಶದ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಮೊದಲ ಮೂರು ಸ್ಥಾನಗಳನ್ನು ಚೀನಾದ ಕಂಪನಿಗಳು ಪಡೆದುಕೊಂಡಿವೆ ಎಂದು ವರದಿ ಹೇಳಿದೆ. ರಿಯಲ್‌ಮಿ ಮತ್ತು ವಿವೊ ಕ್ರಮವಾಗಿ ಎರಡು ಮತ್ತು ಮೂರನೆಯ ಸ್ಥಾನಗಳಲ್ಲಿ ಇವೆ. ಸ್ಯಾಮ್‌ಸಂಗ್ ನಾಲ್ಕನೆಯ ಸ್ಥಾನ ಪಡೆದಿದೆ.

ಜೂನ್ ತ್ರೈಮಾಸಿಕದಲ್ಲಿ ಒಟ್ಟು 3.47 ಕೋಟಿ ಸ್ಮಾರ್ಟ್‌ಫೋನ್‌ಗಳು ಮಾರುಕಟ್ಟೆ ಪ್ರವೇಶಿಸಿವೆ ಎಂದು ಐಡಿಸಿ ವರದಿ ಅಂದಾಜು ಮಾಡಿದೆ. ಇದು ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಮಾರುಕಟ್ಟೆ ಪ್ರವೇಶಿಸಿದ್ದ 3.38 ಕೋಟಿ ಸ್ಮಾರ್ಟ್‌ಫೋನ್‌ಗಳ ಸಂಖ್ಯೆಗೆ ಹೋಲಿಸಿದರೆ ಶೇಕಡ 2.9ರಷ್ಟು ಹೆಚ್ಚು.

ಕಂಪನಿ	ಮಾರುಕಟ್ಟೆಗೆ ತಂದ ಸ್ಮಾರ್ಟ್‌ಫೋನ್ ಸಂಖ್ಯೆ	ಮಾರುಕಟ್ಟೆ ಪಾಲು (%)
ಶಓಮಿ	71 ಲಕ್ಷ	20.4
ರಿಯಲ್‌ಮಿ	61 ಲಕ್ಷ	17.5
ವಿವೊ	59 ಲಕ್ಷ	16.9
ಸ್ಯಾಮ್‌ಸಂಗ್	57 ಲಕ್ಷ	16.3

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹167
ಆರ್‌ಎಸ್‌ಎಸ್-5	₹156
ಗುಡ್ ಲಾಟ್	₹148

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1620)
ಸೋಯಾ (ರಿಫೈನ್ಡ್)	₹1280 (1270)
ಸೂರ್ಯಕಾಂತಿ (ರಿಫೈನ್ಡ್)	₹1600 (1620)
ಪಾಮೋಲಿನ್	₹1255 (1250)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹180-585
ದ್ವಿತಳಿ (ಬಿ.ವಿ)	₹265-713

ಮುಂಬೈ ಧಾರಣೆ

ಶೇಂಗಾ

9-8-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮ.ಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1630)
ಒಂದು ವಾರದ ಡೆಲಿವರಿ	1645 (1625)
ಸೋಯಾ ಕಚ್ಚಾ	1240 (1220)
ಪಾಮ್ ವಾರದ ಡೆಲಿವರಿ	1253 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1520)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 52,300 (51,950)

ಬೆಳ್ಳಿ ಕೆ.ಜಿ 59,000 (58,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	485

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಅನಂತಾಚಾರ್, ಟಾಟಾ ನಗರ, ಬೆಂಗಳೂರು

- ಪ್ರಶ್ನೆ: ನಾನು ಹಿರಿಯ ನಾಗರಿಕ, ವಯಸ್ಸು 79 ವರ್ಷ. ನನಗೆ ವಾರ್ಷಿಕ ₹ 5.50 ಲಕ್ಷ ಪಿಂಚಣಿ ಬರುತ್ತಿದೆ. ಬ್ಯಾಂಕಿನಿಂದ ₹ 2 ಲಕ್ಷ ಬಡ್ಡಿ ಬರುತ್ತಿದೆ. ಕೆಲವು ಸರ್ಕಾರಿ, ಅರೆ ಸರ್ಕಾರಿ ಕಂಪನಿಗಳಿಂದ ವರ್ಷಕ್ಕೆ ₹ 1 ಲಕ್ಷದಷ್ಟು ಡಿವಿಡೆಂಡ್ ಬರುತ್ತದೆ. ನನಗೆ ತೆರಿಗೆ ಉಳಿಸುವ ಉಪಾಯ ತಿಳಿಸಿ. ನಾನು ನನ್ನ ಹೆಸರಲ್ಲಿ ಮನೆಯೊಂದನ್ನು ಬಾಡಿಗೆಗೆ ಕೊಟ್ಟಿದ್ದೇನೆ. ವರ್ಷಕ್ಕೆ ₹ 3 ಲಕ್ಷ ಬಾಡಿಗೆ ಬರುತ್ತಿದೆ. 75 ವರ್ಷ ಮೇಲ್ಪಟ್ಟ ನಾಗರಿಕರು ತೆರಿಗೆ ವಿವರ ಸಲ್ಲಿಸುವ ಅಗತ್ಯ ಇಲ್ಲವೆಂದು ಓದಿದ್ದೆ. ಇದರ ಪ್ರಯೋಜನ ನನಗೆ ಸಿಗುವುದೇ?

ಉತ್ತರ: ತೆರಿಗೆ ವಿನಾಯಿತಿ ಮಿತಿಗಿಂತ ಹೆಚ್ಚಿನ ಆದಾಯ ಇರುವ ಎಲ್ಲರೂ ಆದಾಯ ತೆರಿಗೆ ವಿವರ ಸಲ್ಲಿಸಬೇಕು. ತೆರಿಗೆ ವಿನಾಯಿತಿ ಗರಿಷ್ಠ ಮೊತ್ತ ನಿಮ್ಮ ವಯೋಮಾನದ ಮೇಲೆ ನಿರ್ಧಾರವಾಗುತ್ತದೆ. ನೀವು 60ರಿಂದ 80 ವರ್ಷದೊಳಗಿನ ವಯೋಮಾನದಲ್ಲಿ ಇರುವುದರಿಂದ ನಿಮ್ಮ ಗರಿಷ್ಠ ತೆರಿಗೆ ವಿನಾಯಿತಿ ಮೊತ್ತ ₹ 3 ಲಕ್ಷ. ನಿಮ್ಮ ವಯಸ್ಸು 80 ವರ್ಷ ಆದಾಗ ಪ್ರಸ್ತುತ ಇರುವ ಆದಾಯ ತೆರಿಗೆ ನಿಯಮದಂತೆ ₹ 5 ಲಕ್ಷದ ತನಕ ತೆರಿಗೆ ವಿನಾಯಿತಿ ಇರುತ್ತದೆ.

75 ವರ್ಷ ಮೀರಿದ ವ್ಯಕ್ತಿಗಳಿಗೆ ತೆರಿಗೆ ವಿವರ ಸಲ್ಲಿಸುವುದರಿಂದ ವಿನಾಯಿತಿಯು ಕೇಂದ್ರ ಬಜೆಟ್ ಪ್ರಸ್ತಾವನೆಯಂತೆ 2021-22ರಿಂದ ಜಾರಿಯಲ್ಲಿದ್ದರೂ ಅದಕ್ಕೆ ಕೆಲವು ಷರತ್ತುಗಳು ಅನ್ವಯವಾಗುತ್ತವೆ. ಮೊದಲನೆಯದಾಗಿ ವ್ಯಕ್ತಿಯು ನಿವಾಸಿ ಭಾರತೀಯನಾಗಿದ್ದು ವಯಸ್ಸು 75 ವರ್ಷ ಆಗಿರಬೇಕು. ಅಂಥವರು ಪಿಂಚಣಿ ಮತ್ತು ಬಡ್ಡಿ ಆದಾಯ ಮಾತ್ರ ಗಳಿಸುತ್ತಿರಬೇಕು. ಪಿಂಚಣಿ ಆದಾಯ ನಿಗದಿತ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿದ್ದು, ತೆರಿಗೆ ವಿಚಾರಕ್ಕೆ ಸಂಬಂಧಿಸಿದ ಅರ್ಜಿ ನಮೂನೆಯನ್ನು ಬ್ಯಾಂಕಿಗೆ ಸಲ್ಲಿಸಿರಬೇಕು. ನಿಮಗೆ ತೆರಿಗೆ ಅನ್ವಯವಾದಲ್ಲಿ ಅಂತಹ ತೆರಿಗೆ ಮೊತ್ತವನ್ನು ಕಡಿತಗೊಳಿಸಿ ಬ್ಯಾಂಕ್‌ಗಳು ಪಾವತಿಸಿರಬೇಕು. ನಿಮಗೆ ಪಿಂಚಣಿ, ಬಡ್ಡಿ ಆದಾಯವಲ್ಲದೆ ಡಿವಿಡೆಂಡ್ ಹಾಗೂ ಮನೆ ಬಾಡಿಗೆ ಆದಾಯ ಇದೆ. ಒಟ್ಟು ₹ 11.50 ಲಕ್ಷ ಆದಾಯ ಬರುತ್ತಿದೆ. ಈ ಆದಾಯಗಳು ತೆರಿಗೆಗೊಳಪಡುವ ಆದಾಯವಾಗಿರುತ್ತವೆ. ಹೀಗಾಗಿ, ಈ ನಿಯಮದ ಅಡಿ ನೀವು ಪ್ರಯೋಜನ ಪಡೆಯಲು ಸಾಧ್ಯವಿಲ್ಲ.

ನೀವು ನಿಮ್ಮ ಹೂಡಿಕೆಯ ಮಾಹಿತಿ ತಿಳಿಸಿಲ್ಲ. ಒಂದುವೇಳೆ ನಿಮ್ಮಲ್ಲಿ ತೆರಿಗೆ ಉಳಿತಾಯಕ್ಕೆ ಸಂಬಂಧಿಸಿದ ಹೂಡಿಕೆಗಳು ಇಲ್ಲವಾದಲ್ಲಿ, ನೀವು ಅಂತಹ ಹೂಡಿಕೆಗಳನ್ನು ಮಾಡಬಹುದು. ಇದಕ್ಕಾಗಿ ಸಮೀಪದ ಬ್ಯಾಂಕ್ ಅಥವಾ ಅಂಚೆ ಕಚೇರಿಗೆ ಭೇಟಿ ನೀಡಿ ₹ 1.50 ಲಕ್ಷದ ತನಕ ತೆರಿಗೆ ಉಳಿತಾಯ ಖಾತೆಗಳಲ್ಲಿ ಹಣ ತೊಡಗಿಸಿ.

ಪಿ.ಎಚ್. ಮುತ್ತತ್ತಿ, ಬಾಗಲಕೋಟೆ

- ಪ್ರಶ್ನೆ: ನಾನು ಇತ್ತೀಚೆಗೆ ‘ಪಿ2ಪಿ’ ಆ್ಯಪ್ ಆಧಾರಿತ ಹೂಡಿಕೆ ಬಗ್ಗೆ ಕೇಳಿರುತ್ತೇನೆ. ಇದರಲ್ಲಿ ಅಧಿಕ ಲಾಭ ಸಿಗುತ್ತದೆ ಎಂದು ಅವುಗಳನ್ನು ನಡೆಸುವ ಅನೇಕ ವೆಬ್‌ಸೈಟ್‌ಗಳು ಮಾಹಿತಿ ಕೊಡುತ್ತಿವೆ. ಇಂತಹ ಮಾಹಿತಿ ಖಚಿತ ಇರಬಹುದೇ ? ಅಸಲು ಮೊತ್ತ ಭದ್ರವೇ?

ಉತ್ತರ: ಪಿ2ಪಿ ಅಂದರೆ (Peer-to-peer) ಸಾಲ ಪಡೆಯಲಿಚ್ಛಿಸುವ ವ್ಯಕ್ತಿ ಹಾಗೂ ಸಾಲ ನೀಡಲು ತಯಾರಿರುವ ವ್ಯಕ್ತಿಗಳ ನಡುವಿನ ಹಣದ ವ್ಯವಹಾರ. ಪಿ2ಪಿ ವ್ಯವಹಾರ ನಡೆಸುವ ಸಂಸ್ಥೆಗಳು ತಮ್ಮ ಆ್ಯಪ್ ಅಥವಾ ವೆಬ್‌ಸೈಟ್ ಮೂಲಕ ಈ ಇಬ್ಬರ ನಡುವೆ ಮಧ್ಯವರ್ತಿಯಂತೆ ಕಾರ್ಯನಿರ್ವಹಿಸುತ್ತವೆ. ಇದಕ್ಕಾಗಿ ಅವು ಆರ್‌ಬಿಐ ಪರವಾನಗಿ ಪಡೆಯಬೇಕಾಗಿರುತ್ತದೆ. ಪಿ2ಪಿ ವ್ಯವಹಾರದ ವಿಶೇಷ ಎಂದರೆ, ಬ್ಯಾಂಕುಗಳು ನಡೆಸಬೇಕಾದ ಠೇವಣಿ ಸಂಗ್ರಹ ಹಾಗೂ ಸಾಲ ನೀಡುವ ವ್ಯವಹಾರವನ್ನು ಇಂತಹ ಸಂಸ್ಥೆಗಳೇ ತಮ್ಮ ವೆಬ್ ವೇದಿಕೆ ಮೂಲಕ ನಡೆಸುತ್ತವೆ. ಇಲ್ಲಿ ಬ್ಯಾಂಕ್‌ಗಳ ಸಹಭಾಗಿತ್ವ ಇಲ್ಲ.


ಷೇರುಪೇಟೆ, ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು, ಕ್ರಿಪ್ಟೊ, ರಿಯಲ್ ಎಸ್ಟೇಟ್ ಅಥವಾ ಚಿನ್ನ ಇತ್ಯಾದಿ ಹೂಡಿಕೆ ಪ್ರಕಾರಗಳಿಗಿಂತ ಇದು ತುಸು ಭಿನ್ನವಾದ ಅಪಾಯ ಹೊಂದಿದೆ. ಬ್ಯಾಂಕ್‌ಗಳು ಕೊಟ್ಟ ಸಾಲ ಮರಳಿ ಬರದಿದ್ದರೆ ಆ ಮೊತ್ತ ಎನ್‌ಪಿಎ ಆಗಿ ಪರಿವರ್ತನೆಯಾಗುತ್ತದೆ. ಅಂಥದೇ ಅಪಾಯ ಇಲ್ಲಿ ಕೊಡುವ ಸಾಲಗಳಿಗೂ ಇದೆ. ಕಾರಣ, ಪಿ2ಪಿ ವ್ಯವಹಾರದಲ್ಲಿ ಸಾಲ ಪಡೆಯುವ ವ್ಯಕ್ತಿಯ ಸಾಮಾನ್ಯ ವ್ಯಾವಹಾರಿಕ ನಡವಳಿಕೆ, ಈತನಕದ ಸಿಬಿಲ್ ಅಂಕ, ಪ್ಯಾನ್, ಆಧಾರ್, ಆದಾಯ ಮೂಲ ಇತ್ಯಾದಿಗಳನ್ನಷ್ಟೇ ಮುಖ್ಯ ಮಾನದಂಡವನ್ನಾಗಿ ಪರಿಗಣಿಸಿ ಸಾಲಗಾರರ ಶ್ರೇಣಿಯನ್ನು ವರ್ಗೀಕರಿಸಲಾಗುತ್ತದೆ.

ಈ ವ್ಯವಹಾರದಲ್ಲಿ ಹಣ ತೊಡಗಿಸಬೇಕೆ ಬೇಡವೇ ಎನ್ನುವ ಮೊದಲು ಈ ಕೆಲವು ಅಂಶಗಳನ್ನು ಪರಿಗಣಿಸಿ.
1) ಪಿ2ಪಿ ವ್ಯವಹಾರ ನಡೆಸುವ ಸಂಸ್ಥೆಗಳು ಸಾಲ ಮರುಪಾವತಿಗೆ ಯಾವುದೇ ರೀತಿಯ ಭದ್ರತೆ ನೀಡುವುದಿಲ್ಲ. ಸಾಲ ಪಡೆದಾತ ಯಾವುದೇ ಕಾರಣಕ್ಕೆ ಹಣ ಮರಳಿಸದಿದ್ದಲ್ಲಿ ಸಾಲ ನೀಡಿದ ವ್ಯಕ್ತಿ ನಷ್ಟ ಅನುಭವಿಸಬೇಕಾಗಬಹುದು. ಸಾಲ ಪಡೆದಾತ ದೇಶದ ಯಾವುದೋ ಮೂಲೆಯಲ್ಲಿ ವ್ಯವಹರಿಸುತ್ತಿರಬಹುದು. ಹೀಗಾಗಿ ಹಣ ವಸೂಲಾತಿ ಕಾನೂನು ಪ್ರಕ್ರಿಯೆ ಬಹಳ ನಿಧಾನವಾಗಿ ಸಾಗಬಹುದು.
2) ಎಲ್ಲಾ ಬಡ್ಡಿ ದರಗಳು ಅಲ್ಲಿ ನಿಗದಿಪಡಿಸುವ ಗರಿಷ್ಠ ದರಗಳಾಗಿರುತ್ತವೆಯೇ ಹೊರತು ಅದಕ್ಕಿಂತ ಅಧಿಕ ಲಾಭ ನಿಮಗೆ ಸಿಗಲಾರದು. 3) ಇಲ್ಲಿ ಬ್ಯಾಂಕ್‌ಗಳಂತೆ ಲಿಖಿತ ರೂಪದಲ್ಲಿ ಸಾಲ ಮಂಜೂರಾತಿ, ಅದಕ್ಕೆ ಸಂಬಂಧಿಸಿದಂತೆ ಆಸ್ತಿ ಅಡಮಾನ ಇರುವುದಿಲ್ಲ. ಇಂತಹ ಸಾಲಗಳನ್ನು ವೈಯಕ್ತಿಕ ಅಭದ್ರ ಸಾಲವೆಂದೇ ತಿಳಿಯಲಾಗುತ್ತದೆ.
4) ಇಂತಹ ವ್ಯವಹಾರದಲ್ಲಿ ಹಣ ತೊಡಗಿಸುವ ಮೊದಲು ಅಧಿಕ ಬಡ್ಡಿ ನೀಡುವ ಹೂಡಿಕೆಗಳ ಮೇಲೆ ಅಧಿಕ ಅಪಾಯವೂ ಇರುತ್ತದೆ ಎನ್ನುವುದು ತಿಳಿದಿರಲಿ.
5) ಇಲ್ಲಿ ನಿಮಗೆ ನಷ್ಟವಾಗುವ ಸಾಧ್ಯತೆಯೂ ಇರುತ್ತದೆ. ನಿಮಗೆ ಹೊರೆಯಾಗದಷ್ಟು ಮೊತ್ತ ಮಾತ್ರ ತೊಡಗಿಸಿ. ಮೊದಲು ಸಣ್ಣ ಮೊತ್ತ ತೊಡಗಿಸಿ ವ್ಯವಹಾರವನ್ನು ಅರಿತುಕೊಳ್ಳಿ. ಆರ್‌ಬಿಐ ಪರವಾನಗಿ ಇರುವ ಸಂಸ್ಥೆಗಳೊಂದಿಗಷ್ಟೇ ವ್ಯವಹರಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in





ಕಾಮನ್‌ವೆಲ್ತ್ ಕ್ರೀಡಾಕೂಟದ ಮುಕ್ತಾಯ ಸಮಾರಂಭದಲ್ಲಿ ಸಿಡಿಮದ್ದುಗಳ ಚಿತ್ತಾರದಲ್ಲಿ ಕಂಗೊಳಿಸಿದ ಬರ್ಮಿಂಗ್‌ಹ್ಯಾಮ್ ಕ್ರೀಡಾ ಗ್ರಾಮ (ಎಡ) ಪಥಸಂಚಲನದಲ್ಲಿ ತ್ರಿವರ್ಣ ಧ್ವಜ ಹಿಡಿದು ಹೆಜ್ಜೆ ಹಾಕಿದ ಟೇಬಲ್ ಟೆನಿಸ್ ಆಟಗಾರ ಅಚಂತ ಶರತ್ ಕಮಲ್ ಹಾಗೂ ಮಹಿಳಾ ಬಾಕ್ಸರ್ ನಿಖತ್ ಜರೀನ್ —ಪಿಟಿಐ ಚಿತ್ರಗಳು

ಸ್ಟೀಪಲ್ ಚೇಸ್ ಅಥ್ಲೀಟ್ ಸಬ್ಳೆ ಆತ್ಮವಿಶ್ವಾಸದ ನುಡಿ: ಬೆಂಗಳೂರು ಸಾಯ್‌ನಲ್ಲಿ ಸನ್ಮಾನ

‘ಒಲಿಂಪಿಕ್ ಪದಕ ಜಯಿಸುವುದೇ ಗುರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಬರೀ ಒಲಿಂಪಿಯನ್ ಆಗುವ ಗುರಿಯನ್ನು ಮಾತ್ರ ಹೊಂದಿಲ್ಲ. ಕಾಲದೊಂದಿಗೆ ನಮ್ಮ ಮನಸ್ಥಿತಿಯೂ ಬದಲಾಗಿದೆ. ಈಗೇನಿದ್ದರೂ ಒಲಿಂಪಿಕ್ ಪದಕವಿಜೇತರೆಂದು ಕರೆಸಿಕೊಳ್ಳಲು ಬಯಸುತ್ತೇವೆ. ಅಂತರರಾಷ್ಟ್ರೀಯ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಪದಕ ಜಯಿಸುವ ಸಾಮರ್ಥ್ಯ ಭಾರತೀಯರಿಗೂ ಇದೆ’

ಸೋಮವಾರ ಬರ್ಮಿಂಗ್‌ಹ್ಯಾಮ್‌ನಲ್ಲಿ ಮುಕ್ತಾಯವಾದ ಕಾಮನ್‌ವೆಲ್ತ್ ಕ್ರೀಡಾಕೂಟದ 3000 ಮೀಟರ್ಸ್ ಸ್ಟೀಪಲ್‌ಚೇಸ್‌ನಲ್ಲಿ ಬೆಳ್ಳಿ ಪದಕ ಜಯಿಸಿರುವ ಅವಿನಾಶ್ ಸಬ್ಳೆ ಅವರ ಆತ್ಮವಿಶ್ವಾಸಭರಿತ ನುಡಿಗಳಿವು. ಕಾಮನ್‌ವೆಲ್ತ್ ಕೂಟದಲ್ಲಿ ಕಳೆದ 24 ವರ್ಷಗಳಿಂದ ಕೆನ್ಯಾದವರದ್ದೇ ಪ್ರಾಬಲ್ಯವಿತ್ತು. ಈ ಅವಧಿಯಲ್ಲಿ ಕೆನ್ಯಾ ಬಿಟ್ಟು ಪದಕ ಜಯಿಸಿದ ಬೇರೆ ದೇಶದ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಅವಿನಾಶ್ ಪಾತ್ರರಾಗಿದ್ದಾರೆ. ಮಂಗಳವಾರ ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ ಸೌತ್ ಸೆಂಟರ್‌ನಲ್ಲಿ ನಡೆದ ಸಮಾರಂಭದಲ್ಲಿ ಅವಿನಾಶ್ ಹಾಗೂ ಟ್ರಿಪಲ್ ಜಂಪ್‌ನಲ್ಲಿ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಗೆದ್ದು ಬಂದಿರುವ ಎಲ್ಡೊಸಾ ಪಾಲ್ ಮತ್ತು ಅಬ್ದುಲ್ಲಾ ಅಬೂಬಕ್ಕರ್ ಅವರನ್ನು ಸನ್ಮಾನಿಸಲಾಯಿತು.



ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಜಯಿಸಿದ ಭಾರತದ ಅಥ್ಲೀಟ್‌ಗಳಾದ ಅವಿನಾಶ್ ಸಬ್ಳೆ (3000 ಮೀ ಸ್ಟೀಪಲ್‌ಚೇಸ್ –ಬೆಳ್ಳಿ), ಎಲ್ಡೊಸಾ ಪಾಲ್ (ಟ್ರಿಪಲ್ ಜಂಪ್ – ಚಿನ್ನ), ಅಬ್ದುಲ್ಲಾ ಅಬೂಬಕ್ಕರ್ (ಬೆಳ್ಳಿ –ಟ್ರಿಪಲ್ ಜಂಪ್) ಹಾಗೂ ಎಂ. ಹರಿಕೃಷ್ಣನ್ ಅವರನ್ನು ಬೆಂಗಳೂರಿನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರ ಸೌತ್ ಸೆಂಟರ್‌ನಲ್ಲಿ ಮಂಗಳವಾರ ಸನ್ಮಾನಿಸಲಾಯಿತು ಪ್ರಜಾವಾಣಿ ಚಿತ್ರ/ ರಂಜು ಪಿ

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವಿನಾಶ್, ‘ಮಧ್ಯಮ ಹಾಗೂ ದೂರ ಅಂತರದ ಓಟದಲ್ಲಿ ಕೆನ್ಯಾದವರಷ್ಟೇ ಅಲ್ಲ ಭಾರತೀಯರೂ ಪದಕ ಜಯಿಸಬಲ್ಲರು ಎಂದು ತೋರಿಸಿಕೊಡುವ ಗುರಿ ಇತ್ತು. ಅದು ಈಡೇರಿದ ಸಂತೃಪ್ತಿ ನನಗೀಗ ಲಭಿಸಿದೆ. ರೇಸ್‌ನಲ್ಲಿ ತುಂಬಾ ಕಠಿಣ ಸ್ಪರ್ಧೆ ಇತ್ತು. ಯಾವಾಗಲೂ ಸ್ಪರ್ಧೆಗಳಲ್ಲಿ ಕೆನ್ಯಾದ ಓಟಗಾರರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ರೇಸ್‌ನ ಪ್ರಮುಖ ಘಟ್ಟದಲ್ಲಿ ಅವರು ಗುಂಪಾಗಿ ಮುಂಚೂಣಿಗೆ ಬಂದುಬಿಡುತ್ತಾರೆ. ಈ ಬಾರಿಯ ಸ್ಪರ್ಧೆಯಲ್ಲಿ ನನಗಿಂತ ಮುಂದಿದ್ದ ಕೆನ್ಯಾದ ಓಟಗಾರರು ಒಂದು ಹಂತದಲ್ಲಿ ಹಿಂತಿರುಗಿ ನೋಡಿದರು. ನಾನೆಷ್ಟು ದೂರದಲ್ಲಿದ್ದೇನೆ ಎಂದು ಅಂದಾಜಿಸಿದರು. ಆ ಸಂದರ್ಭವೇ ನನ್ನ ಬಲ ಹೆಚ್ಚಿಸಿತು. ಪದಕ ಜಯಿಸಲೇಬೇಕು ಎಂಬ ಉತ್ಕಟ ವಿಶ್ವಾಸದಿಂದ ಮುನ್ನುಗ್ಗಿದೆ’ ಎಂದು ಅವಿನಾಶ್ ವಿವರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಲ್ಡೊಸಾ, ‘ಸ್ವಂತ ವೈಯಕ್ತಿಕ ಶ್ರೇಷ್ಠ ದಾಖಲೆಯನ್ನು ಸರಿಗಟ್ಟುವ ಗುರಿಯಿತ್ತು. ಇಂತಹ ದೊಡ್ಡ ಸ್ಪರ್ಧಾಕಣದಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡುವುದು ಕೂಡ ದೊಡ್ಡ ಸಾಧನೆಯೇ ಸರಿ. ಪದಕ ಗೆಲ್ಲುವ ಒತ್ತಡ ನನ್ನಲ್ಲಿ ಇರಲಿಲ್ಲ. ಅದೇ ನನಗೆ ವರದಾನವಾಯಿತು’ ಎಂದು ವಿವರಿಸಿದರು.

ಅವರಿಗೆ ದನಿಗೂಡಿಸಿದ ಅಬ್ದುಲ್ಲಾ, ‘ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸಿದ್ದು ನನಗೆ ಮೊಟ್ಟಮೊದಲ ಅಂತರರಾಷ್ಟ್ರೀಯ ಸ್ಪರ್ಧೆ. ಕ್ಯಾಲಿಫೋರ್ನಿಯಾದಲ್ಲಿ ನಾನು ಒಬ್ಬನೇ ಇದ್ದೆ. ಬಹಳ ಖಿನ್ನನಾಗಿದೆ. ಅಲ್ಲಿ ನಿರೀಕ್ಷೆಗೆ ತಕ್ಕ ಫಲಿತಾಂಶ ಲಭಿಸಲಿಲ್ಲ. ನನ್ನ ಕೋಚ್ ನೀಡಿದ ಮಾರ್ಗದರ್ಶನ ಮತ್ತು ಪ್ರೋತ್ಸಾಹದಿಂದ 17 ಮೀಟರ್ಸ್‌ಗಿಂತಲೂ ಹೆಚ್ಚು ದೂರ ಜಿಗಿಯಲು ಸಾಧ್ಯವಾಯಿತು’ ಎಂದರು.

ಕಾಮನ್‌ವೆಲ್ತ್ ಕೂಟದ ಅಥ್ಲೆಟಿಕ್ಸ್‌ನ ಒಂದೇ ಸ್ಪರ್ಧೆಯಲ್ಲಿ ಭಾರತದ ಇಬ್ಬರು ಅಥ್ಲೀಟ್‌ಗಳು ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದಿದ್ದು ಇದೇ ಮೊದಲು.

ಕಾರ್ಯಕ್ರಮದಲ್ಲಿ ಕೋಚ್ ಹರಿಕೃಷ್ಣ ಹಾಜರಿದ್ದರು.

ಅಮೆರಿಕ ಓಪನ್ ಟೂರ್ನಿಯೇ ಕೊನೆಯ ಗ್ರ್ಯಾನ್‌ಸ್ಲಾಂ

ಸೆರೆನಾ ನಿವೃತ್ತಿ ತೀರ್ಮಾನ

ಪ್ಯಾರಿಸ್ (ಎಎಫ್‌ಪಿ): ಟೆನಿಸ್ ಕ್ರೀಡೆಯ ದಿಗ್ಗಜ ಆಟಗಾರ್ತಿ, ಅಮೆರಿಕದ ಸೆರೆನಾ ವಿಲಿಯಮ್ಸ್ ವೃತ್ತಿಜೀವನಕ್ಕೆ ವಿದಾಯ ಹೇಳುವ ಇಂಗಿತ ವ್ಯಕ್ತಪಡಿಸಿದ್ದಾರೆ.

‘ಜೀವನದಲ್ಲಿ ವಿಭಿನ್ನ ದಿಕ್ಕಿನಲ್ಲಿ ಪ್ರಯಾಣ ಆರಂಭಿಸಬೇಕಾದ ಕಾಲ ಈಗ ಬಂದಿದೆ. ಮತ್ತೊಂದು ಹಾದಿಯಲ್ಲಿ ಸಾಗಲು ನಿರ್ಧರಿಸಿದ್ದೇನೆ. ನಾವು ಅತ್ಯಂತ ಪ್ರೀತಿಸುವ ಸಂಗತಿಯಿಂದ ದೂರವಾಗುವ ನಿರ್ಧಾರವು ಯಾವಾಗಲೂ ಕಠಿಣ ಹಾಗೂ ನೋವು ತರುವಂತದ್ದು. ನಾನು ಅತ್ಯಂತ ಪ್ರೀತಿಸುವುದು ಟೆನಿಸ್ ಆಟವನ್ನು. ಆದರೆ ಈಗ ದಿನಗಣನೆ ಆರಂಭವಾಗಿದೆ’ ಎಂದು 40 ವರ್ಷದ ಸೆರೆನಾ ಮಂಗಳವಾರ ಇನ್ಸ್ಟಾಗ್ರಾಮ್‌ನಲ್ಲಿ ಸಂದೇಶ ಹಾಕಿದ್ದಾರೆ.

‘ತಾಯಿಯಾಗಿ ನಿರ್ವಹಿಸಬೇಕಾದ ಕರ್ತವ್ಯದ ಮೇಲೆ ನನ್ನ ಗಮನ ಕೇಂದ್ರಿಕರಿಸಬೇಕಾಗಿದೆ. ಅಂತಿಮವಾಗಿ ಜೀವನದ ನೈಜ ಹಾಗೂ ಭಿನ್ನವಾದ ಅನ್ವೇಷಣೆಯತ್ತ ಸಾಗಲಿದ್ದೇನೆ. ಆದರೆ, ಮುಂದಿನ ಇನ್ನೂ ಕೆಲವು ವಾರಗಳವರೆಗೆ ಸೆರೆನಾಗೆ ಅತ್ಯಂತ ಕೌತುಕದ ದಿನಗಳಾಗಲಿವೆ. ಈ ದಿನಗಳನ್ನು ನಾನು ಮನಪೂರ್ವಕವಾಗಿ ಆಸ್ವಾದಿಸಲಿದ್ದೇನೆ’ ಎಂದು 23 ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳ ಒಡತಿ ಬರೆದುಕೊಂಡಿದ್ದಾರೆ.

2017ರಲ್ಲಿ ಗರ್ಭಿಣಿಯಾಗಿದ್ದ ಅವರು, ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಆಡಿ ಪ್ರಶಸ್ತಿ ಜಯಿಸಿದ್ದರು. ಅದು ಅವರ 23ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿಯಾಗಿತ್ತು. ಅದಾಗಿ ಕೆಲವು ದಿನಗಳ ನಂತರ ಮಗಳು ಒಲಿಂಪಿಯಾಗೆ ಜನ್ಮ ನೀಡಿದ್ದರು. ಕೆಲವು ತಿಂಗಳುಗಳ ನಂತರ ಅವರು ಟೆನಿಸ್ ಅಂಕಣಕ್ಕೆ ಮರಳಿದ್ದರು. ಆದರೆ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಜಯಿಸಲು ಸಾಧ್ಯವಾಗಿರಲಿಲ್ಲ.

ಈ ತಿಂಗಳಾಂತ್ಯದಲ್ಲಿ ನ್ಯೂಯಾರ್ಕ್‌ನಲ್ಲಿ ಆರಂಭವಾಗಲಿರುವ ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಕೊನೆಯ ಬಾರಿಗೆ ಕಣಕ್ಕಿಳಿಯಲಿದ್ದಾರೆ. ಇಲ್ಲಿ ಪ್ರಶಸ್ತಿ ಜಯಿಸಿದರೆ ಮಾರ್ಗರೆಟ್ ಕೋರ್ಟ್ (24 ಗ್ರ್ಯಾನ್‌ಸ್ಲಾಂ) ದಾಖಲೆಯನ್ನು ಸರಿಗಟ್ಟುವರು.

‘ಈ ವರ್ಷ ನಡೆದ ವಿಂಬಲ್ಡನ್ ಟೂರ್ನಿಯಲ್ಲಿ ಜಯಿಸಲು ನನ್ನ ಸಿದ್ಧತೆ ಸಾಕಾಗಿರಲಿಲ್ಲ. ಅದು ನನ್ನ ದುರದೃಷ್ಟ. ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಂ ಟೂರ್ನಿಗೂ ನಾನು ಸಿದ್ಧವಾಗಿದ್ದೇನೆ ಎಂಬುದು ಖಚಿತವಿಲ್ಲ. ನನ್ನ ಅಭಿಮಾನಿಗಳು ಮಾರ್ಗರೆಟ್ ದಾಖಲೆ ಸರಿಗಟ್ಟುವುದನ್ನು ಬಯಸುತ್ತಾರೆಂಬುದರ ಅರಿವು ನನಗಿದೆ. ಅಂದು ಲಂಡನ್‌ನಲ್ಲಿ (ವಿಂಬಲ್ಡನ್) ಆಗದಿದ್ದನ್ನು ಈಗ ನ್ಯೂಯಾರ್ಕ್‌ನಲ್ಲಿ ಮಾಡುವ ಅವಕಾಶ ಇದೆ. ಪ್ರಶಸ್ತಿ ಜಯಿಸಿದರೆ ಅದೊಂದು ಕ್ಷಣ ನನಗೆ ಅವಿಸ್ಮರಣೀಯವಾಗಲಿದೆ’ ಎಂದು ವೋಗ್ ನಿಯತಕಾಲಿಕೆಯ ಅಂಕಣದಲ್ಲಿ ಸೆರೆನಾ ಬರೆದಿದ್ದಾರೆ.



ಪುತ್ರಿಯೊಂದಿಗೆ ಸೆರೆನಾ ವಿಲಿಯಮ್ಸ್ —ಎಪಿ ಚಿತ್ರ

ಸೆರೆನಾ ವಿಲಿಯಮ್ಸ್ ಸಾಧನೆ

ಗ್ರ್ಯಾನ್‌ಸ್ಲಾಂ	ವರ್ಷ
ಆಸ್ಟ್ರೇಲಿಯಾ ಓಪನ್	2003,2005,2007, 2009, 2010,2015,2017
ಫ್ರೆಂಚ್ ಓಪನ್	2002,2013,2015
ವಿಂಬಲ್ಡನ್	2002,2003,2009,2010,2012, 2015,2016
ಅಮೆರಿಕ ಓಪನ್	1999, 2002, 2008,2012, 2013, 2014

ಒಲಿಂಪಿಕ್ಸ್ ಚಿನ್ನದ ಸಾಧನೆ

ವರ್ಷ	ಸ್ಥಳ	ವಿಭಾಗ
2000	ಸಿಡ್ನಿ	ಡಬಲ್ಸ್
2008	ಬೀಜಿಂಗ್	ಡಬಲ್ಸ್
2012	ಲಂಡನ್	ಸಿಂಗಲ್ಸ್
2012	ಲಂಡನ್	ಡಬಲ್ಸ್

ಮನೀಷ್ ಸಮಯೋಚಿತ ಆಟ: ಗುಲ್ಬರ್ಗಕ್ಕೆ ಜಯ

ಟಿ20: ಸಿದ್ಧಾರ್ಥ್, ರೋಹನ್ ಶತಕದ ಜೊತೆಯಾಟ ವ್ಯರ್ಥ: ಶಿವಮೊಗ್ಗ ತಂಡಕ್ಕೆ ಮತ್ತೆ ನಿರಾಸೆ

• ಮೋಹನ್ ಕುಮಾರ ಸಿ.

ಮೈಸೂರು: ನಾಯಕನಿಗೆ ತಕ್ಕ ಆಟವಾಡಿದ ಮನೀಷ್ ಪಾಂಡೆ ಅರ್ಧಶತಕದ ಬಲದಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಇಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮೊದಲ ಜಯ ಸಾಧಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಗುಲ್ಬರ್ಗ ತಂಡವು ಶಿವಮೊಗ್ಗ ಸ್ಟ್ರೈಕರ್ಸ್ ಎದುರು 3 ವಿಕೆಟ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ಮನೀಷ್ ಪಾಂಡೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಬ್ಯಾಟಿಂಗ್ ಆರಂಭಿಸಿದ ಶಿವಮೊಗ್ಗ ತಂಡಕ್ಕೆ ಕೆ.ವಿ.ಸಿದ್ಧಾರ್ಥ್ ಹಾಗೂ ರೋಹನ್ ಕದಂ ಜೊತೆಯಾಟದಲ್ಲಿ 108 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 175 ರನ್ ಗಳಿಸಿತು.

ವಿದ್ವತ್ ಕಾವೇರಪ್ಪ ಬೌಲಿಂಗ್‌ನಲ್ಲಿ ಸಿದ್ಧಾರ್ಥ್ ಜೀವದಾನ ಪಡೆದರು. ಮನೋಜ್ ಭಾಂಡಗೆ ಕ್ಯಾಚ್ ಕೈಚೆಲ್ಲಿದ್ದು, ಗುಲ್ಬರ್ಗಕ್ಕೆ ದುಬಾರಿಯಾಯಿತು. ಸಿದ್ಧಾರ್ಥ್, ಕದಂ ತಲಾ 53 ರನ್ ಗಳಿಸಿದರು. ಗುರಿ ಬೆನ್ನತ್ತಿದ ಗುಲ್ಬರ್ಗ ತಂಡಕ್ಕೆ ಜಸ್ವಂತ್ ಆಚಾರ್ಯ, ದೇವದತ್ ಪಡಿಕ್ಕಲ್ ಉತ್ತಮ ಆರಂಭ ಒದಗಿಸಿಕೊಟ್ಟರು. ಮೊದಲ ನಾಲ್ಕು ಓವರ್‌ಗಳಲ್ಲಿ ತಂಡ 33 ರನ್‌ಗಳಿಸಿತ್ತು. ಈ ವೇಳೆ ಡಿ.ಅವಿನಾಶ್ ಬೌಲಿಂಗ್‌ನಲ್ಲಿ ಪಡಿಕ್ಕಲ್ (9 ರನ್) ಬೌಲ್ಡ್ ಆದರೆ, ಜಸ್ವಂತ್ (30) ದರ್ಶನ್‌ಗೆ ಕ್ಯಾಚ್ ನೀಡಿದರು. ಅನುಭವಿ ಮನೀಷ್ ಪಾಂಡೆ (50; 36ಎ, 4x2, 6x3) ತಾಳ್ಮೆಯ ಆಟವಾಡಿದರು.

ರೋಹನ್ ಪಾಟೀಲ (28), ಕೆ.ಎಲ್.ಶ್ರೀಜಿತ್ (15), ಸಿ.ಎ.ಕಾರ್ತಿಕ್ (22) ಅವರೊಂದಿಗೆ ಪಾಂಡೆ ಇನಿಂಗ್ಸ್ ಕಟ್ಟಿದರು. ತಂಡವನ್ನು ಗೆಲುವಿನ ಗಡಿ ದಾಟಿಸಿದರು.



ಶಿವಮೊಗ್ಗ ಸ್ಟ್ರೈಕರ್ಸ್ ತಂಡದ ಕೆ.ವಿ.ಸಿದ್ಧಾರ್ಥ್ ಬ್ಯಾಟಿಂಗ್ ವೈಖರಿ ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮಂಗಳವಾರ ರಾತ್ರಿ ನಡೆದ ಎರಡನೇ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ 4 ವಿಕೆಟ್‌ಗಳಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಶಿವಮೊಗ್ಗ ಸ್ಟ್ರೈಕರ್ಸ್ 20 ಓವರ್‌ಗಳಲ್ಲಿ 8ಕ್ಕೆ 175 (ರೋಹನ್ ಕದಂ 53, ಕೆ.ವಿ.ಸಿದ್ಧಾರ್ಥ್ 53, ಕೆ.ಗೌತಮ್ 23, ಸಿ.ಎ.ಕಾರ್ತಿಕ್ 30ಕ್ಕೆ 3, ವಿದ್ವತ್ ಕಾರ್ಯಪ್ಪ 48ಕ್ಕೆ 2) ಗುಲ್ಬರ್ಗ ಮಿಸ್ಟಿಕ್ಸ್ : 19.1 ಓವರ್‌ಗಳಲ್ಲಿ 7ಕ್ಕೆ 177 (ಮನೀಷ್ ಪಾಂಡೆ 50, ಜಸ್ವಂತ್ ಆಚಾರ್ಯ 30, ರೋಹನ್ ಪಾಟೀಲ 28, ಡಿ.ಅವಿನಾಶ್ 40ಕ್ಕೆ5) ಫಲಿತಾಂಶ: ಗುಲ್ಬರ್ಗಕ್ಕೆ 3 ವಿಕೆಟ್ ಗೆಲುವು. ಪಂದ್ಯಶ್ರೇಷ್ಠ: ಪಾಂಡೆ

ರಾಜ್ಯ ಬ್ಯಾಸ್ಕೆಟ್‌ಬಾಲ್: ಮರ್ಚಂಟ್ಸ್ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಣ್ ಅವರ ಚುರುಕಿನ ಆಟದ ನೆರವಿನಿಂದ ದಾವಣಗೆರೆಯ ಮರ್ಚಂಟ್ಸ್ ಕ್ಲಬ್ ತಂಡದವರು ಇಲ್ಲಿ ನಡೆಯುತ್ತಿರುವ ರಾಜ್ಯ 16 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಜಯ ಸಾಧಿಸಿದರು.

ಕಂಠೀರವ ಕ್ರೀಡಾಂಗಣದ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಬಾಲಕರ ವಿಭಾಗದ ಪಂದ್ಯದಲ್ಲಿ ಮರ್ಚಂಟ್ಸ್ 59–4 ರಲ್ಲಿ ಸಿಜೆಸಿ ತಂಡವನ್ನು ಮಣಿಸಿತು. ಕರಣ್ ಅವರು 24 ಪಾಯಿಂಟ್ ತಂದಿತ್ತರು.

ಬಿಸಿ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡ 48–45 ರಲ್ಲಿ ಎಚ್‌ಬಿಆರ್ ಬ್ಯಾಸ್ಕೆಟ್‌ಬಾಲ್ ತಂಡವನ್ನು ಮಣಿಸಿತು. ವಿಜಯಿ ತಂಡದ ಪಾರ್ಥ್ 22, ಯಶ್ 11 ಪಾಯಿಂಟ್ ತಂದುಕೊಟ್ಟರು. ಪಂದ್ಯಗಳಲ್ಲಿ ಪಟ್ಟಾಭಿರಾಮನ್ ಕ್ಲಬ್ 53–16 ರಲ್ಲಿ ಮೌಂಟ್ಸ್ ಕ್ಲಬ್ ವಿರುದ್ಧ; ನ್ಯಾಷನಲ್ಸ್ ಕ್ಲಬ್ ಮೈಸೂರು 39–16 ರಲ್ಲಿ ವೈಎಂಎಂಎ ವಿರುದ್ಧ; ಎಂಸಿಎಚ್‌ಎಸ್ 64– 34 ರಲ್ಲಿ ವಿಬಿಸಿ ಮಂಡ್ಯ ವಿರುದ್ಧ; ಬೀಗಲ್ಸ್ 85– 30 ರಲ್ಲಿ ರೋವರ್ಸ್ ಧಾರವಾಡ ವಿರುದ್ಧ ಜಯ ಸಾಧಿಸಿದವು.

ಬಾಲಕಿಯರ ವಿಭಾಗದ ಪಂದ್ಯದಲ್ಲಿ ಮಂದಾರ ಅವರ ಉತ್ತಮ ಆಟದ ನೆರವಿನಿಂದ ಡಿವೈಇಎಸ್ ಮಂಡ್ಯ ತಂಡ 43–5 ರಲ್ಲಿ ಸಿನ್ಸಿನಾಟಿಕ್ಸ್ ಕ್ಲಬ್ ಎದುರು ಜಯಿಸಿತು. ಎಸ್ ಬ್ಲ್ಯೂಸ್ 61–49 ರಲ್ಲಿ ಕೋರಮಂಗಲ ಎಸ್‌ಸಿ ವಿರುದ್ಧ; ಆಲ್‌ಸ್ಟಾರ್ ಮೈಸೂರು 36–19 ರಲ್ಲಿ ಪಿಪಿಸಿ ವಿರುದ್ಧ; ಆರ್ಯನ್ಸ್ ಬಿಸಿ ಮೈಸೂರು 48–47 ರಲ್ಲಿ ಎಚ್‌ಬಿಆರ್ ಬಿಸಿ ವಿರುದ್ಧ; ನ್ಯಾಷನಲ್ಸ್ ಮೈಸೂರು 40–35 ರಲ್ಲಿ ಬೆಂಗಳೂರು ಸ್ಪೋರ್ಟಿಂಗ್ ವಿರುದ್ಧ; ಅಪ್ಪಯ್ಯ ತಂಡ 34–31 ರಲ್ಲಿ ಮಲ್ಲಸಜ್ಜನ ಕ್ಲಬ್ ಧಾರವಾಡ ತಂಡವನ್ನು ಸೋಲಿಸಿದವು.

ಕೊಕ್ಕೊ ಆಟಗಾರ ವಿನಯಕುಮಾರ್ ನಿಧನ



ತೀರ್ಥಹಳ್ಳಿ: ರಾಷ್ಟ್ರೀಯ ಕೊಕ್ಕೊ ಆಟಗಾರ, ಪಟ್ಟಣದ ಸೀಬಿನಕೆರೆ ವಿನಯಕುಮಾರ್ (34) ಅನಾರೋಗ್ಯದಿಂದಾಗಿ ಸೋಮವಾರ ಸಂಜೆ ಮಣಿಪಾಲ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, 8 ತಿಂಗಳ ಗಂಡು ಮಗು, ತಾಯಿ, ಇಬ್ಬರು ಸಹೋದರರು ಇದ್ದಾರೆ. ಮಂಗಳವಾರ ಅಂತ್ಯಸಂಸ್ಕಾರ ನಡೆಯಿತು. ಕೆಲವು ದಿನಗಳಿಂದ ನಿರಂತರ ಜ್ವರ ದಿಂದ ಬಳಲುತ್ತಿದ್ದ ಅವರು, ಪಟ್ಟಣದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ತೀರ್ಥಹಳ್ಳಿಯ ಏಕಲವ್ಯ ಸ್ಪೋರ್ಟ್ಸ್ ಕ್ಲಬ್ ಸದಸ್ಯರಾಗಿದ್ದ ಅವರು, ಉತ್ತಮ ಪ್ರದರ್ಶನದ ಮೂಲಕ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದರು. ರಾಜ್ಯ ಸರ್ಕಾರ ‘ಕ್ರೀಡಾ ರತ್ನ’ ಪ್ರಶಸ್ತಿ ನೀಡಿ ಗೌರವಿಸಿತ್ತು.

ಚೀನಾದ ದಾಳಿ ಸಾಧ್ಯತೆ ಎದುರಿಸಲು ಸಿದ್ಧತೆ

ತೈವಾನ್ ಸೇನೆಯಿಂದಲೂ ಸಮರಾಭ್ಯಾಸ

ಪಿಂಗುಟುಂಗ್ (ಎ.ಪಿ): ಚೀನಾದ ಸಂಭವನೀಯ ದಾಳಿ ಎದುರಿಸುವ ಸಿದ್ಧತೆ ಭಾಗವಾಗಿ ತೈವಾನ್‌ನ ಸೇನೆಯೂ ಸಮರಾಭ್ಯಾಸ ನಡೆಸಿದೆ. ಇನ್ನೊಂದೆಡೆ, ‘ಚೀನಾವು ಸಮುದ್ರ ಭಾಗದ ಮೇಲೆ ನಿಯಂತ್ರಣ ಹೊಂದಲು ಯತ್ನಿಸುತ್ತಿದೆ’ ಎಂದು ತೈವಾನ್ ಆರೋಪಿಸಿದೆ.

ತೀವ್ರ ಸಮರಾಭ್ಯಾಸ ನಡೆಸುತ್ತಿರುವ ಚೀನಾದ ಸಂಭವನೀಯ ದಾಳಿಯನ್ನು ಎದುರಿಸಲು ಸಿದ್ಧ ಎಂಬ ಸಂದೇಶವನ್ನು ರವಾನಿಸುವ ಭಾಗವಾಗಿ ತೈವಾನ್ ಸೇನೆಯು, ಯುದ್ಧಾಭ್ಯಾಸ ಮಾಡಿತು.

‘ಪ್ರತಿಯಾಗಿ ತೈವಾನ್ ಕೂಡಾ ತಾಲೀಮು ನಡೆಸುತ್ತಿದೆ. ಸಂಭವನೀಯ ಬೆದರಿಕೆ ಎದುರಿಸಲು ಸೇನೆ ಸಜ್ಜಾಗಿದೆ’ ಎಂದು ತೈವಾನ್‌ನ 8ನೇ ಸೇನಾ ಕಮಾಂಡರ್‌ನ ವಕ್ತಾರ ಮೇಜರ್ ಜನರಲ್ ಲೌ ವೋ ಜೈ ಅವರು ಹೇಳಿದರು.

ತೈವಾನ್‌ನ ವಿದೇಶಾಂಗ ಸಚಿವ ಜೋಸೆಫ್ ವು, ‘ತೈವಾನ್ ಪಶ್ಚಿಮದ ಸಮುದ್ರ ಭಾಗ ಮತ್ತು ಅನೆಕ್ಸ್ ತೈವಾನ್ ವ್ಯಾಪ್ತಿಯಲ್ಲಿ ನಿಯಂತ್ರಣ ಹೊಂದಲು ಚೀನಾ ಯತ್ನಿಸುತ್ತಿದೆ. ಈ ಭಾಗ ತನ್ನ ಗಡಿಗೆ ಸೇರಲಿದೆ ಎಂದು ಪ್ರತಿಪಾದಿಸಿದೆ’ ಎಂದು ಆರೋಪಿಸಿದರು.

ತೈವಾನ್ ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ತಡೆಯಲು ಅಥವಾ ಆಡಳಿತದಲ್ಲಿ ಹಸ್ತಕ್ಷೇಪ ಮಾಡಲು ಚೀನಾಗೆ ಯಾವುದೇ ಹಕ್ಕು ಇಲ್ಲ. ತೈವಾನ್ ಮತ್ತು ಮೇನ್‌ಲ್ಯಾಂಡ್ ಪ್ರತ್ಯೇಕ ಗಡಿಯನ್ನು ಹೊಂದಿವೆ ಎಂದು ಅವರು ಪ್ರತಿಪಾದಿಸಿದರು.

ಅಮೆರಿಕ ಜನಪ್ರತಿನಿಧಿಗಳ ಸಭೆಯ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು ತೈಪೆಗೆ ಭೇಟಿ ನೀಡಿದ್ದಕ್ಕೆ ಪ್ರತಿಕಾರವಾಗಿ ಚೀನಾವು ತೈವಾನ್ ಆಸುಪಾಸಿನಲ್ಲಿ ಸಮರಾಭ್ಯಾಸವನ್ನು ಚುರುಕುಗೊಳಿಸಿದೆ. ತಾಲೀಮು ನಿರಂತರ ನಡೆಯಲಿದೆ ಎಂದೂ ಸ್ಪಷ್ಟಪಡಿಸಿದೆ.

ಉಭಯ ದೇಶಗಳು ಸೇನಾ ತಾಲೀಮು ಕುರಿತಂತೆ ಸ್ವಯಂ ನಿಯಂತ್ರಣ ಹೊಂದಬೇಕು. ಯುದ್ಧ ನಡೆಸುವುದು ಜನರ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ ಎಂದು ಸ್ಥಳೀಯ ನಿವಾಸಿ ಚೆನ್ ಪ್ರತಿಕ್ರಿಯಿಸಿದರು.

ಚೀನಾದ ಸಮರಾಭ್ಯಾಸವು ಸಮುದ್ರ ಮಾರ್ಗದಲ್ಲಿ ಹಡಗುಗಳ ಸಂಚಾರದ ಮೇಲೂ ಪರಿಣಾಮ ಬೀರಿದ್ದು, ಪರೋಕ್ಷವಾಗಿ ಜಾಗತಿಕ ವಾಣಿಜ್ಯ ಚಟುವಟಿಕೆಯನ್ನು ಅಸ್ತವ್ಯಸ್ತಗೊಳಿಸಿದೆ. ಮಂಗಳವಾರವೂ ಚೀನಾದ ಸಮರಾಭ್ಯಾಸ ಮುಂದುವರಿಯಿತು.

ಕಂಪ್ಯೂಟರ್ ಚಿಪ್‌ಗಳ ಪೂರೈಕೆಯಲ್ಲಿ ಮುಂಚೂಣಿಯಲ್ಲಿ ಇರುವ ಜಾಗತಿಕ ವಾಣಿಜ್ಯ ವಹಿವಾಟಿನಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ. ತೈವಾನ್‌ನಲ್ಲಿ ಈಗ ತಲೆದೋರಿರುವ ಬಿಕ್ಕಟ್ಟು ಜಗತ್ತಿನ ವಾಣಿಜ್ಯ ಚಟುವಟಿಕೆಯ ಮೇಲೂ ಪರಿಣಾಮ ಬೀರುವ ಆತಂಕ ಎದುರಾಗಿದೆ.

ಶ್ವೇತಭವನದಿಂದ ದಾಖಲೆಗಳಿದ್ದ 15 ಪೆಟ್ಟಿಗೆ ಒಯ್ದಿದ್ದ ಮಾಜಿ ಅಧ್ಯಕ್ಷ

ಟ್ರಂಪ್ ನಿವಾಸದ ಮೇಲೆ ಎಫ್‌ಬಿಐ ದಾಳಿ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸೇರಿದ, ಫ್ಲಾರಿಡಾದಲ್ಲಿರುವ ಕ್ಲಬ್ ಹಾಗೂ ನಿವಾಸದ ಮೇಲೆ ಎಫ್‌ಬಿಐ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ತನಿಖಾ ಸಂಸ್ಥೆಯ ಅಧಿಕಾರಿಗಳಿಂದ ಶೋಧ ಕಾರ್ಯ ನಡೆದಿದ್ದ ವೇಳೆ ಟ್ರಂಪ್ ಅವರು ನಿವಾಸದಲ್ಲಿ ಇರಲಿಲ್ಲ. ಅವರು ನ್ಯೂಯಾರ್ಕ್‌ನಲ್ಲಿದ್ದರು ಎಂದು ಮಾಧ್ಯಮಗಳು ವರದಿ ಮಾಡಿವೆ.

ತಮ್ಮ ಅಧಿಕಾರಾವಧಿ ಮುಗಿದ ನಂತರ, 2021ರ ಜನವರಿಯಲ್ಲಿ ಶ್ವೇತ ಭವನವನ್ನು ತೊರೆದ ಟ್ರಂಪ್ ಅವರು, ದಾಖಲೆಗಳಿದ್ದ 15 ಪೆಟ್ಟಿಗೆಗಳನ್ನು ತಮ್ಮ ನಿವಾಸ ಮಾರ್–ಎ–ಲಾಗೊಗೆ ತೆಗೆದುಕೊಂಡು ಹೋಗಿದ್ದರು. ಈ ಕುರಿತು ತನಿಖೆ ನಡೆಸುತ್ತಿರುವ ಎಫ್‌ಬಿಐ, ಈಗ ಶೋಧ ಕಾರ್ಯ ಕೈಗೊಂಡಿದೆ ಎಂದು ಮೂಲಗಳು ಹೇಳಿವೆ.



ಡೊನಾಲ್ಡ್ ಟ್ರಂಪ್

ಈ ಬೆಳವಣಿಗೆ ಕುರಿತು ಆಕ್ರೋಶ ಹೊರಹಾಕಿರುವ ಟ್ರಂಪ್, ‘2024ರಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ನಾನು ಮತ್ತೆ ಸ್ಪರ್ಧಿಸುವುದನ್ನು ತಡೆಯುವ ಯತ್ನ ಇದಾಗಿದೆ’ ಎಂದು ಟೀಕಿಸಿದ್ದಾರೆ.

ಈ ಕುರಿತು ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಅವರು, ‘ಫ್ಲಾರಿಡಾದ ಪಾಮ್ ಬೀಚ್‌ನಲ್ಲಿರುವ ನನ್ನ ಮಾರ್–ಎ–ಲಾಗೊ ನಿವಾಸದ ಮೇಲೆ ಎಫ್‌ಬಿಐ ಏಜೆಂಟರು ದಾಳಿ ನಡೆಸಿದ್ದು, ಅಮೆರಿಕಕ್ಕೆ ಕರಾಳ ದಿನಗಳಿವು’ ಎಂದಿದ್ದಾರೆ.

‘ಅಮೆರಿಕದ ಅಧ್ಯಕ್ಷ ಹುದ್ದೆಯಲ್ಲಿದ್ದವರಿಗೆ ಈ ಹಿಂದೆ ಇಂಥ ಪರಿಸ್ಥಿತಿ ಬಂದೊದಗಿರಲಿಲ್ಲ. ನನ್ನ ಸುರಕ್ಷಿತ ನೆಲೆಯ ಬಾಗಿಲನ್ನು ಒಡೆದು ತೆರೆಯಲಾಗಿದೆ. ತೃತೀಯ ಜಗತ್ತಿನ ದೇಶಗಳಲ್ಲಿ ಮಾತ್ರ ಇಂತಹ ದಾಳಿ ನಡೆಯುತ್ತದೆ’ ಎಂದೂ ಟೀಕಿಸಿದ್ದಾರೆ.

‘ತನಿಖೆಗೆ ಸಹಕರಿಸಿದ ನಂತರವೂ ನನ್ನ ಮನೆಯ ಮೇಲೆ ಏಕಾಏಕಿ ದಾಳಿ ನಡೆಸುವ ಅಗತ್ಯವಿರಲಿಲ್ಲ. ಈ ರೀತಿಯ ದಾಳಿ ಸೂಕ್ತವೂ ಅಲ್ಲ’ ಎಂದಿದ್ದಾರೆ.

ಈ ದಾಳಿ ಹಾಗೂ ಶೋಧ ಕಾರ್ಯ ಕುರಿತು ಪ್ರತಿಕ್ರಿಯಿಸಲು ನ್ಯಾಯಾಂಗ ಇಲಾಖೆ ಹಾಗೂ ಎಫ್‌ಬಿಐ ನಿರಾಕರಿಸಿವೆ.

ಈ ಕುರಿತು ಪ್ರತಿಕ್ರಿಯಿಸಿರುವ ಟ್ರಂಪ್ ಪರ ವಕೀಲರು, ‘ಕಳೆದ ಜನವರಿಯಲ್ಲಿಯೇ ಟ್ರಂಪ್ ಅವರು ತಮ್ಮ ಬಳಿ ಇದ್ದ ದಾಖಲೆಗಳನ್ನು ನ್ಯಾಷನಲ್ ಆರ್ಕೈವ್‌ಗೆ ಹಸ್ತಾಂತರಿಸಿದ್ದಾರೆ. ಬೇರೆ ದಾಖಲೆಗಳೇನಾದರೂ ಉಳಿದುಕೊಂಡಿವೆಯೇ ಎಂಬ ಬಗ್ಗೆ ತನಿಖಾ ಸಂಸ್ಥೆ ಶೋಧ ಕೈಗೊಂಡಿದೆ’ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ತಾಪಮಾನ ಬದಲಾವಣೆ: ಬಿಸಿಲಿನ ತಾಪ 6 ಪಟ್ಟು ಏರಿಕೆ ಸಾಧ್ಯತೆ’

ಬೀಜಿಂಗ್ (ಪಿಟಿಐ): ತಾಪಮಾನ ಬದಲಾವಣೆಯ ಪರಿಣಾಮ ಶತಮಾನದಂತ್ಯಕ್ಕೆ ಬಿಸಿಲಿನ ತಾಪ ಆರು ಪಟ್ಟು ಹೆಚ್ಚಾಗಲಿದ್ದು, ಬಿಸಿಲಿನ ತಾಪದಿಂದಾಗಿ ಮೃತಪಡುವವರ ಸಂಖ್ಯೆಯೂ ಏರಿಕೆಯಾಗಲಿದೆ ಎಂದು ಅಧ್ಯಯನ ವರದಿಯೊಂದು ಹೇಳಿದೆ.

ಉತ್ತರ ಕರೊಲಿನಾವಿ. ವಿಯ ಸಂಶೋಧಕರು ಅಧ್ಯಯನ ನಡೆಸಿದ್ದು, ವರದಿ ಸ್ಥಳೀಯ ಲ್ಯಾನ್ಸೆಂಟ್ ಪ್ಲಾನೆಟರಿ ಹೆಲ್ತ್ ನಿಯತಕಾಲಿಕದಲ್ಲಿ ಪ್ರಕಟವಾಗಿದೆ. ‘ರಾತ್ರಿಯೂ ತಾಪಮಾನ ಹೆಚ್ಚಲಿದ್ದು, ನಿದ್ರೆಯ ಮೇಲೂ ನಕಾರಾತ್ಮಕ ಪರಿಣಾಮ ಬೀರಲಿದೆ’ ಎಂದು ಉಲ್ಲೇಖಿಸಿದೆ.

ನಿದ್ರೆಯ ಪ್ರಮಾಣ ಕಡಿಮೆ ಆಗುವುದು ದೇಹದ ನಿರೋಧಕ ಶಕ್ತಿಯ ಮೇಲೂ ಪ್ರತಿಕೂಲ ಪರಿಣಾಮ ಬೀರಬಹುದು. ಇದರಿಂದಾಗಿ ಮಾನಸಿಕ ಆರೋಗ್ಯ, ಹೃದಯ ಸಂಬಂಧಿ ಸಮಸ್ಯೆಗಳು ಸೇರಿ ಇತರೆ ಅನಾರೋಗ್ಯಗಳು ಕಾಡಬಹುದು ಎಂದೂ ವರದಿ ಎಚ್ಚರಿಸಿದೆ.

ಕೋವಿಡ್: ಭಾರತೀಯ ಪ್ರವಾಸಿಗರಿಗೆ ನಿರ್ಬಂಧ ಹೇರಿದ ನೇಪಾಳ

ಕಠ್ಮಂಡು (ಪಿಟಿಐ): ಭಾರತದಿಂದ ಬಂದಿದ್ದ ನಾಲ್ವರಲ್ಲಿ ಕೋವಿಡ್ ದೃಢಪಟ್ಟಿರುವುದರಿಂದ ನೇಪಾಳವು ಭಾರತೀಯ ಪ್ರವಾಸಿಗರ ಮೇಲೆ ಮಂಗಳವಾರ ನಿರ್ಬಂಧ ಹೇರಿದೆ.

‘ಬೈತಡಿ ಜಿಲ್ಲೆಯ ಜುಲಾಘಾಟ್ ಗಡಿ ಮೂಲಕ ನೇಪಾಳ ಪ್ರವೇಶಿ ಸಿದ್ದ ಭಾರತದ ನಾಲ್ವರು ಪ್ರವಾಸಿಗ ರಿಗೆ ಕೋವಿಡ್ ತಗುಲಿರುವುದು ದೃಢ ಪಟ್ಟಿದೆ. ಭಾರತಕ್ಕೆ ಹಿಂತಿರುಗುವಂತೆ ಅವರಿಗೆ ಸೂಚಿಸಲಾಗಿದೆ’ ಎಂದು ಬೈತಡಿ ಜಿಲ್ಲೆ ಆರೋಗ್ಯ ಇಲಾಖೆಯ ಅಧಿಕಾರಿ ಬಿಪಿನ್ ಲೇಖಕ್ ತಿಳಿಸಿದ್ದಾರೆ.

ಪ್ರವಾಸೋದ್ಯಮ ಚೇತರಿಕೆಗೆ ಕ್ರಮ: ಸನತ್ ಜಯಸೂರ್ಯ

ಕೊಲಂಬೊ (ಪಿಟಿಐ): ಪ್ರವಾಸೋದ್ಯಮಕ್ಕೆ ಚೇತರಿಕೆ ಮತ್ತು ಭಾರತೀಯ ಪ್ರವಾಸಿಗರನ್ನು ಆಕರ್ಷಿಸಲು ರಾಮಾಯಣ ಕಥನ ಕೇಂದ್ರಿತ ಸ್ಥಳಗಳಿಗೆ ಆದ್ಯತೆ ನೀಡಲಾಗುವುದು ಎಂದು ಶ್ರೀಲಂಕಾ ಪ್ರವಾಸೋದ್ಯಮ ರಾಯಭಾರಿ ಸನತ್ ಜಯಸೂರ್ಯ ಹೇಳಿದರು.

ಪ್ರವಾಸೋದ್ಯಮ ಅಭಿವೃದ್ಧಿ ಕುರಿತಂತೆ ಸೋಮವಾರ ಭಾರತೀಯ ಹೈಕಮಿಷನ್ ಭೇಟಿಯಾಗಿ ಮಾತುಕತೆ ನಡೆಸಿದರು. ರಾಮಾಯಣದಲ್ಲಿ ಬರುವ ಸುಮಾರು 52 ಸ್ಥಳಗಳು ಶ್ರೀಲಂಕಾದಲ್ಲಿವೆ.


ಕ್ರಿಕೆಟ್: ನೇಪಾಳ ತಂಡಕ್ಕೆ ಪ್ರಭಾಕರ್ ಕೋಚ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಲ್‌ರೌಂಡರ್ ಮನೋಜ್ ಪ್ರಭಾಕರ್ ಅವರು ನೇಪಾಳ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದಾರೆ.

1984 – 1996ರ ಅವಧಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದ ಪ್ರಭಾಕರ್, 39 ಟೆಸ್ಟ್ ಮತ್ತು 130 ಏಕದಿನ ಪಂದ್ಯಗಳನ್ನು ಆಡಿದ್ದಾರೆ. ದೆಹಲಿ, ರಾಜಸ್ತಾನ ಮತ್ತು ಉತ್ತರ ಪ್ರದೇಶ ರಣಜಿ ತಂಡಗಳ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.



ಮಹಿಳಾ ವಿಭಾಗದಲ್ಲಿ ಕಂಚು ಗೆದ್ದ ಭಾರತ 'ಎ' ತಂಡದ ಆರ್. ವೈಶಾಲಿ, ಭಕ್ತಿ ಕುಲಕರ್ಣಿ, ತಾನಿಯಾ ಸಚ್‌ದೇವ್ ಮತ್ತು ಕೊನೇರು ಹಂಪಿ



ಕಾಮನ್ ವೆಲ್ತ್ ಗೇಮ್ಸ್‌ನಲ್ಲಿ ಭಾರತೀಯ ಸ್ಟೀಪ್ ಚೇಸರ್‌ಗೆ ವೀರೋಚಿತ ವಿಜಯದೊಂದಿಗೆ ಬೆಳ್ಳಿ ಪದಕ!

ಚೆಸ್ ಒಲಿಂಪಿಯಾಡ್; ಮುಕ್ತ ವಿಭಾಗದಲ್ಲಿ 'ಬಿ' ತಂಡಕ್ಕೆ ಮೂರನೇ ಸ್ಥಾನ

ಭಾರತ ತಂಡಗಳಿಗೆ ಕಂಚು

- ಮಹಿಳೆಯರ ವಿಭಾಗದಲ್ಲಿ 'ಎ' ತಂಡಕ್ಕೆ ಕಂಚು
- ಉಜ್ಬೆಕಿಸ್ತಾನ, ಉಕ್ರೇನ್‌ಗೆ ಚಿನ್ನ
- ಅರ್ಮೇನಿಯಾ, ಜಾರ್ಜಿಯ 'ರನ್ನರ್ಸ್'

ಮಹಾಬಲಿಪುರಂ (ಪಿಟಿಐ): ವಿಶ್ವದ ಶ್ರೇಷ್ಠ ಚೆಸ್ ತಂಡವನ್ನು ನಿರ್ಧರಿಸಲು ನಡೆದ ಚೆಸ್ ಒಲಿಂಪಿಯಾಡ್‌ನ ಮುಕ್ತ ವಿಭಾಗದಲ್ಲಿ ಭಾರತ 'ಬಿ' ತಂಡ ಹಾಗೂ ಮಹಿಳೆಯರ ವಿಭಾಗದಲ್ಲಿ ಭಾರತ 'ಎ' ತಂಡಗಳು ಕಂಚಿನ ಪದಕ ಪಡೆದುಕೊಂಡವು.

ಚೆನ್ನೈ ಸಮೀಪದ ಮಹಾಬಲಿಪುರಂನಲ್ಲಿ ಆಯೋಜಿಸಲಾಗಿದ್ದ 44ನೇ ಚೆಸ್ ಒಲಿಂಪಿಯಾಡ್‌ಗೆ ಮಂಗಳವಾರ ತೆರೆಬಿತ್ತು.

ಮುಕ್ತ ವಿಭಾಗದಲ್ಲಿ ಉಜ್ಬೆಕಿಸ್ತಾನ ಚಿನ್ನ ಹಾಗೂ ಅರ್ಮೇನಿಯಾ ಬೆಳ್ಳಿ ಜಯಿಸಿತು. ಮಹಿಳೆಯರ ವಿಭಾಗದಲ್ಲಿ ಉಕ್ರೇನ್ ಚಾಂಪಿಯನ್ ಆದರೆ, ಜಾರ್ಜಿಯ ಎರಡನೇ ಸ್ಥಾನ ಗಳಿಸಿತು.

ಭಾರತ 'ಬಿ' ತಂಡ 11ನೇ ಹಾಗೂ ಕೊನೆಯ ಸುತ್ತಿನ ಪಂದ್ಯದಲ್ಲಿ 3–1 ಪಾಯಿಂಟ್‌ಗಳಿಂದ ಜರ್ಮನಿ ತಂಡವನ್ನು ಮಣಿಸಿ ಒಟ್ಟು 18 ಪಾಯಿಂಟ್ ಕಲೆಹಾಕಿತು. 17 ಪಾಯಿಂಟ್ ಸಂಗ್ರಹಿಸಿದ ಭಾರತ 'ಎ' ತಂಡ ನಾಲ್ಕನೇ ಸ್ಥಾನ ಪಡೆಯಿತು. 'ಸಿ' ತಂಡ 31ನೇ ಸ್ಥಾನ ಗಳಿಸಿತು.

ಚೆಸ್ ಒಲಿಂಪಿಯಾಡ್‌ನ ಮುಕ್ತ ವಿಭಾಗದಲ್ಲಿ ಭಾರತಕ್ಕೆ ಎರಡನೇ ಬಾರಿ ಕಂಚು ಲಭಿಸಿದೆ. ಈ ಹಿಂದೆ 2014 ರಲ್ಲೂ ಇದೇ ಸಾಧನೆ ಮಾಡಿತ್ತು. ಕಂಚು ಗೆದ್ದ ತಂಡದಲ್ಲಿ ನಿಹಾಲ್ ಸರೀನ್, ಡಿ.ಗುಕೇಶ್, ಬಿ.ಅಧಿಬನ್, ಆರ್.ಪ್ರಗ್ನಾನಂದ ಮತ್ತು ರೌನಕ್ ಸಾಧ್ವಾನಿ ಇದ್ದಾರೆ.

ಉಜ್ಬೆಕಿಸ್ತಾನ ಕೊನೆಯ ಸುತ್ತಿನಲ್ಲಿ 2–1 ರಲ್ಲಿ ನೆದರ್ಲೆಂಡ್ಸ್‌ಗೆ ಸೋಲುಣಿಸಿ ಅಗ್ರಸ್ಥಾನಕ್ಕೇರಿ ಅಚ್ಚರಿ ಮೂಡಿಸಿತು. ಅರ್ಮೇನಿಯ 2.5–1.5 ರಲ್ಲಿ ಸ್ಪೇನ್ ತಂಡವನ್ನು ಮಣಿಸಿತು. ಉಜ್ಬೆಕಿಸ್ತಾನ ಮತ್ತು ಅರ್ಮೇನಿಯಾ ತಂಡಗಳು ತಲಾ 19 ಪಾಯಿಂಟ್ಸ್ ಸಂಗ್ರಹಿಸಿದವು. ಆದರೆ ಟೈಬ್ರೇಕರ್‌ನಲ್ಲಿ ಚಿನ್ನ ಉಜ್ಬೆಕಿಸ್ತಾನಕ್ಕೆ ಲಭಿಸಿತು.

ಮಹಿಳೆಯರ ವಿಭಾಗದಲ್ಲಿ ಅಗ್ರಶ್ರೇಯಾಂಕ ಹೊಂದಿದ್ದ ಕೊನೇರು ಹಂಪಿ ನೇತೃತ್ವದ ಭಾರತ 'ಎ' ಕೊನೆಯ ಸುತ್ತಿನಲ್ಲಿ 1–3 ರಲ್ಲಿ ಅಮೆರಿಕ ಎದುರು ಪರಾಭವಗೊಂಡಿತು. ಇದರಿಂದ ಚಿನ್ನ ಗೆಲ್ಲುವ ಅವಕಾಶ ಕೈತಪ್ಪಿಹೋಯಿತು.

ಯುದ್ಧದಿಂದ ನಲುಗಿರುವ ಉಕ್ರೇನ್ ದೇಶದ ತಂಡ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಯಿತು. ಉಕ್ರೇನ್ ಮತ್ತು ಜಾರ್ಜಿಯ 18 ಪಾಯಿಂಟ್ಸ್ ಗಳಿಸಿದವು. ಟೈಬ್ರೇಕರ್‌ನಲ್ಲಿ ಚಿನ್ನ ಉಕ್ರೇನ್ ಪಾಲಾಯಿತು.

ಭಾರತ, ಅಮೆರಿಕ ಮತ್ತು ಕಜಕಸ್ತಾನ ತಂಡಗಳು 17 ಪಾಯಿಂಟ್ಸ್ ಗಳಿಸಿದವು. ಟೈಬ್ರೇಕರ್‌ನಲ್ಲಿ ಇತರ ತಂಡಗಳನ್ನು ಹಿಂದಿಕ್ಕಿದ ಭಾರತಕ್ಕೆ ಮೂರನೇ ಸ್ಥಾನ ದೊರೆಯಿತು.

ಮಹಿಳೆಯರ ತಂಡದಲ್ಲಿ ಕೊನೇರು ಹಂಪಿ ಅಲ್ಲದೆ ಹರಿಕ ದ್ರೋಣವಳ್ಳಿ, ಆರ್.ವೈಶಾಲಿ, ಭಕ್ತಿ ಕುಲಕರ್ಣಿ, ತಾನಿಯಾ ಸಚ್‌ದೇವ್ ಅವರು ಆಡಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಭಾರತ 'ಬಿ' ತಂಡ ಎಂಟನೇ ಹಾಗೂ 'ಸಿ' ತಂಡ 17ನೇ ಸ್ಥಾನ ಪಡೆದವು.

ಚೆಸ್ ಒಲಿಂಪಿಯಾಡ್‌ನಲ್ಲಿ ಈ ಬಾರಿ ದಾಖಲೆ ಸಂಖ್ಯೆಯ ತಂಡಗಳು ಪಾಲ್ಗೊಂಡಿದ್ದವು. ಮುಕ್ತ ವಿಭಾಗದಲ್ಲಿ 188 ಹಾಗೂ ಮಹಿಳೆಯರ ವಿಭಾಗದಲ್ಲಿ 162 ತಂಡಗಳು ಇದ್ದವು.

'ಎ' ತಂಡಕ್ಕೆ 4ನೇ ಸ್ಥಾನ

ಅನುಭವಿ ಆಟಗಾರರನ್ನು ಒಳಗೊಂಡ ಭಾರತ 'ಎ' ತಂಡ ಮುಕ್ತ ವಿಭಾಗದಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡಿತು.

ಗ್ರ್ಯಾಂಡ್‌ಮಾಸ್ಟರ್‌ಗಳಾದ ವಿದಿತ್ ಗುಜರಾತಿ, ಪಿ.ಹರಿಕೃಷ್ಣ, ಅರ್ಜುನ್ ಎರಿಗೈಸಿ, ಎಸ್.ಎಲ್. ನಾರಾಯಣನ್ ಮತ್ತು ಕೃಷ್ಣನ್ ಶಶಿಕಿರಣ್ ಈ ತಂಡದಲ್ಲಿದ್ದರು. 'ಎ' ತಂಡ ಕೊನೆಯ ಪಂದ್ಯದಲ್ಲಿ ಅಮೆರಿಕ ಜತೆ 2–2 ರಲ್ಲಿ ಡ್ರಾ ಸಾಧಿಸಿತು.

ಮುಕ್ತ ವಿಭಾಗದಲ್ಲಿ ಅಗ್ರಶ್ರೇಯಾಂಕ ಹೊಂದಿದ್ದ ಅಮೆರಿಕ ನಿರೀಕ್ಷಿತ ಪ್ರದರ್ಶನ ನೀಡುವಲ್ಲಿ ವಿಫಲವಾಗಿ ಐದನೇ ಸ್ಥಾನ ಗಳಿಸಿತು.



ಕಂಚು ಗೆದ್ದ ಭಾರತ 'ಬಿ' ತಂಡದ ಸದಸ್ಯರಾದ ಆರ್.ಪ್ರಗ್ನಾನಂದ, ಬಿ.ಅಧಿಬನ್, ರೌನಕ್ ಸಾಧ್ವಾನಿ, ನಿಹಾಲ್ ಸರೀನ್ ಮತ್ತು ಡಿ.ಗುಕೇಶ್ –ಫಿಡೆ ಚಿತ್ರ

ಪಾಯಿಂಟ್ ಪಟ್ಟಿ (ಅಗ್ರ 5 ಸ್ಥಾನ)

ಸ್ಥಾನ	ತಂಡ	ಪಾಯಿಂಟ್	ಟೈಬ್ರೇಕ್
ಮುಕ್ತ ವಿಭಾಗ			
1	ಉಜ್ಬೆಕಿಸ್ತಾನ	19	435
2	ಅರ್ಮೇನಿಯಾ	19	382.5
3	ಭಾರತ 'ಬಿ'	18	427.5
4	ಭಾರತ 'ಎ'	17	409
5	ಅಮೆರಿಕ	17	352
ಮಹಿಳೆಯರ ವಿಭಾಗ			
1	ಉಕ್ರೇನ್	18	413.5
2	ಜಾರ್ಜಿಯ	18	392
3	ಭಾರತ 'ಎ'	17	396.5
4	ಅಮೆರಿಕ	17	390
5	ಕಜಕಸ್ತಾನ	17	352

ಅಪಘಾತ: ಅಂಪೈರ್ ಕರ್ಜನ್ ಸಾವು

ಕೇಪ್‌ಟೌನ್ (ಪಿಟಿಐ): ಕ್ರಿಕೆಟ್ ಅಂಪೈರಿಂಗ್ ದಿಗ್ಗಜ, ದಕ್ಷಿಣ ಆಫ್ರಿಕಾದ ರೂಡಿ ಕರ್ಜನ್ (73) ಮಂಗಳವಾರ ಬೆಳಿಗ್ಗೆ ಸಂಭವಿಸಿದ ಕಾರು ಅಪಘಾತದಲ್ಲಿ ಮೃತಪಟ್ಟಿದ್ದಾರೆ.


ಅವರಿಗೆ ಪತ್ನಿ ಹಾಗೂ ನಾಲ್ವರು ಮಕ್ಕಳು ಇದ್ದಾರೆ.

1990ರಿಂದ 2010ರವರೆಗೆ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅಂಪೈರ್ ಹಾಗೂ ರೆಫರಿಯಾಗಿ ಕಾರ್ಯನಿರ್ವಹಿಸಿದ್ದರು. ಒಟ್ಟು 400ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಲ್ಲಿ ಕಾರ್ಯನಿರ್ವಹಿಸಿದ್ದ ಅವರು ಶ್ರೇಷ್ಠ ಅಂಪೈರ್‌ಗಳಲ್ಲಿ ಒಬ್ಬರಾಗಿದ್ದರು.

'ವಿಶ್ವವಿಖ್ಯಾತ ಅಂಪೈರ್ ರೂಡಿ ಕರ್ಜನ್ ಮತ್ತು ಇನ್ನೂ ಮೂವರು ವ್ಯಕ್ತಿಗಳು ಮಂಗಳವಾರ ಬೆಳಿಗ್ಗೆ ಸಂಭವಿಸಿದ ಕಾರು ಅಪಘಾತದಲ್ಲಿ ದುರ್ಮರಣಕ್ಕೀಡಾಗಿದ್ದಾರೆ. ರಿವರ್ಸ್‌ಡೇಲ್ ಬಳಿ ಈ ಅವಘಡ ಸಂಭವಿಸಿದೆ. ಕೇಪ್‌ಟೌನ್ ನಲ್ಲಿ ವಾರಾಂತ್ಯದ ಗಾಲ್ಫ್ ಗೆ ತೆರಳಿದ್ದ ಅವರು ನೆಲ್ಸನ್ ಮಂಡೇಲಾ ಬೇ ನಲ್ಲಿರುವ ತಮ್ಮ ನಿವಾಸಕ್ಕೆ ಮರಳುತ್ತಿದ್ದರು' ಎಂದು ಅಲ್ಗೋವಾ ಎಫ್‌ಎಂ ವರದಿ ಮಾಡಿದೆ.

2002ರಲ್ಲಿ ಅವರು ಐಸಿಸಿ ಎಲೀಟ್ ಪ್ಯಾನೆಲ್‌ನಲ್ಲಿ ಸ್ಥಾನ ಪಡೆದಿದ್ದರು. ಎಂಟು ವರ್ಷಗಳ ಕಾಲ ಅವರು ತಮ್ಮ ಸ್ಥಾನ ಕಾಪಾಡಿಕೊಂಡಿದ್ದರು.

'ನನ್ನ ತಂದೆ ತಮ್ಮ ಕೆಲವು ಸ್ನೇಹಿತರೊಂದಿಗೆ ಗಾಲ್ಫ್ ಆಡಲು ತೆರಳಿದ್ದರು. ಅವರು ಸೋಮವಾರವೇ ಮನೆಗೆ ಮರಳಬೇಕಿತ್ತು. ಆದರೆ, ಇನ್ನೊಂದು ಸುತ್ತು ಗಾಲ್ಫ್ ಆಡುವ ಉದ್ದೇಶದಿಂದ ಅಲ್ಲಿಯೇ ಉಳಿದಿದ್ದರು. ಮಂಗಳವಾರ ಮರಳುತ್ತಿದ್ದರು' ಎಂದು ರೂಡಿ ಅವರ ಮಗ ಕರ್ಜನ್ ಜೂನಿಯರ್ ಹೇಳಿದ್ದಾರೆ.



ರೂಡಿ ಕರ್ಜನ್ –ಟ್ವಿಟರ್ ಚಿತ್ರ

ರೂಡಿ ಕರ್ಜನ್ ವೃತ್ತಿಜೀವನ

ಮಾದರಿ	ಪಂದ್ಯ	ಅಂಪೈರ್	ಟಿ.ವಿ. ಅಂಪೈರ್
ಟೆಸ್ಟ್	128	108	20
ಏಕದಿನ	250	209	41
ಟಿ20	19	14	5
ಪ್ರಥಮದರ್ಜೆ	28	27	1



ವಿದ್ಯಾ ಶಿಲ್ಪ ಅಕಾಡೆಮಿಯ ಹರ್ಷ (ಬಲ) ಅವರು ಸೇಂಟ್ ಜೋಸೆಫ್ಸ್ ಹೈಸ್ಕೂಲ್ ವಿರುದ್ಧದ ಪಂದ್ಯದಲ್ಲಿ ಚೆಂಡಿನ ಮೇಲೆ ನಿಯಂತ್ರಣಕ್ಕೆ ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ

ಹಾಕಿ: ಎಫ್‌ಎಪಿಎಸ್‌ಗೆ ಜಯ

ಬೆಂಗಳೂರು: ಪಿ.ಅರ್ಜುನ್ ಅವರ ಎರಡು ಗೋಲುಗಳ ನೆರವಿನಿಂದ ಫ್ರಾಂಕ್ ಆಂಥೋಣಿ ಪಬ್ಲಿಕ್ ಸ್ಕೂಲ್ (ಎಫ್‌ಎಪಿಎಸ್) ತಂಡ ಎಸ್‌ಜೆಬಿಎಚ್‌ಎಸ್ ಸೆಂಟಿನರಿ ಶೀಲ್ಡ್ ಹಾಕಿ ಟೂರ್ನಿಯಲ್ಲಿ ಜಯ ಸಾಧಿಸಿತು.

ಶಾಂತಿನಗರ ಹಾಕಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಎಫ್‌ಎಪಿಎಸ್ 2–1 ರಲ್ಲಿ ಗ್ರೀನ್‌ವುಡ್ ತಂಡವನ್ನು ಮಣಿಸಿತು.

ಇನ್ನೊಂದು ಪಂದ್ಯದಲ್ಲಿ ಚಿನ್ಮಯ ವಿದ್ಯಾಲಯ ಮತ್ತು ಸೇಂಟ್ ಜೋಸೆಫ್ಸ್ ಬಾಲಕರ ಹೈಸ್ಕೂಲ್ ತಂಡ 1–1 ರಲ್ಲಿ ಡ್ರಾ ಮಾಡಿಕೊಂಡವು.

ಫಾದರ್ ಎರಿಕ್ ವಾಜ್ ಸ್ಮಾರಕ ಹಾಕಿ ಟೂರ್ನಿಯ ಪಂದ್ಯದಲ್ಲಿ ವಿದ್ಯಾಶಿಲ್ಪ ಅಕಾಡೆಮಿ 1–0 ರಲ್ಲಿ ಸೇಂಟ್ ಜೋಸೆಫ್ಸ್ ಹೈಸ್ಕೂಲ್ ತಂಡವನ್ನು ಸೋಲಿಸಿತು.

ಚೆಟ್ರಿ, ಮನೀಷಾಗೆ ಗೌರವ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ ಅವರು ಎಐಎಫ್‌ಎಫ್ 'ವರ್ಷದ ಫುಟ್‌ಬಾಲ್ ಆಟಗಾರ' ಗೌರವ ಪಡೆದುಕೊಂಡಿದ್ದಾರೆ. ಮಹಿಳೆಯರ ವಿಭಾಗದ ಪ್ರಶಸ್ತಿ ಮನೀಷಾ ಕಲ್ಯಾಣ್ ಪಾಲಾಗಿದೆ.

ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) 2021–22ರ ಸಾಲಿನ ಪ್ರಶಸ್ತಿಯನ್ನು ಮಂಗಳವಾರ ಪ್ರಕಟಿಸಿತು. ಚೆಟ್ರಿ ಅವರು ಏಳನೇ ಬಾರಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಇತರ ಪ್ರಶಸ್ತಿ: ಉದಯೋನ್ಮುಖ ಆಟಗಾರ: ವಿಕ್ರಮ್ ಪ್ರತಾಪ್ ಸಿಂಗ್, ಉದಯೋನ್ಮುಖ ಆಟಗಾರ್ತಿ: ಮಾರ್ಟಿನಾ ತಾಕ್‌ಚೊಮ್, ಅತ್ಯುತ್ತಮ ರೆಫರಿ: ಕ್ರಿಸ್ಟಲ್ ಜಾನ್, ಅತ್ಯುತ್ತಮ ಸಹಾಯಕ ರೆಫರಿ: ಉಜ್ವಲ್ ಹಲ್ದೆರ್